# ಜನತಾವಾಣಿ


ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಭಾನುವಾರ, ಮಾರ್ಚ್ 21, 2021

ಸಂಪುಟ : 47 ಸಂಚಿಕೆ : 321 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com







## ಆರೆಸ್ಸೆಸ್ ಸರಕಾರ್ಯವಾಹರಾಗಿ ದತ್ತಾತ್ರೇಯ ಹೊಸಬಾಳೆ ಆಯ್ಕೆ

ಬೆಂಗಳೂರು, ಮಾ. 20- ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಎರಡನೇ ಅತಿ ಉನ್ನತ ಹುದ್ದೆಯಾದ ಸರಕಾರ್ಯವಾಹಕ್ಕೆ ಕರ್ನಾಟಕದ ದತ್ತಾತ್ರೇಯ ಹೊಸಬಾಳೆ



ಆಯ್ಕೆಯಾಗಿದ್ದಾರೆ. ಇದುವರೆಗೂ ಅವರು ಸಹ - ಸರಕಾರ್ಯವಾಹ (ಜಂಟಿ ಪ್ರಧಾನ ಕಾರ್ಯದರ್ಶಿ) ಹುದ್ದೆಯಲ್ಲಿದ್ದರು.

ಬೆಂಗಳೂರಿನ ಹೊರವಲದ ಚೆನ್ನೇನಹಳ್ಳಿ ಜನ ಸೇವಾ ವಿದ್ಯಾಕೇಂದ್ರದಲ್ಲಿ ನಡೆಯುತ್ತಿರುವ ಅಖಿಲ ಭಾರತೀಯ ಪ್ರತಿನಿಧಿ ಸಭಾ (ಎಬಿಪಿಎಸ್) ದಲ್ಲಿ ನಡೆದ ಚುನಾವಣೆಯಲ್ಲಿ ಇವರು ಆಯ್ಕೆಯಾಗಿದ್ದಾರೆ. ಆರೆಸ್ಸೆಸ್ ನಲ್ಲಿ ಸರಸಂಘಚಾಲಕ್ ಮತ್ತು ಸರಕಾರ್ಯವಾಹ ಅತ್ಯುನ್ನತ ಹುದ್ದೆ ಹಾಗೂ ಜವಾಬ್ದಾರಿಯಾಗಿದೆ. ಡಾ. ಮೋಹನ್ ಭಾಗವತ್ ಅವರು ಸರ ಸಂಘ ಚಾಲಕರಾಗಿದ್ದಾರೆ. ಭೈಯ್ಯಾಜಿ (2ನೇ ಪುಟಕ್ಕೆ)

## ಲಸಿಕೆಯಿಂದ ಹತ್ತು ತಿಂಗಳವರೆಗೆ ಉತ್ತಮ ರಕ್ಷಣೆ

ನವದೆಹಲಿ, ಮಾ. 20 – ಕೊರೊನಾ ಲಸಿಕೆಯಿಂದ ಎಂಟರಿಂದ 10 ತಿಂಗಳವರೆಗೆ ಸೋಂಕಿನಿಂದ ಉತ್ತಮ ರಕ್ಷಣೆ ಪಡೆಯಲು ಸಾಧ್ಯವಾಗಲಿದೆ ಎಂದು ಎ.ಐ.ಐ.ಎಂ.ಎಸ್. ನಿರ್ದೇಶಕ ರಣದೀಪ್ ಗುಲೇರಿಯ ತಿಳಿಸಿದ್ದಾರೆ.

ಲಸಿಕೆಗಳಿಂದ ಯಾವುದೇ ಪ್ರಮುಖ ಅಡ್ಡ ಪರಿಣಾಮಗಳೂ ಕಂಡು ಬಂದಿಲ್ಲ ಎಂದೂ ಅವರು ಹೇಳಿದ್ದಾರೆ.

ಐ.ಪಿ.ಎಸ್. (ಸೆಂಟ್ರಲ್) ಅಸೋಸಿಯೇಷನ್ ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡುತ್ತಿದ್ದ ಅವರು, ಕೊರೊನಾ ಲಸಿಕೆಯಿಂದ ಎಂಟರಿಂದ ಹತ್ತು ತಿಂಗಳು ಹಾಗೂ ಇನ್ನೂ ಹೆಚ್ಚಿನ ಅವಧಿಗೆ ರಕ್ಷಣೆ ಸಿಗಬಹುದಾಗಿದೆ ಎಂದು ತಿಳಿಸಿದ್ದಾರೆ.

ಜನರು ಸೋಂಕು ಮುಗಿದಿದೆ, ಈಗ ಕೊರೊನಾ ಮಾರ್ಗಸೂಚಿ ಪಾಲಿಸಬೇಕಿಲ್ಲ ಎಂದು ಭಾವಿಸಿರುವುದೇ ಸೋಂಕು ಹರಡಲು ಪ್ರಮುಖ ಕಾರಣವಾಗಿದೆ ಎಂದಿರುವ ಅವರು, ಜನರು ಅನಗತ್ಯವಾದ (2ನೇ ಪುಟಕ್ಕೆ)

# ಮಲ್ಲಿಗೆರೆ ಜನತೆಗೆ ಹಕ್ಕುಪತ್ರ ನೀಡಿ

### ಜಿಲ್ಲಾಡಳಿತದ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಶಾಸಕ ಮಾಡಾಳ್



ದಾವಣಗೆರೆ. ಮಾ.20 - ತಿಪ್ಪಗೊಂಡನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಮಲ್ಲಿಗೆರೆಯ ಅನೇಕ ಗ್ರಾಮಸ್ಥರು ಸುಮಾರು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದು, ಇವರಿಗೆ ಹಕ್ಕು ಪತ್ರ ನೀಡಿಲ್ಲ. ಯಾವಾಗ ತಮ್ಮನ್ನು ಅರಣ್ಯ ಇಲಾಖೆಯವರು, ಪೊಲೀಸರು ಒಕ್ಕಲೆಬ್ಬಿಸುತ್ತಾರೋ ಎಂಬ ಭಯದಲ್ಲಿ ಜನರು ಇದ್ದಾರೆ. ಇವರಿಗೆ ಹಕ್ಕು ಪತ್ರ ನೀಡಿದಲ್ಲಿ ನೆಮ್ಮದಿಯಿಂದ ಬದುಕುತ್ತಾರೆ ಎಂದು ಚನ್ನಗಿರಿ ಶಾಸಕ ಕೆ.ಮಾಡಾಳ್ ವಿರೂಪಾಕ್ಷಪ್ಪ ಜಿಲ್ಲಾಡಳಿತಕ್ಕೆ ಸೂಚಿಸಿದರು.

ಶನಿವಾರ ಚನ್ನಗಿರಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿ ಮತ್ತು ರಾಜಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿ ಗ್ರಾಮಗಳಲ್ಲಿ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ನೇತೃತ್ವದ ಅಧಿಕಾರಿಗಳ ತಂಡದ ಗ್ರಾಮ ವಾಸ್ತವ್ಯ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

**ಗ್ರಾಮ ವಾಸ್ತವ್ಯದ ವೇಳೆ 410 ವಿವಿಧ ರೀತಿ ಅರ್ಜಿ ಸ್ವೀಕಾರ**

ಲಂಬಾಣಿ, ಕುರುಬ, ಲಿಂಗಾಯತ, ಪ್ರವರ್ಗ-1 ಮತ್ತು ಮುಸ್ಲಿಂ ಸಮುದಾಯಕ್ಕೆ ಸೇರಿದ ಒಟ್ಟು 149 ಜನರು ಹಕ್ಕು ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಈ ಹಿಂದೆ ಇದು ಗೋಮಾಳವಾಗಿದ್ದು, ಅರಣ್ಯ ಇಲಾಖೆಯವರು ಇಲ್ಲಿ ಅಕೇಶಿಯಾ ಇನ್ನಿತರೆ ಗಿಡ ಮರ ಬೆಳೆದು ತಮ್ಮ ಇಲಾಖೆಗೆ ಸೇರಿಸಿಕೊಂಡಿದ್ದು ಈಗ ಇದು ಮೈನರ್ ಅರಣ್ಯ ಇಲಾಖೆಗೆ ಸೇರಿದೆ. ಇವರಿಗೆ ಹಕ್ಕು ಪತ್ರ ನೀಡಲು ಕೇಂದ್ರದ ನೀತಿಯನ್ವಯ ದಾಖಲಾತಿಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕೇಳುತ್ತಿದ್ದಾರೆ ಎಂದರು.

ಸುಮಾರು 112 ವಯೋಮಾನದ ರಾಮಾನಾಯ್ಕ ಎಂಬ ವಯೋವೃದ್ದರು ಮೊದಲು ಇಲ್ಲಿ ಊರು ಇತ್ತು ಎಂದು ದಾಖಲೆ ನೀಡಿದ್ದಾರೆ. ಇದರ ಆಧಾರದ ಮೇಲೆ ಹಕ್ಕು ಪತ್ರ ನೀಡಬೇಕೆಂದರು.

ಈ ಭಾಗದಲ್ಲಿ ಸುಮಾರು 68 ಜನರು ಮನೆ ಕಟ್ಟಿಕೊಂಡು ಹಲವಾರು ವರ್ಷಗಳಿಂದ ವಾಸಿಸುತ್ತಿದ್ದಾರೆ. ಈ ಮನೆಗಳು ಕೂಡ ಅರಣ್ಯ ವ್ಯಾಪ್ತಿಯಲ್ಲಿ ಬರಲಿವೆ ಎಂಬ ಕಾರಣಕ್ಕೆ ಈ ಮನೆಗಳಿಗೆ ಇದುವರೆಗೂ ಖಾತೆ ನೀಡಿಲ್ಲ. ಜಿಲ್ಲಾಧಿಕಾರಿಗಳಿಗೆ ಇದನ್ನು ಡಿನೋಟಿಫೈ ಮಾಡುವ ಅಧಿಕಾರ ಇದ್ದು, ಹಿರಿಯರ ದಾಖಲೆಗಳನ್ನು ಕೇಳಿಕೊಂಡು ಅರಣ್ಯ ಭೂಮಿಯನ್ನು ಡಿನೋಟಿಫೈ ಮಾಡಿ ಇವರಿಗೆ ಇ-ಸ್ವತ್ತು ಆಗುವಂತೆ ಸಹಕರಿಸಬೇಕೆಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಅನಗತ್ಯವಾಗಿ ತಾಲ್ಲೂಕು ಮತ್ತು ಜಿಲ್ಲೆಯ ಕಚೇರಿಗಳಿಗೆ ಜನರು ಅಲೆದಾಡುವುದನ್ನು (2ನೇ ಪುಟಕ್ಕೆ)

# ತಿಂಗಳಿಗೆ 100 ಕೋಟಿ ರೂ. ಪೊಲೀಸ್ 'ಹಫ್ತಾ'

### ಮಹಾರಾಷ್ಟ್ರ ಗೃಹ ಸಚಿವರ ವಿರುದ್ಧ ಮುಂಬೈ ಮಾಜಿ ಪೊಲೀಸ್ ಮುಖ್ಯಸ್ಥ ಸಿಂಗ್ ಆರೋಪ

ಮುಂಬೈ, ಮಾ. 20- ಪೊಲೀಸ್ ಅಧಿಕಾರಿಗಳು ಮುಂಬೈನ ಬಾರ್ ಹಾಗೂ ಹೋಟೆಲ್‌ಗಳಿಂದ ಪ್ರತಿ ತಿಂಗಳು ಕನಿಷ್ಠ 100 ಕೋಟಿ ರೂ. ವಸೂಲಿ ಮಾಡುವಂತೆ ಗೃಹ ಸಚಿವ ಅನಿಲ್ ದೇಶ್‌ಮುಖ್ ಬಯಸಿದ್ದರು ಎಂದು ಮುಂಬೈ ಮಾಜಿ ಪೊಲೀಸ್ ಆಯುಕ್ತ ಪರಮ್ ಬೀರ್ ಸಿಂಗ್ ಆರೋಪಿಸಿದ್ದಾರೆ.

ಹಿರಿಯ ಐ.ಪಿ.ಎಸ್. ಅಧಿಕಾರಿಯನ್ನು ಮಾರ್ಚ್ 17ರಂದು ಹೋಂ ಗಾರ್ಡ್‌ಗೆ ವರ್ಗಾಯಿಸಲಾಗಿತ್ತು. ಉದ್ಯಮಿ ಮುಕೇಶ್ ಅಂಬಾನಿ ಅವರ ಅಂಟಿಲಿಯಾ ಮನೆಯ ಬಳಿ ಬಾಂಬ್ ಬೆದರಿಕೆ ಉಂಟಾದ ಪ್ರಕರಣದಲ್ಲಿ ಪೊಲೀಸ್ ಅಧಿಕಾರಿ ಸಚಿನ್ ವಜೆ ಅವರನ್ನು ಎನ್.ಐ.ಎ. ಬಂಧಿಸಿದ ನಂತರ ಸಿಂಗ್ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿತ್ತು

ರಾಜಕೀಯ ಸಂಚಲನಕ್ಕೆ ಕಾರಣವಾಗಿರುವ ಈ ಪತ್ರದ ಬಗ್ಗೆ ಪ್ರತಿಕ್ರಿಯಿಸಿರುವ ಎನ್.ಸಿ.ಪಿ.ಯ ದೇಶಮುಖ್, ವಾಜೆ ಪ್ರಕರಣದಲ್ಲಿ ತಮ್ಮನ್ನು ಉಳಿಸಿಕೊಳ್ಳಲು ಸಿಂಗ್ ಈ ರೀತಿಯ ಸುಳ್ಳು ಆರೋಪ ಮಾಡುತ್ತಿದ್ದಾರೆ. ಅವರ ವಿರುದ್ಧ ಮಾನನಷ್ಟ ಪ್ರಕರಣ ದಾಖಲಿಸುವುದಾಗಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಎಂಟು ಪುಟಗಳ ಪತ್ರ ಬರೆದಿರುವ ಸಿಂಗ್, ದೇಶಮುಖ್ ಅವರು ಪೊಲೀಸ್ ಅಧಿಕಾರಿಗಳನ್ನು ತಮ್ಮ ಮನೆಗೆ ಕರೆಸಿಕೊಂಡು ಹಣ ವಸೂಲಿಯ ಗುರಿ ನೀಡುತ್ತಿದ್ದರು. ಬಾರ್, ರೆಸ್ಟೋರೆಂಟ್ ಮತ್ತಿತರೆ ತಾಣಗಳಿಂದ ಹಣ ವಸೂಲಿ ಮಾಡಲಾಗುತ್ತಿತ್ತು ಎಂದಿದ್ದಾರೆ.

ತಡರಾತ್ರಿ ಹೇಳಿಕೆ ನೀಡಿರುವ ಮುಖ್ಯಮಂತ್ರಿಗಳ ಕಚೇರಿ, ಠಾಕ್ರೆ ಅವರಿಗೆ ಬಂದಿರುವ ಪತ್ರ ಸಹಿ ಹಾಕಿಲ್ಲ.

### ಇ-ಮೇಲ್ ಬಗ್ಗೆ ಅನುಮಾನ

**ಪರಮ್ ಬೀರ್ ಸಿಂಗ್ ಅವರು ಮಧ್ಯಾಹ್ನ 4.37ರ ವೇಳೆಗೆ ಕಳಿಸಿರುವ ಇ-ಮೇಲ್, ಬೇರೆ ವಿಳಾಸದಿಂದ ಬಂದಿದೆ. ಇದು ಅವರ ಅಧಿಕೃತ ಇ-ಮೇಲ್ ಅಲ್ಲ ಹಾಗೂ ಅದರಲ್ಲಿ ಸಹಿ ಇಲ್ಲ. ಹೊಸ ಇ-ಮೇಲ್ ಬಗ್ಗೆ ಪರಿಶೀಲಿಬೇಕಿದೆ. ಗೃಹ ಸಚಿವಾಲಯ ಈ ಬಗ್ಗೆ ಸಿಂಗ್ ಅವರನ್ನು ಸಂಪರ್ಕಿಸುವ ಯತ್ನದಲ್ಲಿದೆ ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಕಚೇರಿ ತಿಳಿಸಿದೆ.**

ಇದು ಅಧಿಕೃತ ಇ-ಮೇಲ್ ಐ.ಡಿ.ಯಿಂದ ಬಂದಿಲ್ಲ. ಈ ಬಗ್ಗೆ ಪರಿಶೀಲಿಸಲು ಪರಮ್ ಬೀರ್‌ಸಿಂಗ್ ಅವರನ್ನು ಸಂಪರ್ಕಿಸಲಾಗುತ್ತಿದೆ ಎಂದು ತಿಳಿಸಿದೆ.

ಮುಂಬೈ ಪೊಲೀಸ್ ಅಪರಾಧಿಕ ಗುಪ್ತಚರ ದಳದ ನೇತೃತ್ವ ವಹಿಸಿದ್ದ ವಾಜೆ ಅವರನ್ನು ದೇಶ್‌ಮುಖ್ ಕಳೆದ ಕೆಲ ತಿಂಗಳಲ್ಲಿ ಹಲವು ಬಾರಿ ಕರೆಸಿಕೊಂಡು ಹಣ ವಸೂಲಿಗೆ ಸಹಕರಿಸುವಂತೆ ಸೂಚನೆ ನೀಡಿದ್ದರು ಎಂದಿದ್ದಾರೆ. ಪ್ರತಿ ತಿಂಗಳು 100 ಕೋಟಿ ರೂ. ಸಂಗ್ರಹದ ಗುರಿ ಇದೆ. ಇದರಲ್ಲಿ ಅರ್ಧದಷ್ಟನ್ನು 1750 ಬಾರ್, ರೆಸ್ಟೋರೆಂಟ್ ರೀತಿಯ ತಾಣಗಳಿಂದ ವಸೂಲಿ ಮಾಡಬೇಕು ಎಂದು ತಿಳಿಸಲಾಗಿತ್ತು.

ದಾದ್ರಾ ಮತ್ತು ನಗರ್ ಹವೇಲಿಯ ಸಂಸದ ಮೋಹನ್ ದೇಲ್ಕರ್ ಅವರು ಮುಂಬೈ ಹೋಟೆಲ್‌ನಲ್ಲಿ ಕಳೆದ ತಿಂಗಳು ನಿಧನರಾದ ನಂತರ, (2ನೇ ಪುಟಕ್ಕೆ)

## ದೂಡಾ: 159.17 ಕೋಟಿ ರೂ. ಉಳಿತಾಯ ಬಜೆಟ್ ಮಂಡನೆ

ದಾವಣಗೆರೆ, ಮಾ.20- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ಯೋಜಿತ ಆಯವ್ಯಯ ಸಭೆ ಶನಿವಾರ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಹಾಗೂ ಶಾಸಕ ಎಸ್.ಎ.ರವೀಂದ್ರನಾಥ್ ಅವರ ಉಪಸ್ಥಿತಿಯಲ್ಲಿ ನಡೆಯಿತು.

ಆಯುಕ್ತ ಬಿ.ಟಿ. ಕುಮಾರಸ್ವಾಮಿ 159.17 ಕೋಟಿ ರೂ. ಗಳ ಆದಾಯದ ನಿರೀಕ್ಷೆಯಲ್ಲಿ 156.18 ಕೋಟಿ ರೂ. ಗಳ ನಿರೀಕ್ಷಿತ ವೆಚ್ಚದ ಆಯ-ವ್ಯಯ ಮಂಡಿಸಿದರು.

ಆಯ-ವ್ಯಯದಲ್ಲಿ ಪ್ರಮುಖವಾಗಿ ಕುಂದುವಾಡ ಗ್ರಾಮದ ವಿವಿಧ ಸರ್ವೇ ನಂಬರ್‌ಗಳಲ್ಲಿ ಹೊಸ ಬಡಾವಣೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದ್ದು, ಜಮೀನು ಭೂ ಖರೀದಿ ಮಾಡಿಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 60 ಕೋಟಿ ರೂ. ಮಾಸ್ಟರ್ ಪ್ಲಾನ್ ನಲ್ಲಿ ಕಾಯ್ದಿರಿಸಿರುವ ಉದ್ಯಾನವನ ಪ್ರದೇಶದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಮತ್ತು ರಾಷ್ಟ್ರೀಯ ಉದ್ಯಾನವನ ಮತ್ತು (2ನೇ ಪುಟಕ್ಕೆ)

## ವಿವೇಕ ಕಲಿಸುವುದು ಶಿಕ್ಷಣದ ಅಂತಿಮ ಉದ್ದೇಶ

ದಾವಣಗೆರೆ, ಮಾ. 20 - ಅಕ್ಷರ ಹಾಗೂ ಜ್ಞಾನಕ್ಕಿಂತ ಶ್ರೇಷ್ಠವಾದ ವಿವೇಕ ಕಲಿಸುವುದು ಶಿಕ್ಷಣದ ಅಂತಿಮ ಉದ್ದೇಶವಾಗಬೇಕು ಎಂದು ವಾಗ್ಮಿ ಪ್ರೊ. ಕೃಷ್ಣೇಗೌಡ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಸೋಮೇಶ್ವರ ಶಿಕ್ಷಣ ಸಂಸ್ಥೆಯ ಸೋಮೇಶ್ವರೋತ್ಸವ - 2021 ಅಂಗವಾಗಿ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಭಾವಗೀತೆಗಳ ಭಾವಯಾನ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

**ಸೋಮೇಶ್ವರೋತ್ಸವದಲ್ಲಿ ವಾಗ್ಮಿ ಪ್ರೊ.ಕೃಷ್ಣೇಗೌಡ**

ದೇಶದ ಹಣೆಬರಹ ಶಾಲಾ ಕೋಣೆಗಳಲ್ಲಿ ನಿರ್ಧಾರವಾಗುತ್ತದೆ ಎಂದು ಸ್ವಾಮಿ ವಿವೇಕಾನಂದ ಹೇಳಿದ್ದರು. ಶಿಕ್ಷಣ ಅಷ್ಟೊಂದು ಮಹತ್ವ ಪಡೆದಿದೆ. ಆದರೆ, ಪಾಶ್ಚಾತ್ಯ ಜಗತ್ತು ಭಾವಿಸಿರುವಂತೆ ಶಿಕ್ಷಣ ಎಂದರೆ ಅಕ್ಷರ ಜ್ಞಾನ ಅಲ್ಲ ಎಂದವರು ತಿಳಿಸಿದರು.

ಮೊಬೈಲ್‌ನಿಂದಾಗಿ ಬೆರಳ ತುದಿಯಲ್ಲಿ ವಿಶ್ವದ ಸಾಕಷ್ಟು ಮಾಹಿತಿ ಸಿಗುತ್ತದೆ. ಆದರೆ, ಈ ಮಾಹಿತಿಯೇ ಜ್ಞಾನವಲ್ಲ. ಜ್ಞಾನಕ್ಕೂ ಮೀರಿದ್ದು ವಿವೇಕ. ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಅಂತಃಶಕ್ತಿಯೇ ವಿವೇಕ. ಅಂತಹ ವಿವೇಕ ಒದಗಿಸುವುದೇ ಶಿಕ್ಷಣದ ಅಂತಿಮ ಗುರಿಯಾಗಬೇಕು ಎಂದವರು ತಿಳಿಸಿದರು. ಶಿಕ್ಷಕರು ಮಕ್ಕಳಿಗೆ ಅಂಕ ಗಳಿಸುವುದಷ್ಟನ್ನೇ ಕಲಿಸಿದರೆ ಸಾಲದು. ಸಮರ್ಪಿತ ಭಾವದಿಂದ ಶಿಕ್ಷಣ ಎಂಬ ಯಜ್ಞದಲ್ಲಿ ಭಾಗಿಯಾಗಬೇಕು ಎಂದವರು ತಿಳಿಸಿದರು.

ಅಂಕ ಗಳಿಕೆಯೇ ಶಿಕ್ಷಣ ಅಲ್ಲ. ಹಾಗೆಂದು ಅಂಕ (2ನೇ ಪುಟಕ್ಕೆ)


|| ಶ್ರೀ ಸಕ್ರಿ ಬಸವೇಶ್ವರ ಪ್ರಸನ್ನ ||

50ನೇ ವಿವಾಹ ವಾರ್ಷಿಕೋತ್ಸವದ ಶುಭ ಹಾರೈಕೆಗಳು



ಬಾತಿ ಪಾಲ್ದಾರ್ ಗೌಡ್ರು ಶ್ರೀ ಕೆ.ಜಿ. ರೇವಣಸಿದ್ದಪ್ಪ ಮತ್ತು ಶ್ರೀಮತಿ ಸರೋಜಮ್ಮ ರೇವಣಸಿದ್ದಪ್ಪ

ಇವರು ಇಂದಿಗೆ ಸುಮಧುರ ದಾಂಪತ್ಯ ಜೀವನದ 50 ವರ್ಷಗಳನ್ನು ಪೂರೈಸಿದ ನಲ್ಮೆಯ ಜೋಡಿಗೆ ದೇವರು ಇನ್ನೂ ಹೆಚ್ಚಿನ ಆರೋಗ್ಯ ಭಾಗ್ಯ ಕರುಣಿಸಲೆಂದು ಹಾರೈಸುವ...

ಶುಭ ಕೋರುವವರು :

- ✦ ಶ್ರೀ ಎಲ್.ಕೆ. ಕೆಂಚಪ್ಪ, ನಿವೃತ್ತ ಶಿಕ್ಷಕರು, ದಿ|| ಚನ್ನಮ್ಮ ಮತ್ತು ಮಕ್ಕಳು ಹಾಗೂ ಅಳಿಯಂದಿರು, ಶಿವಪುರ.
- ✦ ಶ್ರೀಮತಿ ಕೆಂಚಮ್ಮ ದಿ|| ಟಿ. ನಾಗಪ್ಪ ಮತ್ತು ಮಕ್ಕಳು ಹಾಗೂ ಅಳಿಯಂದಿರು
- ✦ ದಿ|| ಶಂಕ್ರಮ್ಮ, ದಿ|| ಕೆ.ಜಿ. ಸಿದ್ದಲಿಂಗಪ್ಪನವರ ಮಕ್ಕಳು ಹಾಗೂ ಅಳಿಯಂದಿರು
- ✦ ಶ್ರೀಮತಿ ರತ್ನಮ್ಮ, ದಿ|| ಕೆ.ಜಿ. ಮುರಿಗೆಪ್ಪನವರ ಮಕ್ಕಳು ಹಾಗೂ ಅಳಿಯಂದಿರು, ದೊಡ್ಡಬಾತಿ.
- ✦ ಶ್ರೀಮತಿ ಸುಮಿತ್ರಮ್ಮ ಶೇಖರಪ್ಪ, ಬೆಳವನೂರು. ✦ ಶ್ರೀಮತಿ ರತ್ನಮ್ಮ ಚನ್ನಬಸಪ್ಪ, ಶಾಮನೂರು.
- ✦ ಶ್ರೀಮತಿ ಮಮತಾ ಕೆ.ಆರ್. ನಾಗರಾಜ್
- ✦ ಶ್ರೀಮತಿ ಮಂಜುಳಾ, ಕೆ.ಆರ್. ಶಿವಕುಮಾರ್, ಗ್ರಾ.ಪಂ. ಸದಸ್ಯರು, ದೊಡ್ಡಬಾತಿ.
- ✦ ಶ್ರೀಮತಿ ಗಾಯಿತ್ರಿ ಕೆ.ಆರ್. ಚಂದ್ರಕಾಂತ್

ಮೊಮ್ಮಕ್ಕಳಾದ : ಪ್ರಿಯಾ, ಶ್ರೇಯಾ, ತನುಷ್, ತೇಜಸ್, ಚಿನ್ಮಯ್, ಚಿರಾಯು, ಚಾರ್ವಿ

ಹಾಗೂ ಕನ್ನಪ್ಪ ವಂಶಸ್ಥರು, ದೊಡ್ಡಬಾತಿ.

ಬಾತಿ ಚಂದ್ರು ಅಂಡ್ ಸನ್ಸ್ — ಎಪಿಎಂಸಿ ಯಾರ್ಡ್, ಸಿ ಬ್ಲಾಕ್, ದಾವಣಗೆರೆ.

ಕೆಜಿಎಂ ವೇಯರ್ಸ್ — ಗೂಡ್ಸ್ ಶೆಡ್ ರಸ್ತೆ, ದೊಡ್ಡಬಾತಿ.

ಮೊ. : 94487 27373, 97414 97373



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.03.2021ರಂದು ನಿಧನರಾದ

ಈಶ್ವರ್ ರೇಡಿಯೋ ಮಾಲೀಕರಾದ ದಿ|| ಎ.ಪಿ. ಪರಮೇಶ್ವರಪ್ಪನವರ ತೃತೀಯ ಪುತ್ರ

ಶ್ರೀ ಎ.ಪಿ. ದಿವಾಕರ್


ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.

ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

ಎ. ಶಿವಾನಂದ ಮತ್ತು ಮಕ್ಕಳು,
ಅಪಾರ ಬಂಧು-ಬಳಗ ಹಾಗೂ ಅಣಪೂರ್ ವಂಶಸ್ಥರು

- ✳ ಈಶ್ವರ್ ರೇಡಿಯೋ ಅಂಡ್ ಟಿ.ವಿ., ಅಶೋಕ ರೋಡ್, ದಾವಣಗೆರೆ.
- ✳ ಈಶ್ವರ್ ಡಿಜಿಟ್ರಾನಿಕ್ಸ್, ಹಾವೇರಿ. ✳ ಈಶ್ವರ್ ಡಿಜಿಟ್ರಾನಿಕ್ಸ್, ಹುಬ್ಬಳ್ಳಿ.
- ✳ ಈಶ್ವರ್ ಡಿಜಿಟ್ರಾನಿಕ್ಸ್, ಚನ್ನಗಿರಿ.
- ✳ ಈಶ್ವರ್ ಡಿಜಿಟ್ರಾನಿಕ್ಸ್, ರಾಣೇಬೆನ್ನೂರು.
- ✳ ರಾಜ್ ಏಜೆನ್ಸೀಸ್, ದಾವಣಗೆರೆ.
- ✳ ರಾಜ್ ಏಜೆನ್ಸೀಸ್, ಬೆಳಗಾವಿ ಹಾಗೂ ಎಲ್ಲಾ ಸಿಬ್ಬಂದಿ ವರ್ಗದವರು.

# ಹಡಗಲಿ ಪುರಸಭೆ ಬಜೆಟ್ ಮಂಡನೆ



ಹಡಗಲಿ, ಮಾ.20- ಪುರಸಭೆಯ ಎಂ.ಪಿ. ಪ್ರಕಾಶ್ ಸಭಾಂಗಣದಲ್ಲಿ ಶನಿವಾರ ಪುರಸಭೆ ಅಧ್ಯಕ್ಷ ವಾರದ ಗೌಸ್ ಮೋಹಿದ್ದೀನ್ ಉಳಿತಾಯ ಬಜೆಟ್ ಮಂಡಿಸಿದರು.

ಪುರಸಭೆಯ 2021-22 ನೇ ಸಾಲಿನ ಬಜೆಟ್‌ನಲ್ಲಿ 10,98,27,766 ರೂಪಾಯಿಗಳ ಆರಂಭದ ಶಿಲ್ಕು ಇದ್ದು, 9,95,77,701 ರೂ. ರಾಜಸ್ವ ಆದಾಯ ನಿರೀಕ್ಷೆ ಮಾಡಲಾಗಿದೆ. ಅಸಾಧಾರಣ ಮೂಲಗಳಿಂದ 8,25,71,350 ರೂ. ಸೇರಿ ಒಟ್ಟು 21,76,49,051 ರೂಪಾಯಿಗಳ ಬಜೆಟ್ ಮಂಡನೆ ಮಾಡಲಾಗಿದೆ.

9,13,45,000 ರೂ.ಗಳ ರಾಜಸ್ವ ಪಾವತಿ, 5,65,00,000 ರೂ.ಗಳ ಬಂಡವಾಳ ಪಾವತಿಗಳು, 6,53,78,215 ರೂ.ಗಳ ಅಸಾಧಾರಣ ಪಾವತಿಗಳು ಸೇರಿದಂತೆ, ಒಟ್ಟು 21,32, 23,215 ರೂಪಾಯಿಗಳಲ್ಲಿ ಅಂತಿಮ ಶಿಲ್ಕು 11,42,53,603 ರೂ., 44,25,836 ರೂಪಾಯಿಗಳ ಉಳಿತಾಯ ಬಜೆಟ್ ಮಂಡನೆ ಮಾಡಲಾಗಿದೆ ಎಂದರು.

ಶಾಸಕ ಪಿ.ಟಿ. ಪರಮೇಶ್ವರನಾಯ್ಕ, ಪುರಸಭೆ ಉಪಾಧ್ಯಕ್ಷೆ ಆರ್. ನಿರ್ಮಲ, ಮುಖ್ಯಾಧಿಕಾರಿ ಡಿ.ಬಿ. ಈರಣ್ಣ ಬಜೆಟ್ ದಾಖಲೆಗಳನ್ನು ಬಿಡುಗಡೆ ಮಾಡಿದರು.

## ಹೊಸಬಾಳೆ ಆಯ್ಕೆ

**(1ನೇ ಪುಟದಿಂದ)** ಜೋಶಿ ಅವರು 2009ರಿಂದ ಸರಕಾರ್ಯವಾಹರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಶನಿವಾರ ಎಬಿಪಿಎಸ್ ನಲ್ಲಿ ನಡೆದ ಆರೆಸ್ಸೆಸ್ ನ ಆಂತರಿಕ ಚುನಾವಣೆಯಲ್ಲಿ ಕರ್ನಾಟಕದ ದತ್ತಾತ್ರೇಯ ಹೊಸಬಾಳೆ ಯವರಿಗೆ ಸರಕಾರ್ಯವಾಹ ಜವಾಬ್ದಾರಿ ಲಭಿಸಿದೆ.

ಶಿವಮೊಗ್ಗದ ಸೊರಬದಲ್ಲಿ ಜನಿಸಿದ್ದ 65 ವರ್ಷದ ಹೊಸಬಾಳೆ, ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರರು. ಸಂಘದ ಒಡನಾಟದಲ್ಲೇ ಅವರು ಬೆಳೆದಿದ್ದಾರೆ. 1968ರಲ್ಲಿ ಅವರು ಸಂಘಕ್ಕೆ ಸೇರಿದ್ದರು. ಎ.ಬಿ.ವಿ.ಪಿ.ಯಲ್ಲೂ ಅವರೂ ಕಾರ್ಯ ನಿರ್ವಹಿಸಿದ್ದಾರೆ.



## 'ಜಿಟೋತ್ಸವ' ವಸ್ತು ಪ್ರದರ್ಶನ ಮಾರಾಟ ಮೇಳ

ದಾವಣಗೆರೆ, ಮಾ.20- ಜೆಐಟಿಓ ದಾವಣಗೆರೆ ಚಾಪ್ಟರ್ ವತಿಯಿಂದ ಶನಿವಾರ ನಗರದ ದಾವಣಗೆರೆ-ಹರಿಹರ ಅರ್ಬನ್ ಸಹಕಾರಿ ಸಮುದಾಯ ಭವನದಲ್ಲಿ 'ಜಿಟೋತ್ಸವ' ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಿತು. ಡಾ. ಪ್ರಭಾ ಮಲ್ಲಿಕಾರ್ಜುನ್ ಮೇಳವನ್ನು ಉದ್ಘಾಟಿಸಿದರು. ದಾವಣಗೆರೆ ಚಾಪ್ಟರ್ ಛೇರ್ಮನ್ ಅಜಿತ್ ಓಸ್ವಾಲ್, ಶ್ವೇತಾ ಆರ್. ಗಾಂಧಿ ಹಾಗು ಇತರರು ಉಪಸ್ಥಿತರಿದ್ದರು.

## ಪೊಲೀಸ್ 'ಹಫ್ತಾ'


**(1ನೇ ಪುಟದಿಂದ)** ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಪ್ರಕರಣ ದಾಖಲಿಸುವಂತೆ ದೇಶ್‌ಮುಖ್ ಒತ್ತಡ ಹೇರಿದ್ದರು ಎಂದೂ ಸಿಂಗ್ ತಿಳಿಸಿದ್ದಾರೆ.

ಬೇರೆಯವರು ತಪ್ಪು ಮಾಡಿದ್ದಾರೆ. ಅವರಿಂದ ಗಮನ ಬೇರೆಡೆಗೆ ಸೆಳೆಯಲು ತಮ್ಮನ್ನು ಬಲಿಪಶು ಮಾಡಲಾಗಿದೆ ಎಂದು ಸಿಂಗ್ ಪತ್ರದಲ್ಲಿ ಆರೋಪಿಸಿದ್ದಾರೆ.

ಸಿಂಗ್ ಆರೋಪಗಳನ್ನು ತಳ್ಳಿ ಹಾಕಿರುವ ಸಚಿವ ದೇಶ್‌ಮುಖ್, ಮುಕೇಶ್ ಅಂಬಾನಿ ಪ್ರಕರಣ ಹಾಗೂ ಮನ್‌ಸುಖ್ ಹಿರಾನಿ ಸಾವಿನ ಪ್ರಕರಣದಲ್ಲಿ ಸಚಿನ್ ವಾಜೆ ಭಾಗಿಯಾಗಿರುವುದು ಸಾಬೀತಾಗಿದೆ. ಅದರ ಜಾಡು ಈಗ ಪರಮ್ ಬೀರ್ ಸಿಂಗ್‌ವರೆಗೆ ತಲುಪಿದೆ. ಹೀಗಾಗಿ ಅವರು ಇಂತಹ ಆರೋಪ ಮಾಡುತ್ತಿದ್ದಾರೆ ಎಂದಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ದೇವೇಂದ್ರ ಫಡ್ನವೀಸ್, ದೇಶಮುಖ್ ರಾಜೀನಾಮೆ ನೀಡಬೇಕು ಇಲ್ಲದೇ ಹೋದರೆ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರನ್ನು ಕಿತ್ತು ಹಾಕಬೇಕು ಎಂದು ಆಗ್ರಹಿಸಿದ್ದಾರೆ.

## ಲೋಕಿಕೆರೆ ಕೃಷಿಪತ್ತಿನ ಸಂಘಕ್ಕೆ ಅಧ್ಯಕ್ಷರಾಗಿ ಕೆ.ತಿಪ್ಪಣ್ಣ ಆಯ್ಕೆ



ದಾವಣಗೆರೆ, ಮಾ.20 - ತಾಲ್ಲೂಕಿನ ಲೋಕಿಕೆರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ತಿಪ್ಪಣ್ಣ ಲೋಕಿಕೆರೆ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

# ದೂಡಾ: ಉಳಿತಾಯ ಬಜೆಟ್ ಮಂಡನೆ



**(1ನೇ ಪುಟದಿಂದ)** ಮೃಗಾಲಯ ಅಭಿವೃದ್ಧಿ ಪಡಿಸಲು 10 ಕೋಟಿ ರೂ., ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ 5.30 ಕೋಟಿ ರೂ., ಪ್ರಾಧಿಕಾರದ ಸಿಬ್ಬಂದಿಗಳಿಗೆ ವಸತಿ ಸಮುಚ್ಛಯ ಹಾಗೂ ಅತಿಥಿ ಗೃಹ ನಿರ್ಮಾಣಕ್ಕೆ 5 ಕೋಟಿ ರೂ., ದಾವಣಗೆರೆ ಹಾಗೂ ಹರಿಹರ ನಗರ ಮಧ್ಯ ಭಾಗದಲ್ಲಿ ಬರುವ ದೊಡ್ಡಬಾತಿ ಕೆರೆಯನ್ನು ವಿದ್ಯುದ್ದೀಕರಣಗೊಳಿಸಿ ಸಾರ್ವಜನಿಕರ ಪ್ರೇಕ್ಷಣೆಯ ಸ್ಥಳವಾಗಿ ಮತ್ತು ಪ್ರವಾಸೋದ್ಯಮ ಹಾಗೂ ಜಲಕ್ರೀಡೆ ನಡೆಸಲು ಅನುಕೂಲವಾಗುವಂತೆ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದ್ದು, 8 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ.

ಉಳಿದಂತೆ ಶಿರಮಗೊಂಡನಹಳ್ಳಿ ಪ್ರದೇಶದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಹೊಸದಾಗಿ ಒಳಚರಂಡಿ ಕಾಮಗಾರಿಗೆ 2 ಕೋಟಿ, ದಾವಣಗೆರೆ ಎಸ್.ನಿಜಲಿಂಗಪ್ಪ ಬಡಾವಣೆಯಲ್ಲಿ ಸೈನಿಕರ ಉದ್ಯಾನವನಕ್ಕೆ ಹೆಚ್ಚುವರಿಯಾಗಿ ರೂ. 1 ಕೋಟಿ, ಜಿಲ್ಲಾಧಿಕಾರಿಗಳ ಕಚೇರಿಯಿಂದ ಕುಂದುವಾಡ ಕೆರೆ ಬಳಿ ಇರುವ ಎಂ.ಬಿ.ಎ ಕಾಲೇಜುವರೆಗೆ ದ್ವಿಪಥ ರಸ್ತೆಯ ಎರಡು ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇದಕ್ಕೆ ಮುಂದುವರೆದು ದಾವಣಗೆರೆ ನಗರ ನಿವಾಸಿ ಗಳ ಸುಗಮ ಸಂಚಾರಕ್ಕೆ ಎಂ.ಬಿ.ಎ. ಕಾಲೇಜು ಹಾಗೂ ಕುಂದುವಾಡ ಕೆರೆಯ ಮಧ್ಯ ಭಾಗದಿಂದ ಬೈಪಾಸ್ ರಸ್ತೆಯವರೆಗೆ ರೂ. 2 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ.

ಜೆ.ಹೆಚ್.ಪಟೇಲ್ ಬಡಾವಣೆ ಅಭಿವೃದ್ಧಿ ಗೆ 530 ಲಕ್ಷ ರೂ. ಕಾಯ್ದಿರಿಸಲಾಗಿದೆ. ದೂಡಾದ ನಕ್ಷೆ ಹಾಗೂ ಕಡತಗಳ ಗಣಕೀಕರಣಕ್ಕೆ 2 ಕೋಟಿ ರೂ., ಪ್ರಾಧಿಕಾರದ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕಾಗಿ 5 ಕೋಟಿ, ನಿವೇಶನದ ಜಾಗದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ಕ್ಕೆ 1ಕೋಟಿ ರೂ., ಉದ್ಯಾನವನ ಹದ್ದುಬಸ್ತು ಹಾಗೂ ಅಭಿವೃದ್ಧಿಗೆ 2 ಕೋಟಿ ರೂ., ನಿಜಲಿಂಗಪ್ಪ ಹಾಗೂ ದೇವರಾಜ ಅರಸು ಬಡಾವಣೆಯ ಮುಂಭಾಗದ ನಾಮಫಲಕ ಕಮಾನುಗಳಿಗೆ 50 ಲಕ್ಷ ರೂ. ಕಾಯ್ದಿರಿಸಲಾಗಿದೆ.

ವಿವಿಧ ಕೆರೆ, ಉದ್ಯಾನವನಗಳ ಅಭಿವೃದ್ಧಿಗಾಗಿ 8.50 ಕೋಟಿ ರೂ. ಕಾಯ್ದಿರಿಸಲಾಗಿದೆ. ಬರುವ ವರ್ಷ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಪ್ರಾಧಿಕಾರದ ವತಿಯಿಂದ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಒಟ್ಟು 299 ಲಕ್ಷ ರೂ.ಗಳ ನಿವ್ವಳ ಲಾಭ ನಿರೀಕ್ಷಿಸಲಾಗಿದೆ ಎಂದು ದೂಡಾ ಆಯುಕ್ತರು ಮಾಹಿತಿ ನೀಡಿದರು.

ಸಭೆಯಲ್ಲಿ ದೂಡಾ ಸದಸ್ಯರಾದ ದೇವೀರಮ್ಮ ಆರ್.ಎಲ್., ಡಿ.ಎಲ್, ನಾಗರಾಜ ಎಂ. ರೋಖಡೆ, ಸೌಭಾಗ್ಯಮ್ಮ, ಡಿ.ವಿ.ಜಯರುದ್ರಪ್ಪ, ಹರಿಹರ ನಗರಸಭೆ ಪೌರಾಯುಕ್ತರು, ಪ್ರಾಧಿಕಾರದ ಜಂಟಿ ನಿರ್ದೇಶಕ, ಸಹಾಯಕ ನಿರ್ದೇಶಕ, ಸಹಾಯಕ ಕಾರ್ಯಪಾಲಕ ಅಭಿಯಂತರ ಕೆ. ಹೆಚ್.ಶ್ರೀಕರ್, ಲೆಕ್ಕಪರಿಶೋಧನಾಧಿಕಾರಿ, ಇವರುಗಳು ಉಪಸ್ಥಿತರಿದ್ದರು.

## ಗ್ರಾಮ ಪಂಚಾಯಿತಿ ಚುನಾವಣೆ : 60 ಸ್ಥಾನಗಳಿಗೆ 147 ಅಭ್ಯರ್ಥಿಗಳು

ದಾವಣಗೆರೆ, ಮಾ.20- ಗ್ರಾ.ಪಂ. ವಿವಿಧ ಕ್ಷೇತ್ರಗಳ ಚುನಾವಣೆಗೆ ಸಂಬಂಧಿಸಿದಂತೆ ಮಾ. 20 ರಂದು ನಾಮಪತ್ರಗಳ ಪರಿಶೀಲನೆ ನಡೆದಿದ್ದು, ವಿವಿಧ ಗ್ರಾಮ ಪಂಚಾಯತ್‌ಗಳ ಒಟ್ಟು 60 ಸದಸ್ಯ ಸ್ಥಾನಗಳಿಗೆ 147 ನಾಮಪತ್ರಗಳು ಸ್ವೀಕೃತಗೊಂಡಿದ್ದು, 01 ನಾಮಪತ್ರ ಮಾತ್ರ ತಿರಸ್ಕೃತಗೊಂಡಿದೆ. ಒಟ್ಟು 15 ಸದಸ್ಯ ಸ್ಥಾನಗಳಿಗೆ ಯಾವುದೇ ನಾಮಪತ್ರ ಸಲ್ಲಿಕೆಯಾಗಿಲ್ಲ ಎಂದು ಅಪರ ಜಿಲ್ಲಾಧಿಕಾರಿ ವೀರಮಲ್ಲಪ್ಪ ಪೂಜಾರ್ ತಿಳಿಸಿದ್ದಾರೆ.

ಅಭ್ಯರ್ಥಿಗಳ ಸಂಖ್ಯೆ ವಿವರ ಇಂತಿದೆ. ದಾವಣಗೆರೆ ತಾಲ್ಲೂಕಿನ 37-ಬೇತೂರು ಗ್ರಾಮ ಪಂಚಾಯಿತಿಯ ಬೇತೂರು-1 ರ ಕ್ಷೇತ್ರದ ಸಂಖ್ಯೆಯ ಒಟ್ಟು ಸ್ಥಾನಗಳ ಸಂಖ್ಯೆ-3, ನಾಮಪತ್ರ ಸಲ್ಲಿಸದೇ ಖಾಲಿ ಉಳಿದಿರುವ ಸ್ಥಾನ-0, ಸ್ವೀಕೃತವಾದ ನಾಮಪತ್ರಗಳ ಸಂಖ್ಯೆ-13, ತಿರಸ್ಕೃತವಾದ ನಾಮಪತ್ರಗಳ ಸಂಖ್ಯೆ-0, ಕ್ರಮಬದ್ಧವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಸಂಖ್ಯೆ-13

ಉಮೇದುವಾರಿಕೆ ಹಿಂಪಡೆಯಲು ಇದೇ 22 ಕೊನೆಯ ದಿನಾಂಕ ವಾಗಿದ್ದು, ಮತದಾನ 29 ರಂದು ಬೆಳಿಗ್ಗೆ 7 ರಿಂದ ಸಂಜೆ 5 ರವರೆಗೆ ನಡೆಯಲಿದೆ.

## ಫಳಾರ ವಿತರಿಸಿ ಜಾತ್ರೆಗೆ ತೆರೆ



ಮಲೇಬೆನ್ನೂರು, ಮಾ.20- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಕಳೆದ ಒಂದು ವಾರದಿಂದ ನಡೆದುಕೊಂಡು ಬಂದ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ ಶನಿವಾರ ಭಕ್ತರಿಗೆ ಫಳಾರ ವಿತರಿಸುವ ಮೂಲಕ ಜಾತ್ರೆಗೆ ತೆರೆ ಎಳೆಯಲಾಯಿತು.

ಫಳಾರಕ್ಕೂ ಮುನ್ನ ಅಜ್ಜಯ್ಯನ ಗದ್ದುಗೆಗೆ ವಿಶೇಷ ಪೂಜೆ, ಅಭಿಷೇಕ ಸಲ್ಲಿಸಲಾಯಿತು. ಜಾತ್ರೆಯ ಯಶಸ್ಸಿಗೆ ಶ್ರಮಿಸಿದ ಜಿಲ್ಲಾಡಳಿತಕ್ಕೆ ಗದ್ದುಗೆ ಟ್ರಸ್ಟ್ ಸಮಿತಿ ಕಾರ್ಯದರ್ಶಿ ಸುರೇಶ್ ಕೃತಜ್ಞತೆ ಸಲ್ಲಿಸಿದರು.

# ವಿವೇಕ ಕಲಿಸುವುದು ಶಿಕ್ಷಣದ ಉದ್ದೇಶ



**(1ನೇ ಪುಟದಿಂದ)** ಗಳಿಸುವುದು ಸುಲಭವೂ ಅಲ್ಲ. ಲಕ್ಷಾಂತರ ವಿದ್ಯಾರ್ಥಿಗಳ ಜೊತೆ ಸ್ಪರ್ಧಿಸಿ ಅಂಕ ಪಡೆಯಬೇಕಾಗುತ್ತದೆ. ಅರ್ಧ ಅಂಕ ಕಡಿ ಮೆಯಾದರೂ ನೂರಾರು ಶ್ರೇಯಾಂಕ ಕಡಿಮೆ ಯಾಗುತ್ತದೆ ಎಂದು ಕೃಷ್ಣೇಗೌಡ ಹೇಳಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಮೇಯರ್ ಎಸ್.ಟಿ. ವೀರೇಶ್, ಕೊರೊನಾ ಅಲೆಯ ಎರಡನೇ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಕೊರೊನಾ ಮಾರ್ಗಸೂಚಿಗಳನ್ನು ಪಾಲಿಸಬೇಕಿದೆ ಎಂದರು.

ಸ್ವಚ್ಛತೆ ಹಾಗೂ ಕುಡಿಯುವ ನೀರಿನ ಬಗ್ಗೆ ಕಾಳಜಿ ವಹಿಸಬೇಕು. ಹಸಿ ಕಸ - ಒಣ ಕಸ ಬೇರ್ಪಡಿಸುವ ಹೊಣೆ ಜನರ ಮೇಲಿದೆ ಎಂದ ಅವರು, ಜನರು ಕಸದ ಬೇರ್ಪಡಿಸದೇ ಇದ್ದರೆ ಸ್ವಚ್ಛತೆಗಾಗಿ ಪಾಲಿಕೆಗೆ ನೀಡುವ ತೆರಿಗೆ ವ್ಯರ್ಥವಾಗುತ್ತದೆ ಎಂದು ಹೇಳಿದರು.

ಸರ್ಕಾರದ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿ ಸ್ವಾಮಿ, ಭಾರತ ಕೌಟುಂಬಿಕ ವ್ಯವಸ್ಥೆಗೆ ಹೆಸರಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ಕೌಟುಂಬಿಕ ವ್ಯವಸ್ಥೆ ದುರ್ಬಲವಾಗುತ್ತಿದೆ. ಪೋಷಕರು ಮಕ್ಕಳಿಗೆ ಉತ್ತಮ ಕೌಟುಂಬಿಕ ವಾತಾವರಣ ಕಲ್ಪಿಸುವ ಕೆಲಸ ಮಾಡಬೇಕು ಎಂದರು.

ಹೆಸರಾಂತ ಹಿನ್ನೆಲೆ ಗಾಯಕಿ ಎಂ.ಡಿ. ಪಲ್ಲವಿ ಮತ್ತು ತಂಡದವರು ಸುಮಧುರ ಗೀತೆಗಳನ್ನು ಪ್ರಸ್ತುತಪಡಿಸಿದರು.

ಈ ಸಂದರ್ಭದಲ್ಲಿ ಜಾನಪದ ತಜ್ಞ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಎಂ.ಜಿ. ಈಶ್ವರಪ್ಪ ಅವರಿಗೆ ಸೋಮೇಶ್ವರ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಎಸ್.ಎಸ್.ಎಲ್.ಸಿ.ಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಯು.ಕೆ. ಸುಷ್ಮಿತ್, ಸಮೃದ್ಧಿ ಹಾಗೂ ಭೂಮಿಕ ಅವರಿಗೆ ಸಾಧನಾ ಸಿರಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆಯ ಮೇಲೆ ಶಾಸಕ ಎಸ್.ಎ. ರವೀಂದ್ರನಾಥ್, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಪಾಲಿಕೆ ಸದಸ್ಯ ಕೆ.ಎಂ. ವೀರೇಶ್, ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕೆ.ಎಂ. ಸುರೇಶ್, ವಿದ್ಯಾಸಂಸ್ಥೆಯ ಅಧ್ಯಕ್ಷ ಹೆಚ್.ಆರ್. ಅಶೋಕ್ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಶ್ರೀನಿಧಿ ಪ್ರಾರ್ಥಿಸಿದರೆ, ರಮ್ಯ ಸ್ವಾಗತಿಸಿದರು.

## ನಾಗರಾಜ್ ಗೊಡಬನಾಳ್ ಅವರ ಕೃತಿ ಬಿಡುಗಡೆ



ಕಾವ್ಯಾರ್ಥ ಚಿಂತನೆ, ಕವಿನಮನಾ - ಕಾವ್ಯ ಸ್ಮರಣೆ ಹಾಗೂ ಸಾಹಿತ್ಯ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ ಇಂದು ಸಂಜೆ 5.30ಕ್ಕೆ ವಿದ್ಯಾನಗರ ಉದ್ಯಾನವನದಲ್ಲಿರುವ ಕಾವ್ಯಮಂಟಪದಲ್ಲಿ ಕೃತಿಗಳ ಲೋಕಾರ್ಪಣೆ ಆಯೋಜಿಸಲಾಗಿದೆ.

ನಾಗರಾಜ್ ಗೊಡಬನಾಳು ಅವರ 'ಸಿರಿ ಕನ್ನಡ ಪದಬಂಧ' ಮತ್ತು ಶಿವಕುಮಾರ್ ಕುರ್ಕಿಯವರ 'ಶರಣ ದರ್ಶನಿ ಟೇಬಲ್ ಕ್ಯಾಲೆಂಡರ್' ಲೋಕಾರ್ಪಣೆ ಹಾಗೂ ಕಾವ್ಯರಸಿಕರಿಂದ ನಾಡಿನ ಹಿರಿಯ ಕವಿಗಳ ಕಾವ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮವು ಗ್ರಂಥಸರಸ್ವತಿ ಪ್ರತಿಭಾರಂಗದಿಂದ ನಡೆಯಲಿದೆ.

ಡಿಡಿಪಿಐ ಪರಮೇಶ್ವರಪ್ಪ ಸಿ.ಕೆ. ಅವರು ಕಾರ್ಯಕ್ರಮ ಉದ್ಘಾಟಿಸುವರು. ಶಿವಾನಂದ ಗುರೂಜಿಯವರಿಂದ ಟೇಬಲ್ ಕ್ಯಾಲೆಂಡರ್ ಲೋಕಾರ್ಪಣೆ ಹಾಗೂ ಜಾನಪದ ವಿದ್ವಾಂಸರಾದ ಡಾ. ಎಂ.ಜಿ. ಈಶ್ವರಪ್ಪ ಅವರಿಂದ ಸಿರಿ ಕನ್ನಡ ಪದಬಂಧ ಲೋಕಾರ್ಪಣೆ ನಡೆಯಲಿದೆ. ಖ್ಯಾತ ಸಾಹಿತಿ ಡಾ. ಲೋಕೇಶ್ ಅಗಸನಕಟ್ಟೆ ಅವರು ಕೃತಿಗಳ ಕುರಿತು ಮಾತನಾಡುವರು. ಡಾ. ಎ.ಬಿ. ರಾಮಚಂದ್ರಪ್ಪ ಅವರಿಂದ ಕಾವ್ಯಾರ್ಥ ಚಿಂತನೆ ನಡೆಯಲಿದೆ. ಶಿವಕುಮಾರಸ್ವಾಮಿ ಕುರ್ಕಿ ಅಧ್ಯಕ್ಷತೆ ವಹಿಸುವರು.


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.03.2021ರಂದು ನಿಧನರಾದ ಈಶ್ವರ್ ರೇಡಿಯೋ ಮಾಲೀಕರಾದ ದಿ॥ ಎ.ಪಿ. ಪರಮೇಶ್ವರಪ್ಪನವರ ತೃತೀಯ ಪುತ್ರ

**ಶ್ರೀ ಎ.ಪಿ. ದಿವಾಕರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

**ಭುವನೇಶ್ವರ ಪ್ರಸಾದ್ ಎ.ಓ.**
ದಾವಣಗೆರೆ.


## ಹತ್ತು ತಿಂಗಳವರೆಗೆ ಉತ್ತಮ ರಕ್ಷಣೆ

**(1ನೇ ಪುಟದಿಂದ)** ಪ್ರಯಾಣವನ್ನು ಇನ್ನೂ ಸ್ವಲ್ಪ ಕಾಲ ನಿಲ್ಲಿಸಬೇಕು ಎಂದಿದ್ದಾರೆ. ಈ ನಡುವೆ ಹೇಳಿಕೆ ನೀಡಿರುವ ನೀತಿ ಆಯೋಗದ ಸದಸ್ಯ (ಆರೋಗ್ಯ) ವಿ.ಕೆ. ಪೌಲ್, ಲಸಿಕೆಗಳ ಲಭ್ಯತೆ ಸೀಮಿತವಾಗಿದೆ. ಹೀಗಾಗಿ ಆದ್ಯತೆಯ ಮೇರೆಗೆ ಲಸಿಕೆ ಕೊಡಬೇಕಿದೆ ಎಂದಿದ್ದಾರೆ. ನಮಗೆ ಹೇರಳ ಲಸಿಕೆಗಳು ಲಭ್ಯವಾಗಿದ್ದರೆ, ಪ್ರತಿಯೊಬ್ಬರಿಗೂ ಕೊಡುತ್ತಿದ್ದೆವು. ಲಸಿಕೆ ಸೀಮಿತವಾಗಿರುವುದರಿಂದ ಬಹುತೇಕ ದೇಶಗಳು ಆದ್ಯತಾ ಗುಂಪುಗಳಿಗಿಂತ ಹೆಚ್ಚಿನವರಿಗೆ ಲಸಿಕೆ ಕೊಡಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ. ಸಹ ಅಸ್ವಸ್ಥತೆ ಹೊಂದಿರುವವರು ಹಾಗೂ ಹಿರಿಯರ ಗುಂಪಿನಲ್ಲೇ ಹೆಚ್ಚು ಸಾವುಗಳು ಸಂಭವಿಸುತ್ತಿವೆ. ಹೀಗಾಗಿ ಈ ವರ್ಗದವರು ಲಸಿಕೆ ಪಡೆಯುವುದನ್ನು ತಡ ಮಾಡಬಾರದು. ಬೇರೆಯವರಿಗೂ ಲಸಿಕೆ ಪಡೆಯುವ ಸಂದೇಶ ನೀಡಬೇಕು ಎಂದವರು ಹೇಳಿದ್ದಾರೆ.


## ಎ.ಪಿ. ದಿವಾಕರ್ ನಿಧನ



ದಾವಣಗೆರೆ ಈಶ್ವರ್ ರೇಡಿಯೋ ಮಾಲೀಕರಾದ ದಿ॥ ಎ. ಪರಮೇಶ್ವರಪ್ಪನವರ ತೃತೀಯ ಪುತ್ರ **ಶ್ರೀ ಎ.ಪಿ. ದಿವಾಕರ್** ಅವರು ದಿನಾಂಕ 20.03.2021ರ ಶನಿವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 54 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ನಾಲ್ವರು ಸಹೋದರಿಯರು, ಇಬ್ಬರು ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.03.2021ರ ಭಾನುವಾರ ಬೆಳಿಗ್ಗೆ 11.30ಕ್ಕೆ ಶಾಮನೂರು ಸಮೀಪದ ರುದ್ರಭೂಮಿಯಲ್ಲಿ ನಡೆಯಲಿದೆ.

ದುಃಖತಪ್ತರು : ಅಣಪೂರ್ ವಂಶಸ್ಥರು, ಕಾರಿಗನೂರು ಪಟೇಲ್ ವಂಶಸ್ಥರು, ಮೊ. : 88929 87999


## ಪರಿಹಾರಕ್ಕೆ ರೈತ ಸಂಘ ಒತ್ತಾಯ

ರಾಣೇಬೆನ್ನೂರು, ಮಾ.20 - ಮರಳು ಗಾಡಿ ಅಪಘಾತದಲ್ಲಿ ಮೃತರಾದವರ ಪೋಷಕರಿಗೆ ಘೋಷಿಸಿದ ಪರಿಹಾರ ನೀಡದೇ ಮತ್ತೆ ಮರಳುಗಾರಿ ಕೆಗೆ ಅವಕಾಶ ನೀಡಿದ್ದನ್ನು ವಿರೋಧಿಸಿ ಅಪಘಾತ ಸ್ಥಳದಲ್ಲಿ ಪ್ರತಿಭಟನೆ ನಡೆಸಿ ಸಂಚಾರ ಸ್ಥಗಿತಗೊಳಿಸಲಾಗುವುದು ಎಂದು ರಾಜ್ಯ ರೈತ ಸಂಘ, ಮೃತರ ಕುಟುಂಬಕ್ಕೆ ಆಹಾರ ಪದಾರ್ಥ ನೀಡಿ ಸಾಂತ್ವನ ಹೇಳಿದರು.

ಇತ್ತೀಚೆಗೆ ಇಟಗಿ-ಮುದೇನೂರ ರಸ್ತೆಯಲ್ಲಿ ನಿಂತಿದ್ದ ಮುದೇನೂರು ಗ್ರಾಮದ ಸಿದ್ದಪ್ಪ ನಾಗೇನಹಳ್ಳಿ, ಪತ್ನಿ ಅನುಸೂಯ ಮಕ್ಕಳಾದ ವಿನೋದ, ವನಿತಾ ಅವರಿಗೆ ಅಕ್ರಮ ಮರಳುಗಾರಿಕೆ ನಡೆಸುತ್ತಿದ್ದ ಲಾರಿ ಡಿಕ್ಕಿ ಹೊಡೆದಿದ್ದರಿಂದ ಈ ನಾಲ್ವರು ಸಾವನ್ನಪ್ಪಿದ್ದರು.

ಇವರಿಗೆ ತಕ್ಷಣ ಪರಿಹಾರ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದೆ.



## ಹಳ್ಳಿಹಾಳ್‌ನಲ್ಲಿ ವೈಭವದ ರಥೋತ್ಸವ

ಮಲೇಬೆನ್ನೂರು, ಮಾ.20- ಸಮೀಪದ ಹಳ್ಳಿಹಾಳ್ ಗ್ರಾಮದ ಶ್ರೀ ಮುರುಡ ಬಸವೇಶ್ವರ ದೇವರ ರಥೋತ್ಸವವು ಇಂದು ಸಂಜೆ ವಿಜೃಂಭಣೆಯಿಂದ ಜರುಗಿತು. ವಿವಿಧ ಕಲಾಮೇಳಗಳು ರಥೋತ್ಸವದಲ್ಲಿ ಗಮನ ಸೆಳೆದವು. ಹಳ್ಳಿಹಾಳ್ ಹಾಗೂ ಸುತ್ತಮುತ್ತಲಿನ ಹಳ್ಳಿಗಳ ಜನರು ಪಾಲ್ಗೊಂಡಿದ್ದರು. ಭಾನುವಾರ ಸಂಜೆ ಓಕಳಿ ನೆರವೇರಲಿದೆ.

# ಮಲ್ಲಿಗೆರೆ ಜನತೆಗೆ ಹಕ್ಕುಪತ್ರ ನೀಡಿ

**(1ನೇ ಪುಟದಿಂದ)** ತಪ್ಪಿಸಲು ಸರ್ಕಾರ 'ಜಿಲ್ಲಾಧಿಕಾರಿಗಳ ನಡೆ-ಹಳ್ಳಿಗಳ ಕಡೆಗೆ' ಎಂಬ ವಿನೂತನ ಮತ್ತು ಅತ್ಯುತ್ತಮವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದರು.

ನಾನು, ಸಿಇಓ, ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಈ ಕ್ಷೇತ್ರದ ಜನಪ್ರಿಯ ಶಾಸಕರ ನಡೆ ಜನರ ಕಡೆಗೆ ಇದೆ. ನಿಮ್ಮ ನಿರೀಕ್ಷೆಯನ್ನು ಹುಸಿಗೊಳಿಸುವುದಿಲ್ಲ ಎಂದರು.

ಸರ್ಕಾರದಿಂದ ನೀಡುವ ವಿವಿಧ ಪಿಂಚಣಿ ಮತ್ತು ವೇತನವನ್ನು ಅನೇಕರು ಪಡೆಯುತ್ತಿದ್ದು, ಇನ್ನೂ ಕೆಲವರು ಅವಕಾಶ ವಂಚಿತರಾಗಿದ್ದರು. ಅಂತಹವರಿಂದ ಖುದ್ದು ಅಧಿಕಾರಿಗಳೇ ಅರ್ಜಿ ಪಡೆದು ಸೌಲಭ್ಯವನ್ನು ಇಂದು ಅವರಿಗೆ ವಿತರಿಸಲಾಗುತ್ತಿದೆ. ಮಾವಿನಹೊಳೆಯಲ್ಲಿ ಇಂದು ಹೊಸದಾಗಿ 115 ಜನರಿಗೆ ಸೌಲಭ್ಯ ವಿತರಣೆ ಮಾಡಲಾಗುತ್ತಿದೆ ಎಂದರು.

ಅರಣ್ಯ ಹಕ್ಕುಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಕೆಲಸ ಆಗಬೇಕಿದ್ದು, ಇಲ್ಲಿನ 68 ಮನೆಗಳಿಗೆ ಸಂಬಂಧಿಸಿದಂತೆ ಪ್ರಕರಣ ಉಪವಿಭಾಗಾಧಿಕಾರಿಗಳ ಬಳಿ ಇದ್ದು ಈ ಬಗ್ಗೆ ಡಿಸಿಎಫ್ ರವರು ಎಸಿಎಫ್‌ರವರಿಗೆ ಸೂಚನೆ ನೀಡಿ ಪರಿಶೀಲಿಸಲು ತಿಳಿಸಿದ್ದೇನೆ ಎಂದರು.

ಜಿ.ಪಂ ಸಿಇಓ ವಿಜಯ ಮಹಾಂತೇಶ ದಾನಮ್ಮನವರ್ ಮಾತನಾಡಿ, ಇಲ್ಲಿ ಜನರ ಪ್ರಸ್ತಾವಿತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿ ಶೀಘ್ರ ಪರಿಹಾರ ಮತ್ತು ಅರ್ಹರಿಗೆ ಸೌಲಭ್ಯವನ್ನು ತಕ್ಷಣವೇ ನೀಡಲಾಗುವುದು. ಶಾಸಕರು ಹೇಳಿದ 68 ಮನೆಗಳ ಕುರಿತಂತೆ ಸಂಪೂರ್ಣ ಮಾಹಿತಿ ಪಡೆದು ಡಿನೋಟಿಫೈ ಮಾಡುವ ಬಗ್ಗೆ ತುರ್ತಾಗಿ ಕ್ರಮ ಕೈಗೊಳ್ಳುತ್ತೇವೆ ಎಂದರು.

**ಸೌಲಭ್ಯ ವಿತರಣೆ ವಿವರ:** ತಿಪ್ಪಗೊಂಡನಹಳ್ಳಿ ಮತ್ತು ರಾಜಗೊಂಡನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಗ್ರಾಮಸ್ಥರಿಗೆ ಗ್ರಾಮ ವಾಸ್ತವ್ಯ ಕಾರ್ಯಕ್ರಮ ನಿಮಿತ್ತ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯ, ವಿಧವಾ ವೇತನ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಯಡಿ ಒಟ್ಟು 115 ಜನರಿಗೆ ಸೌಲಭ್ಯ ವಿತರಣೆ ಮಾಡಲಾಯಿತು. 10 ಪೌತಿ ಖಾತೆ ವಿಲೇವಾರಿ.

ರಾಜಗೊಂಡನಹಳ್ಳಿ ಸರ್ವೇ ನಂ.2 ರಲ್ಲಿ 2 ಎಕರೆ ಸ್ಮಶಾನ ಉದ್ದೇಶಕ್ಕೆ ಭೂಮಿ ಕಾಯ್ದಿರಿಸಲಾಗಿದೆ. ದಂಡಿಗೇನಹಳ್ಳಿ ಸರ್ವೇ ನಂ 7 ರಲ್ಲಿ 1 ಎಕರೆ ಮತ್ತು ಮಾವಿನಹೊಳೆ ಸರ್ವೇ ನಂ 10 ರಲ್ಲಿ 2 ಎಕರೆ ಜಮೀನು ಸ್ಮಶಾನಕ್ಕೆ ಮೀಸಲು. 16 ಜನರಿಗೆ ಅತಿವೃಷ್ಟಿ ಪರಿಹಾರ ವಿತರಣೆ ಮಾಡಲಾಯಿತು.

ಜಿ.ಪಂ ಉಪಾಧ್ಯಕ್ಷೆ ಸಾಕಮ್ಮ ಗಂಗಾಧರ ನಾಯ್ಕ, ಜಿ.ಪಂ ಸದಸ್ಯರಾದ ಯಶೋಧಮ್ಮ ಮರುಳಪ್ಪ, ಮಂಜುಳಾ ಟಿ.ವಿ.ರಾಜು, ಚನ್ನಗಿರಿ ತಾ.ಪಂ. ಅಧ್ಯಕ್ಷೆ ಕವಿತಾ, ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ಗ್ರಾಮ ವಾಸ್ತವ್ಯದ ವೇಳೆ 410 ವಿವಿಧ ರೀತಿಯ ಅರ್ಜಿಗಳನ್ನು ಸ್ವೀಕರಿಸಲಾಯಿತು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಭೂ ಹಕ್ಕುದಾರರ ವೇದಿಕೆ ತಾಲ್ಲೂಕು ಅಧ್ಯಕ್ಷ ಉಮೇಶ ನಾಯ್ಕ ಹಕ್ಕೊತ್ತಾಯ ಮಂಡಿಸಿದರು. ರೈತರಿಗೆ 3 ತಿಂಗಳೊಳಗೆ ಸಾಗುವಳಿ ಚೀಟಿ ನೀಡುವಂತೆ ಜಿಲ್ಲಾ ಸಂಚಾಲಕ ರೂಪ್ಲಾನಾಯ್ಕ ಮನವಿ ಮಾಡಿದರು.


## ರಮೇಶ್ ಜಾವೂರ್ ನಿಧನ



ದಾವಣಗೆರೆ ಎಂ.ಸಿ.ಸಿ 'ಎ' ಬ್ಲಾಕ್ 3ನೇ ಮೇನ್, 3ನೇ ಕ್ರಾಸ್, ವಾಸಿ

**ರಮೇಶ್ ಜಾವೂರ್**

ಅವರು ದಿನಾಂಕ 20.03.2021ನೇ ಶನಿವಾರ ರಾತ್ರಿ 8 ಗಂಟೆಗೆ ನಿಧನರಾದರು. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.03.2021 ಭಾನುವಾರ ಸಂಜೆ 4 ಗಂಟೆಗೆ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ**
**83173 64145, 9108564303**

## ಭಾವಪೂರ್ಣ ಶ್ರದ್ಧಾಂಜಲಿ




ದಿನಾಂಕ 21.03.2021ರಂದು ಅಕಾಲಿಕವಾಗಿ ನಿಧನರಾದ ಅಬಕಾರಿ ವಿಚಕ್ಷಣಾ ದಳದ ನಿರೀಕ್ಷಕರಾದ ಶ್ರೀಮತಿ ರಶ್ಮಿ ಅವರ ಪತಿ - ಶಿಕ್ಷಕ

**ಶ್ರೀ ಹೆಚ್.ಸಿ. ನವೀನ್‌ಕುಮಾರ್ (ನುಗ್ಗೇಹಳ್ಳಿ)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

- ✦ **ಜೆ. ಈಶ್ವರಸಿಂಗ್ ಕವಿತಾಳ** ಪ್ರಧಾನ ಕಾರ್ಯದರ್ಶಿ, ದಾವಣಗೆರೆ ಜಿಲ್ಲಾ ಮದ್ಯ ಮಾರಾಟಗಾರರ ಸಂಘ
- ✦ **ಬಿ. ಶಿವಪ್ರಸಾದ್** ಅಬಕಾರಿ ಉಪ ಆಯುಕ್ತರು, ದಾವಣಗೆರೆ ಜಿಲ್ಲೆ, ದಾವಣಗೆರೆ.
- ✦ **ಸಿಬ್ಬಂದಿ ವರ್ಗದವರು, ಅಬಕಾರಿ ಇಲಾಖೆ,** ದಾವಣಗೆರೆ.
- ✦ **ಸನ್ನದುದಾರರು,** ದಾವಣಗೆರೆ ಜಿಲ್ಲೆ, ದಾವಣಗೆರೆ.

## ದುರುಗೋಜಿ ರಾವ್ ನಿಧನ



ದಾವಣಗೆರೆ ಕೆಟಿಜೆ ನಗರ, 3ನೇ ಮೇನ್ 12ನೇ ಕ್ರಾಸ್ ವಾಸಿ ನಿವೃತ್ತ ಸರ್ಕಾರಿ ನೌಕರರಾಗಿದ ದುರುಗೋಜಿ ರಾವ್ (91) ಅವರು ದಿನಾಂಕ 20.03.2021 ರ ಶನಿವಾರ ರಾತ್ರಿ 7.20ಕ್ಕೆ ನಿಧನರಾದರು. ನಾಲ್ವರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.03.2021 ರ ಭಾನುವಾರ ಮಧ್ಯಾಹ್ನ 1.30ಕ್ಕೆ ನಗರದ ಆರ್.ಹೆಚ್. ಬೃಂದಾವನದಲ್ಲಿ ನೆರವೇರಲಿದೆ.

# ರಾಶಿ ಭವಿಷ್ಯ

**ದಿನಾಂಕ : 21.03.2021 ರಿಂದ 27.03.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ನಿರುದ್ಯೋಗಿಗಳಿಗೆ ಉತ್ತಮ ವೇತನದ ನೌಕರಿ, ವಿದ್ಯಾರ್ಥಿಗಳು ವಿಶೇಷಾಧ್ಯಯನಕ್ಕೆಂದು ಪರಸ್ಥಳದಲ್ಲಿ ವಾಸ ಮಾಡಬೇಕಾಗಬಹುದು. ಉದ್ಯಮಿಗಳಿಗೆ ಆರ್ಥಿಕ ಮುಗ್ಗಟ್ಟು ಕಡಿಮೆಯಾಗಲಿದೆ. ಸಮಾಜ ಸೇವೆಯಲ್ಲಿ ತೊಡಗಿಕೊಳ್ಳುವ ನಿಮಗೆ ಸಂಘ-ಸಂಸ್ಥೆಗಳಿಂದ ಸನ್ಮಾನ, ಆದಾಯದಲ್ಲಿ ಏರುಮುಖ, ಮನೆಯಲ್ಲಿ ಹಿರಿಯರ ಆರೋಗ್ಯದ ಬಗ್ಗೆ ಕಾಳಜಿಯಿರಲಿ. ರಾಜಕಾರಣಿಗಳೊಂದಿಗೆ ಎಚ್ಚರದಿಂದಿರಿ. ವಿಶೇಷ ಕಾರ್ಯಕ್ರಮದಿಂದಾಗಿ ಮನೆಯಲ್ಲಿ ಹಬ್ಬದ ವಾತಾವರಣ, ಪೂರ್ವ ನಿರ್ಧಾರಿತ ಹೊಸ ಯೋಜನೆ ಕಾರ್ಯರೂಪಕ್ಕೆ ಬರಲಿದೆ. ಭಾನು-ಮಂಗಳ-ಬುಧ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಇಷ್ಟುದಿನ ಕುಂಠಿತವಾಗಿದ್ದ ಮಕ್ಕಳ ವಿದ್ಯಾಭ್ಯಾಸ ಇನ್ನು ಮುಂದೆ ಸರಿದಾರಿಗೆ ಬರಲಿದೆ. ಧಾರ್ಮಿಕ ಕಾರ್ಯಗಳಿಗೆ ವಿಶೇಷ ದೇಣಿಗೆ, ಪದವೀಧರರಿಗೆ ಅದೃಷ್ಟದ ಬಾಗಿಲೇ ತೆರೆಯಲಿದೆ. ಆದರೆ ಆಯ್ಕೆಯಲ್ಲಿ ಎಚ್ಚರದಿಂದಿರುವುದು ಲೇಸು. ಹದಗೆಟ್ಟಿದ್ದ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ, ಶೃಂಗಾರ ಅಥವಾ ಸೌಂದರ್ಯ ವರ್ಧಕ ಸಾಮಗ್ರಿಗಳ ಮಾರಾಟಗಾರರಿಗೆ ಲಾಭ, ಸರ್ಕಾರಿ ನೌಕರರಿಗೆ ಮುಂಬಡ್ತಿಯೊಂದಿಗೆ ಪದೋನ್ನತಿ, ಆದಾಯವೂ ಜೊತೆಗೆ ಹೆಚ್ಚಲಿದೆ. ಹಿಂದೆ ಆರಂಭಿಸಿದ ಕೆಲಸ ಕಾರ್ಯಗಳಲ್ಲಿ ತಾತ್ಕಾಲಿಕ ಹಿನ್ನಡೆ ಕಂಡುಬರಬಹುದು. ಕಾರ್ಯ ಸಾಧನೆಗಾಗಿ ದೇವೀ ಆರಾಧನೆ ಮಾಡಿರಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಹಳೇಮನೆ ರಿಪೇರಿ ಮಾಡಿಸುವ ಅಥವಾ ಹೊಸಮನೆ ಕಟ್ಟುವ ವಿಚಾರ ಬರೀ ಚರ್ಚೆಯಲ್ಲಿ ಕಳೆಯದೆ ಕಾರ್ಯರೂಪಕ್ಕೆ ತರಲು ಪ್ರಯತ್ನಿಸಿ. ಹಣಕಾಸು ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ನಿಮ್ಮ ಮಾತಿಗೆ ಹೆಚ್ಚಿನ ಬೆಲೆಯಿರುವುದು, ಕ್ರೀಡಾಪಟು ಗಳಿಗೆ ಕ್ರಮೇಣ ಉತ್ತೇಜನ ಸಿಗಲಿದೆ. ತೋಟಗಾರಿಕೆ, ವಾಣಿಜ್ಯ ಬೆಳೆಗಳಿಂದ ಹೆಚ್ಚಿನ ಲಾಭ, ಅವಿವಾಹಿತರಿಗೆ ಕಂಕಣಬಲವಿಲ್ಲ, ಉದ್ಯೋಗ ನಿಮಿತ್ತ, ಪರಸ್ಥಳ ವಾಸ, ಸಾಧ್ಯ ವಾದಷ್ಟು ಪರಾವಲಂಬನೆ ಮಾಡದಿರುವುದು ಉತ್ತಮ. ಹಿರಿಯರು ಕೊಡುವ ಸಲಹೆ ಗಳು, ಸಕಾಲಿಕ ಹಾಗೂ ಮುಂದೆ ಲಾಭದಾಯಕ ಎಂಬುದು ನೆನಪಿರಲಿ. ಶೀತ-ಜ್ವರದ ಬಾಧೆ ಉತ್ಸಾಹವನ್ನು ಕುಗ್ಗಿಸಬಹುದು. ಸೋಮ-ಮಂಗಳ-ಬುಧ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಹಲವು ಜನರು ಕೊಡುವ ಸಲಹೆಗಳು ನಿಮ್ಮ ಉತ್ಸಾಹವನ್ನು ಕುಗ್ಗಿಸಬಹುದು, ಸಂಶೋಧಕರಿಗೆ ಅನುದಾನದ ಕೊರತೆಯಿಂದ ಉತ್ಸಾಹ ಕುಗ್ಗಬಹುದು. ಖಾಸಗಿ ನೌಕರರಿಗೆ ಕರ್ತವ್ಯದಲ್ಲಿ ಉದಾಸೀನತೆ, ಅರಣ್ಯ ರಕ್ಷಣಾಧಿಕಾರಿಗಳಿಗೆ, ಮೇಲಾಧಿಕಾರಿಗಳ ಕಣ್ಗಾವಲು ಹೆಚ್ಚಲಿದೆ. ಅತಿಯಾದ ಸಂಶಯ ಸ್ನೇಹವನ್ನು ಕೆಡಿಸಬಹುದು.ಹಣಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಾಗಿರುವುದು ಒಳ್ಳೆಯದು. ಅತಿಥಿಗಳ ನಿರಂತರಾಗಮನದಿಂದ ಖರ್ಚು, ಕೃಷಿಕ ಮಿತ್ರರಿಗೆ ಕೆಲಸಗಳು ನಿರಾತಂಕವಾಗಿ ನಡೆಯಲಿದೆ. ಹಿರಿಯರೊಂದಿಗೆ ಸಹನೆಯಿಂದ ವರ್ತಿಸಿ. ಔಷಧಿ ವ್ಯಾಪಾರಿಗಳಿಗೆ ಹಾಗೂ ಖಾದ್ಯತೈಲ ವ್ಯಾಪಾರಿಗಳಿಗೆ ವಹಿವಾಟು ಹೆಚ್ಚಲಿದೆ. ಭಾನು-ಸೋಮ-ಬುಧ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಮೋಜು-ಮಸ್ತಿ, ಮನರಂಜನೆಯಲ್ಲೇ ಕಾಲ ಕಳೆಯುವಿರಿ, ಆದರೆ ಅತಿಯಾದಲ್ಲಿ ಅಪಾಯವೇ ಹೆಚ್ಚು, ಪಾಲುದಾರಿಕೆ ವ್ಯವಹಾರದಲ್ಲಿ ಭಿನ್ನಾಭಿಪ್ರಾಯ ಬರಬಹುದಾದ ಸಮಸ್ಯೆಗಳನ್ನು ತಾಳ್ಮೆಯಿಂದ ಬಗೆಹರಿಸಲು ಈಗಿನಿಂದಲೇ ಮಾನಸಿಕವಾಗಿ ಸಜ್ಜಾಗುವುದು ಲೇಸು. ಅರ್ಥವಿಲ್ಲದ ಖರ್ಚು ವ್ಯರ್ಥಕ್ಕೆ ದಾರಿಯಾದೀತು. ವೈದ್ಯ ವೃತ್ತಿಯಲ್ಲಿರುವವರು ತುಸು ಎಚ್ಚರದಿಂದ ಕರ್ತವ್ಯ ನಿರ್ವಹಿಸಿ, ಖಾಸಗಿ ಕಂಪನಿಯಲ್ಲಿರುವ ನೌಕರರ ವೇತನದಲ್ಲಿ ಹೆಚ್ಚಳ ಮಾಡುವ ಪ್ರಸ್ತಾಪ ಆಡಳಿತ ಮಂಡಳಿಯ ಮುಂದೆ ಬರಲಿದೆ. ಚಿಕ್ಕಮಕ್ಕಳ ಚಟುವಟಿಕೆ ಬಗ್ಗೆ ನಿಗಾ ಇರಲಿ. ದರ್ಜಿಗಳ ಆದಾಯ ಹೆಚ್ಚಲಿದೆ. ಗುರುಗಳ ಸೇವೆ ಮಾಡಿರಿ. ಭಾನು-ಮಂಗಳ-ಬುಧ-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವಿರಿ, ದೇಹಾಲಸ್ಯದಿಂದ ಆರೋಗ್ಯದ ಮೇಲೆ ಅಡ್ಡಪರಿಣಾಮ. ಲೇವಾದೇವಿ ವ್ಯವಹಾರದಲ್ಲಿ ತೊಡಗಿ ಕೊಂಡವರಿಗೆ ಆದಾಯ ಹೆಚ್ಚಿದರೂ ಅಡಚಣೆಗಳು ಬಹಳ. ನೃತ್ಯ ಕಲಾವಿದರ ಪ್ರತಿಭಾ ಪ್ರದರ್ಶನಕ್ಕೆ ಉತ್ತಮ ವೇದಿಕೆ, ಸಂಕಲ್ಪಿತ ಕಾರ್ಯಗಳೆಲ್ಲವೂ ಇನ್ನು ಕೆಲವೇ ದಿನಗಳಲ್ಲಿ ಈಡೇರಲಿದೆ.ಕುಟುಂಬ ಸಮೇತ ಪುಣ್ಯಕ್ಷೇತ್ರಗಳ ದರ್ಶನಭಾಗ್ಯ, ಮಗನಿಂದ ಸಿಗಬಹುದಾದ ಧನ ಸಹಾಯವನ್ನು, ನಿಸ್ಸಂಕೋಚವಾಗಿ ತೆಗೆದುಕೊಳ್ಳಿ. ವ್ಯಾಪಾರಿಗಳು ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸಿ. ಮಂಗಳ-ಬುಧ-ಶನಿ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಮೂಳೆ ಮತ್ತು ಮಜ್ಜೆ ಶಸ್ತ್ರಚಿಕಿತ್ಸಕರಿಗೆ ವಿದೇಶದಲ್ಲಿ ಹೇರಳ ಅವಕಾಶಗಳು, ರಕ್ಷಣಾ ಇಲಾಖೆಯವರಿಗೆ ಕರ್ತವ್ಯ ನಿರ್ವಹಿಸುವಾಗ ಅನೇಕ ಅಡಚಣೆಗಳು, ವಿದ್ಯುತ್ ಗುತ್ತಿಗೆದಾರರಿಗೆ ಕೆಲಸಗಾರರ ಸಮಸ್ಯೆಗಳು ಎದುರಾಗಲಿವೆ. ಸೋದರರ ನಡುವೆ ಆಸ್ತಿಗೆ ಸಂಬಂಧಪಟ್ಟ ವಿವಾದಗಳು ಸುಖಾಂತ್ಯ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವಂತೆ ಸ್ನೇಹಿತರಿಂದ ಒತ್ತಡ, ಆದರೆ ದುಡುಕಿದಲ್ಲಿ ನಷ್ಟ. ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವವರಿಗೆ ಸರ್ಕಾರದಿಂದ ಗೌರವ ಸಲ್ಲಲಿದೆ. ಹೆಚ್ಚುತ್ತಿರುವ ಆದಾಯ ಅಪವ್ಯಯವಾಗದಂತೆ ಮುನ್ನೆಚ್ಚರಿಕೆ ವಹಿಸಿರಿ. ಸುಧಾರಿಸಿದ ಆರೋಗ್ಯ ಜೀವನೋತ್ಸಾಹ ತುಂಬಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯು.)**

ಅನೇಕ ಸಂಘ-ಸಂಸ್ಥೆಗಳಿಗೆ ದಾನ, ಧರ್ಮಗಳನ್ನು ಮಾಡಿದ ಸಂತೃಪ್ತಿ ನಿಮ್ಮದಾಗಲಿದೆ. ಜನ ಸೇವೆಯಲ್ಲಿಯೇ ಜನಾರ್ದನನನ್ನು ಕಾಣುವ ಪರಿ ಅಪರಿಮಿತ. ಪ್ರೇಮಿಗಳು ತಮ್ಮ ಮುಂದಿನ ಜೀವನದ ಬಗ್ಗೆ ಒಂದು ನಿರ್ಧಾರಕ್ಕೆ ಬರುವುದು ಲೇಸು. ಜನಪ್ರತಿನಿಧಿಗಳಿಗೆ ಜನರಿಂದ ಪ್ರಶಂಸೆ ಮಾತುಗಳು ಕೇಳಿಬರಲಿವೆ. ಒಮ್ಮೆ ತೆಗೆದುಕೊಂಡ ನಿರ್ಧಾರಗಳನ್ನು ಪದೇ ಪದೇ ಬದಲಾಯಿಸಬೇಡಿ. ಸಹೋದ್ಯೋಗಿಗಳೊಂದಿಗಿದ್ದ ಮನಸ್ತಾಪಗಳು ದೂರವಾಗಲಿವೆ, ವ್ಯಾಪಾರದಲ್ಲಿ ವಿಶ್ವಾಸ ವೃದ್ಧಿಸಲಿದೆ. ಚಾಡಿ ಮಾತುಗಳನ್ನು ನಂಬಿ ಕುಟುಂಬದ ನೆಮ್ಮದಿಯನ್ನು ಹಾಳುಗೆಡವಬೇಡಿ. ಭಾನು-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಅತಿಯಾದ ದುಂದುವೆಚ್ಚ ಗಳಿಕೆಯೊಂದಿಗೆ ನಿಮ್ಮ ಉಳಿತಾಯದ ಗಂಟನ್ನೂ ಕರಗಿಸಬಹುದು. ರಾಜಕಾರಣಿಗಳ ಮಾತನ್ನು ನಂಬಿಯೂ ನಂಬದಂತಿರುವುದು ಬುದ್ಧಿವಂತರ ಲಕ್ಷಣ, ನವ ವಿವಾಹಿತರಲ್ಲಿ ಸಾಮರಸ್ಯ ಮೂಡಲಿದೆ. ಹಿರಿಯರ ಆರೋಗ್ಯದಲ್ಲಿದ್ದ ಸಮಸ್ಯೆಗಳು ಪರಿಹಾರವಾಗಿ, ನೆಮ್ಮದಿ ಮೂಡಲಿದೆ. ವೈಯುಕ್ತಿಕ ವ್ಯವಹಾರದಲ್ಲಿ, ತೊಡಕುಗಳು ಕಂಡುಬರಬಹುದು. ಉದ್ಯೋಗ ಅಥವಾ ವ್ಯವಹಾರಸ್ಥರಿಗೆ ಸಾಕಷ್ಟು ಅಭಿವೃದ್ಧಿ ಕಂಡುಬರಲಿದೆ. ಸಿನಿಮಾ ಹಿನ್ನೆಲೆ ಗಾಯಕರಿಗೆ ಹೇರಳ ಅವಕಾಶಗಳು ಲಭಿಸಲಿವೆ. ವೈದ್ಯರ ಸಲಹೆ ಪಡೆದು, ನಿಮ್ಮ ಆರೋಗ್ಯ ಸುಧಾರಿಸಿಕೊಳ್ಳಿ, ವಿಷ್ಣು ಸಹಸ್ರನಾಮ ಪಠಣದಿಂದ ಉತ್ತಮ ಫಲಗಳು ದೊರೆಯಲಿವೆ. ಗುರು-ಶುಕ್ರ-ಶನಿ-ಶುಭ ದಿನಗಳು

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಶ್ರದ್ಧೆ, ಶಿಸ್ತು ಹಾಗೂ ಕಠಿಣ ಪರಿಶ್ರಮದಿಂದ ಮಾತ್ರ ಯಶಸ್ಸು. ಸಂತಾನಾಪೇಕ್ಷಿಗಳಿಗೆ ಶುಭ ಸಮಾಚಾರ. ಗೃಹಿಣಿಯರು ಅತಿಯಾದ ವಾಗ್ವಾದಗಳಿಂದ ಮನೆಯಲ್ಲಿ ಹಿರಿಯರೊಂದಿಗೆ ನಿಷ್ಠೂರ ಕಟ್ಟಿಕೊಳ್ಳಬಹುದು. ಗುತ್ತಿಗೆದಾರರಿಗೆ ಹೆಚ್ಚಿನ ಅವಕಾಶಗಳು, ಮಕ್ಕಳಿಗೆ ಶಿಸ್ತಿನ ಪಾಠ ಹೇಳಿಕೊಡದೇ ಹೋದಲ್ಲಿ ತೊಂದರೆ ಅನುಭವಿಸಬೇಕಾದೀತು. ವಿವಾಹಾಕಾಂಕ್ಷಿಗಳಿಗೆ ಉತ್ತಮ ಸಂಬಂಧಗಳು ತಾವಾಗಿಯೇ ಬರಲಿವೆ. ಸಾರ್ವಜನಿಕ ಮುಂದಾಳತ್ವ ವಹಿಸುವುದರಿಂದ ನಿಮ್ಮ ವೈಯಕ್ತಿಕ ವರ್ಚಸ್ಸಿಗೆ ಧಕ್ಕೆಬರಬಹುದು. ಆಡಳಿತಾತ್ಮಕ ಹುದ್ದೆಯಲ್ಲಿರುವವರಿಗೆ ಜವಾಬ್ದಾರಿ ಹೆಚ್ಚಲಿದೆ. ಸಾಧ್ಯವಾದಲ್ಲಿ ಪ್ರಯಾಣಗಳನ್ನು ಮುಂದೂಡುವುದು ಉತ್ತಮ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ರಾಜಕಾರಣಿಗಳಿಗೆ ವಿರೋಧಿಗಳ ತೀವ್ರ ವಿರೋಧದ ನಡುವೆಯೂ ತಮ್ಮ ಹುದ್ದೆಯನ್ನುಳಿಸಿಕೊಳ್ಳುವುದಕ್ಕೆ, ಹರಸಾಹಸ ಪಡಬೇಕಾದೀತು. ಮನೆಯ ಖರ್ಚು-ವೆಚ್ಚಗಳಿಗೆ ಗಮನ ಕೊಡದೇ ಹೋದಲ್ಲಿ, ಆರ್ಥಿಕತೆ ಬುಡಮೇಲಾದೀತು. ಮನೆಯಲ್ಲಿ ವಿಶೇಷ ಶಾಂತಿ-ಕರ್ಮಗಳು ನಿಮ್ಮ ನೇತೃತ್ವದಲ್ಲಿ ನಡೆಯಲಿವೆ. ಅತಿಯಾದ ಹಠಮಾರಿತನ ನಿಮ್ಮ ಯಶಸ್ಸಿನ ವೇಗಕ್ಕೆ ಧಕ್ಕೆಯುನ್ನುಂಟು ಮಾಡಬಹುದು. ವಿದ್ಯಾರ್ಥಿಗಳು, ಶ್ರಮಕ್ಕೆ ತಕ್ಕ ಫಲ ಪಡೆಯುವರು. ಆತ್ಮೀಯರೊಬ್ಬರ ಅನಾರೋಗ್ಯ ವಾರ್ತೆ ನಿಮ್ಮನ್ನು ಕಂಗೆಡಿಸಲಿದೆ. ಉದ್ಯೋಗ ಭದ್ರತೆಗೆ ಮೇಲಾಧಿಕಾರಿಗಳ ಮರ್ಜಿ ಹಿಡಿಯದೇ ವಿಧಿಯಿಲ್ಲ. ಆರೋಗ್ಯದ ಬಗ್ಗೆ ಅಲಕ್ಷೆ ಬೇಡ. ಕುಲದೇವತಾರಾಧನೆ ಮಾಡಿ. ಭಾನು-ಶುಕ್ರ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮಹಿಳೆಯರು ವಿಶೇಷ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವರು. ಆದರೆ ಇದು ದೇಹಾರೋಗ್ಯದ ಮೇಲೆ ಅಡ್ಡಪರಿಣಾಮ ಬೀರದಂತೆ ಎಚ್ಚರವಹಿಸಿ, ಕೌಟುಂಬಿಕ ವಾದ-ವಿವಾದಗಳು ಇಷ್ಟರಲ್ಲೇ ಬಗೆಹರಿಯಲಿವೆ. ಸಂಪಾದನೆಯಲ್ಲೂ ಸಾಕಷ್ಟು ಏರುಮುಖ ಕಾಣಲಿದೆ. ಆದರೆ ಗಳಿಕೆ ದುರುಪಯೋಗವಾಗದಂತೆ ನೋಡಿಕೊಳ್ಳಿ. ತಾಯಿಯ ತವರುಮನೆ ಕಡೆಯಿಂದ ಸಾಕಷ್ಟು ನೆರವು ಹರಿದುಬರಲಿದೆ. ಬದುಕಿನಲ್ಲಿ ಬದಲಾವಣೆ ಅನಿವಾರ್ಯ, ಸಂತಾನಾಪೇಕ್ಷಿಗಳಿಗೆ ಶುಭವಾರ್ತೆ, ಸ್ನೇಹಿತರ ಸಹಾಯ ಸಕಾಲದಲ್ಲಿ ಸಿಗಲಿದೆ. ವಿವಾದಾತ್ಮಕ ವಿಷಯಗಳನ್ನು, ಕೋರ್ಟ್-ಕಛೇರಿಯೆಂದು ಅಲೆಯದೇ, ರಾಜೀ ಪಂಚಾಯ್ತಿ ಮೂಲಕ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ, ಗುರುಗಳ ಅನುಗ್ರಹ ಹೆಚ್ಚು ಹೆಚ್ಚು ಸಂಪಾದಿಸಲು ಪ್ರಯತ್ನಿಸಿ. ಸೋಮ-ಗುರು-ಶುಕ್ರ-ಶುಭ ದಿನಗಳು.

# ಮೂಲಭೂತ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಿ



**ಲಕ್ಕಶೆಟ್ಟಿಹಳ್ಳಿ : ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಅಧಿಕಾರಿಗಳಿಗೆ ಶಾಸಕ ಎಸ್. ರಾಮಪ್ಪ ಕರೆ**

ಮಲೇಬೆನ್ನೂರು, ಮಾ.20- ಗ್ರಾಮ ವಾಸ್ತವ್ಯ ಮಾಡಿದ ಹಳ್ಳಿಯಲ್ಲಿರುವ ಮೂಲಭೂತ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸುವಂತೆ ಶಾಸಕ ಎಸ್. ರಾಮಪ್ಪ ಅವರು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಅವರು ಶನಿವಾರ ಲಕ್ಕಶೆಟ್ಟಿಹಳ್ಳಿ ಗ್ರಾಮದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ವಿವಿಧ ಸೌಲಭ್ಯಗಳನ್ನು ವಿತರಿಸಿ ಮಾತನಾಡಿದರು.

ಲಕ್ಕಶೆಟ್ಟಿಹಳ್ಳಿ ಗ್ರಾಮದಲ್ಲಿರುವ ಎಲ್ಲಾ ಸಮಸ್ಯೆಗಳಿಗೆ ಹಂತ ಹಂತವಾಗಿ ಪರಿಹಾರ ಒದಗಿಸುವ ಭರವಸೆ ನೀಡಿದ ಶಾಸಕರು, ಅಧಿಕಾರಿಗಳು ಗ್ರಾಮ ವಾಸ್ತವ್ಯ ಮಾಡಿದ ಹಳ್ಳಿಗಳು ಮಾದರಿಯಾಗಬೇಕೆಂದು ಆಶಿಸಿದರು.

ಸರ್ಕಾರದ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ನೇರವಾಗಿ ದೊರಕಿಸಬೇಕೆಂಬ ನಿಟ್ಟಿನಲ್ಲಿ ಸರ್ಕಾರ ಈ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಎಲ್ಲಾ ಅಧಿಕಾರಿಗಳು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕೆಂದು ಶಾಸಕ ರಾಮಪ್ಪ ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ರೈತರು, ಮಹಿಳೆಯರು, ಮಕ್ಕಳು, ಕಾರ್ಮಿಕರು ಸೇರಿದಂತೆ ಎಲ್ಲಾ ವರ್ಗದ ಜನರ ಸಮಸ್ಯೆಗಳ ಬಗ್ಗೆ ಅರ್ಜಿ ನೀಡಿದರೆ ತಕ್ಷಣ ಪರಿಹಾರಕ್ಕೆ ಗಮನಹರಿಸುತ್ತೇವೆ. ಕೋವಿಡ್ ಬಗ್ಗೆ ಯಾರೂ ನಿರ್ಲಕ್ಷ ಮಾಡದೆ ಜಾಗೃತಿ ವಹಿಸಿ ಎಂದು ತಹಶೀಲ್ದಾರ್ ಮನವಿ ಮಾಡಿದರು. ಗ್ರಾ.ಪಂ. ಅಧ್ಯಕ್ಷ ಮಲ್ಲಿಕಾರ್ಜುನಪ್ಪ ಅಧ್ಯಕ್ಷತೆ ವಹಿಸಿದ್ದರು.

ಪರೀಕ್ಷಾರ್ಥ ಉಪವಿಭಾಗಾಧಿಕಾರಿ ದುರ್ಗಾಶ್ರೀ, ತಾ. ಪಂ. ಇಓ ಗಂಗಾಧರ್, ಟಿಹೆಚ್‌ಓ ಡಾ. ಚಂದ್ರಮೋಹನ್, ಉಪತಹಶೀಲ್ದಾರ್ ಆರ್. ರವಿ, ಸಹಾಯಕ ಕೃಷಿ ನಿರ್ದೇಶಕ ಗೋವರ್ಧನ್, ಬೆಸ್ಕಾಂ ಎಇಇ ಲಕ್ಷ್ಮಣ, ಭೂ ದಾಖಲೆಗಳ ಸಹಾಯಕ ನಿರ್ದೇಶಕಿ ಶ್ರೀಮತಿ ಕಸ್ತೂರಿ, ತೋಟಗಾರಿಕೆ ಇಲಾಖೆಯ ರೇಖಾ, ಸಮಾಜ ಕಲ್ಯಾಣ ಇಲಾಖೆಯ ನಾಸೀರ್ ಹುಸೇನ್, ಕಾರ್ಮಿಕ ಇಲಾಖೆಯ ಕವಿತಾ ಸೇರಿದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು, ಗ್ರಾ.ಪಂ. ಸದಸ್ಯರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಗಳಲ್ಲಿ ಜನರಿಗೆ ಸಿಗುವ ಸೌಲಭ್ಯ ಕುರಿತು ವಸ್ತು ಪ್ರದರ್ಶನದ ಮೂಲಕ ತಿಳಿಸಲಾಯಿತು.

ವಿವಿಧ ಸೌಲಭ್ಯಗಳನ್ನು ಕೋರಿ 44 ಜನರು ಅರ್ಜಿ ಸಲ್ಲಿಸಿದ್ದರು. ಅವುಗಳಲ್ಲಿ ಬಹುತೇಕ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಲಾಗಿದೆ ಎಂದು ತಹಶೀಲ್ದಾರ್ ರಾಮಚಂದ್ರಪ್ಪ ತಿಳಿಸಿದರು.

ಕಾರ್ಯಕ್ರಮದಲ್ಲಿ 96 ಜನರಿಗೆ ಕೋವಿಡ್ ಟೆಸ್ಟ್ ಮತ್ತು 106 ಜನರಿಗೆ ಆರೋಗ್ಯ ತಪಾಸಣೆ ಮಾಡಲಾಯಿತೆಂದು ಹಿರಿಯ ಆರೋಗ್ಯ ಸಹಾಯಕ ಎಂ. ಉಮ್ಮಣ್ಣ ತಿಳಿಸಿದರು.

**ವಾಸ್ತವ್ಯ :** ಶನಿವಾರ ರಾತ್ರಿ ಗ್ರಾಮದ ಸ.ಹಿ.ಪ್ರಾ. ಶಾಲೆಯಲ್ಲಿ ವಾಸ್ತವ್ಯ ಮಾಡಿರುವ ಅಧಿಕಾರಿಗಳು ಭಾನುವಾರ ಬೆಳಿಗ್ಗೆ ಸ್ವಚ್ಛತಾ ಕಾರ್ಯಕೈಗೊಂಡು ತೆರಳಿದ್ದಾರೆ ಎಂದು ಪಿಡಿಓ ರಾಮನಗೌಡ ತಿಳಿಸಿದ್ದಾರೆ.

# ವಿನೂತನ ಮಹಿಳಾ ಸಮಾಜದಿಂದ ಜಾನಪದ ಸಂಭ್ರಮ

ದಾವಣಗೆರೆ, ಮಾ.20- ಇಲ್ಲಿನ ವಿನೂತನ ಮಹಿಳಾ ಸಮಾಜದಲ್ಲಿ ಜಾನಪದ ಸಂಭ್ರಮ ಕಾರ್ಯಕ್ರಮ ಸಾಂಪ್ರದಾಯಿಕವಾಗಿ ಗ್ರಾಮೀಣ ಸೊಗಡು ಬಿಂಬಿಸುವ ಹಳೆ ವಸ್ತು ಪ್ರದರ್ಶನದ ಮೆರಗಿನೊಂದಿಗೆ ನಡೆಯಿತು.

ನಗರ ಪಾಲಿಕೆ ಸದಸ್ಯೆ ವೀಣಾ ನಂಜಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಜಾನಪದ ನೃತ್ಯ ಸ್ಪರ್ಧೆಯಲ್ಲಿ ಗಂಡು ಕಲೆಗಳಾದ ಡೊಳ್ಳು, ವೀರಗಾಸೆ, ಕಂಸಾಳೆ, ಕೋಲಾಟ ಹಾಗೂ ಹಲವು ನೃತ್ಯ ಪ್ರಕಾರಗಳನ್ನು ಮಹಿಳೆಯರು ಪ್ರದರ್ಶಿಸಿದರು. ಅದರಲ್ಲಿ ಪ್ರಥಮ ಬಹುಮಾನ ವೀರಗಾಸೆ, ದ್ವಿತೀಯ ಡೊಳ್ಳು, ತೃತೀಯ ಭಾಗ್ಯದ ಬಳೆಗಾರ ನೃತ್ಯಕ್ಕೆ, ಕಂಸಾಳೆ ಹಾಗೂ ಫುಲ್ಲು ಫುಲ್ ಎನ್ನುತ ನೃತ್ಯಕ್ಕೆ ಸಮಾಧಾನಕರ ಬಹುಮಾನ ನೀಡಲಾಯಿತು.




ಹೇಮಾ ಶಾಂತಪ್ಪ ಪೂಜಾರಿ ಹಾಗೂ ದೀಪಾ ಶಿವಕುಮಾರ್ ತೀರ್ಪುಗಾರರಾಗಿ ಕಾರ್ಯ ನಿರ್ವಹಿಸಿದರು.

ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ರೇಖಾ ಓಂಕಾರಪ್ಪ ಅಧ್ಯಕ್ಷತೆ ವಹಿಸಿದ್ದರು. ಮಮತ ಸುರೇಶ್, ಲಲಿತಾ ಪಾಟೀಲ್, ಮಂಜುಳ ನಾಗರಾಜ್, ಲೀಲಾಶೇಖರ್, ಸಾವಿತ್ರಿ ಗವಿಸಿದ್ದೇಶ್ ಸೇರಿದಂತೆ ಇತರರಿದ್ದರು.

ಝೇಂಕಾರ ತಂಡದಿಂದ ಪ್ರಾರ್ಥಿಸಲಾಯಿತು. ಸುಧಾ ಪಾಟೀಲ್ ಸ್ವಾಗತಿಸಿದರು. ಮಮತ ಜೈಕುಮಾರ್ ಅತಿಥಿ ಪರಿಚಯ ಮಾಡಿದರು. ಶಶಿ ಶಿವಯ್ಯ ತೀರ್ಪುಗಾರರ ಪರಿಚಯ ಮಾಡಿದರು. ಶೈಲಜಾ ತಿಮ್ಮೇಶ್ ನಿರೂಪಿಸಿದರು.

# ಪದವಾಣಿ-24

- ನಾಗರಾಜು ಗೊಡಬನಹಾಳ್



**ಎಡದಿಂದ ಬಲಕ್ಕೆ :**

| | |
|---|---|
| 1) ಶಾಖದ ಮಟ್ಟವನ್ನು ಅಳೆಯುವ ಯಂತ್ರ | 4 |
| 3) ಅನೇಕ ಸಂಚಿಕೆಗಳಲ್ಲಿ ಪ್ರಕಟವಾಗುವ ಕಥೆ, ಕಾದಂಬರಿ | 4 |
| 7) ಲಿಖಿತದ ಮೂಲಕ ಮಾಡಿಕೊಳ್ಳುವ ಅರಿಕೆ | 3 |
| 8) ಮೂಲದ ಪ್ರತಿಕೃತಿ | 3 |
| 10) ಕ್ರಮಬದ್ಧವಾದ ಎಂಬರ್ಥದ ಪದ | 3 |
| 11) ಉಪದ್ರವ ಎಂಬರ್ಥದ ಪದ ತಿರುಗಿದೆ | 3 |
| 13) ರಾಜನ ಸಭೆಯ ದರ್ಬಾರು | 3 |
| 15) ಸದ್ಯದ ಸಮಯ, ವರ್ತಮಾನಕಾಲ | 3 |
| 16) ಸಜ್ಜನಿಕೆಯಿಂದ ಕೂಡಿದ ಒಳ್ಳೆಯ ಮನುಷ್ಯ | 3 |
| 18) ತುಪಾಕಿಯ ಪರ್ಯಾಯ ಪದ | 3 |
| 19) ಗೋಡೆಯ ಮೇಲೆ ಬರೆದ ಚಿತ್ರ | 4 |
| 20) ದೂರದರ್ಶನದಲ್ಲಿ ಪ್ರಸಾರವಾಗುವ ಧಾರಾವಾಹಿ | 4 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಯಕ್ಷಗಾನದ ಒಂದು ಪ್ರಭೇದ | 5 |
| 2) ಮಾಟ ಮಾಡುವ ಮಂತ್ರಗಾರ | 3 |
| 4) ರುಚಿಯನ್ನು ನೋಡುವ ನಾಲಗೆ | 3 |
| 5) ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಉರಿಸುವ ಪಂಜು | 3 |
| 6) ನಿಷೇಧಿಸಿರುವ ಸ್ಥಳಕ್ಕೆ ಪ್ರವೇಶ ಮಾಡುವುದು | 7 |
| 9) ಮೂರಕ್ಷರದ ಕೆನ್ನೆ | 3 |
| 12) ತಲೆಮಾರು ತಲೆಕೆಳಗಾಗಿದೆ | 3 |
| 14) ಲೆಕ್ಕ ಮಾಡುವ ಕಂಪ್ಯೂಟರ್ | 5 |
| 16) ದೇವಲೋಕದ ಕಾಮಧೇನು | 3 |
| 17) ಹೊಳೆಗಳಿಂದ ಬಂದ ಸಮುದ್ರ | 3 |
| 18) ಹಡಗು ನಿಲ್ಲುವ ಸ್ಥಳ | 3 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 23ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ಜಮಖಾನೆ 3) ರಂಗಗೀತೆ 5) ಕೆರಕ 7) ರಸಿಕ 9) ಹರಕೆ 10) ಬಾಲಚಂದಿರ 11) ಕನ್ನಡ 12) ಸುದಿನ 14) ಮನವಿ 16) ವಿಕಿರಣ 17) ಅಶ್ವಮೇಧ.

ಮೇಲಿನಿಂದ ಕೆಳಕ್ಕೆ : 1) ಜತೆಗಾರ 2) ನೆರಕೆ 3) ರಂಜಕ 4) ತೆಗಳಿಕೆ 6) ರಕ್ತಚಂದನ 8) ಕಬಾಡ 9) ಹರಸು 11) ಕಲಾದವಿ (ಕಲಾವಿದ) 13) ನರಮೇಧ 14) ಮಸಣ 15) ವಿಡಅ (ಅಡವಿ)

# ನಗರದಲ್ಲಿ ಇಂದು ಜೆಂಬಿಗಿ ಮೃತ್ಯುಂಜಯ ಅವರ ಕೃತಿಗಳ ಲೋಕಾರ್ಪಣೆ



ಜೆಂಬಿಗಿ ಮೃತ್ಯುಂಜಯ ಅವರು ತಾಲ್ಲೂಕಿನ ಶ್ಯಾಗಲೆ ಗ್ರಾಮದವರು. ದಿನಾಂಕ 04.05.1976 ರಲ್ಲಿ ಜೆಂಬಿಗಿ ಮನೆತನದ ಜೆಂಬಿಗಿ ವೀರಣ್ಣ ಮತ್ತು ಶ್ರೀಮತಿ ಚಂದ್ರಮ್ಮ ದಂಪತಿಯ ಜೇಷ್ಠ ಪುತ್ರರಾಗಿ ಜನಿಸಿದರು. ತಮ್ಮ ಪ್ರಾಥಮಿಕ, ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಶ್ಯಾಗಲೆಯಲ್ಲಿ ಪೂರೈಸಿ, ಪದವಿ ಪೂರ್ವ ಶಿಕ್ಷಣವನ್ನು ದಾವಣಗೆರೆಯಲ್ಲಿ ಓದಿ, ಪದವಿ ತರಗತಿಯನ್ನು ನಗರದ ಎಂ.ಎಸ್.ಬಿ. ಕಾಲೇಜಿನಲ್ಲಿ ವ್ಯಾಸಂಗ ಮಾಡಿ 1997 ರಲ್ಲಿ ಕುವೆಂಪು ವಿಶ್ವವಿದ್ಯಾನಿಲಯದಿಂದ ಪದವಿ ಪಡೆದು ಸ್ನಾತಕೋತ್ತರ ಪದವಿ ಅಧ್ಯಯನಕ್ಕಾಗಿ ತಮಿಳುನಾಡಿನ ರಾಜಧಾನಿ ಚೆನ್ನೈನ ಮದ್ರಾಸ್ ವಿದ್ಯಾನಿಲಯಕ್ಕೆ ತೆರಳಿ 1999 ರಲ್ಲಿ ದ್ವಿತೀಯ ರ್‍ಯಾಂಕ್‌ನೊಂದಿಗೆ ಸ್ನಾತಕೋತ್ತರ ಪದವಿ ಗಳಿಸಿ, ನಗರದ ಬಾಪೂಜಿ ನರ್ಸಿಂಗ್ ಕಾಲೇಜಿನಲ್ಲಿ ಕಳೆದ ಇಪ್ಪತ್ತು ವರ್ಷಗಳಿಂದ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. 2010 ರಲ್ಲಿ ಬಾಪೂಜಿ ವಿದ್ಯಾಸಂಸ್ಥೆಯಿಂದ ಮಲೇಷಿಯಾ, ಕೆ.ಟಿ.ಟಿ. ವಿದ್ಯಾಸಂಸ್ಥೆಗೆ ನಿಯೋಜಿತರಾಗಿ ಮೂರು ತಿಂಗಳು ಮಲೇಷಿಯಾದ ವಿದ್ಯಾರ್ಥಿಗಳಿಗೆ ಕನ್ನಡ ಭಾಷಾ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದು, 2011 ರಲ್ಲಿ ಎರಡನೇ ಬಾರಿಗೆ ಮಲೇಷಿಯಾಕ್ಕೆ ತೆರಳಿ ಕನ್ನಡ ಭಾಷಾ ಉಪನ್ಯಾಸಕರಾಗಿ ಸೇವೆ ಸಲ್ಲಿಸಿರುತ್ತಾರೆ.

2007 ರಲ್ಲಿ ತಮ್ಮ ಪ್ರಥಮ ಕವನ ಸಂಕಲನ 'ಕ್ಯಾದಿಗೆ' ಬಿಡುಗಡೆ ಮಾಡಿ, ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ ಶ್ರೀಯುತರು, 2008 ರಲ್ಲಿ 'ಸಂಪಿಗೆ' ಎಂಬ ತಮ್ಮ ಎರಡನೇ ಕವನ ಸಂಕಲನ ಪ್ರಕಟಿಸಿರುತ್ತಾರೆ.

ಇದೀಗ 'ಮಲ್ಲಿಗೆ' ಕವನ ಸಂಕಲನ ಹಾಗೂ 'ದಾಸವಾಳ' ಚಿಂತನ ಲೇಖನಗಳು ಎಂಬ ಎರಡು ಕೃತಿಗಳನ್ನು ಪ್ರಕಟ ಮಾಡಿದ್ದಾರೆ. ಈ ಕೃತಿಗಳು ಇಂದು ಲೋಕಾರ್ಪಣೆಗೊಳ್ಳಲಿದೆ. ಕೃತಿಗಳ ಲೋಕಾರ್ಪಣೆ ಸಮಾರಂಭವು ಇಂದು ಬೆಳಿಗ್ಗೆ 10.30 ಕ್ಕೆ ಕುವೆಂಪು ಕನ್ನಡ ಭವನದಲ್ಲಿ ನಡೆಯಲಿದೆ.

ದಿವ್ಯ ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಶಾಮನೂರು ಶಿವಶಂಕರಪ್ಪ ಆಗಮಿಸಿ 'ದಾಸವಾಳ' ಕೃತಿ ಬಿಡುಗಡೆ ಮಾಡುವರು. ಅಥಣಿ ಎಸ್. ವೀರಣ್ಣ ಅವರು 'ಮಲ್ಲಿಗೆ' ಕವನ ಸಂಕಲನ ಬಿಡುಗಡೆ ಮಾಡುವರು. ಡಾ. ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆ ವಹಿಸುವರು.

**ಕೃತಿ ಅವಲೋಕನ :** 'ದಾಸವಾಳ' ಕೃತಿ - ಡಾ. ಶಶಿಕಲಾ ಕೃಷ್ಣಮೂರ್ತಿ, ಡಾ. ಪ್ರಕಾಶ್ ಹಲಗೇರಿ. 'ಮಲ್ಲಿಗೆ' ಕವನ ಸಂಕಲನ - ಎಚ್.ಬಿ. ಮಂಜುನಾಥ್.

ಅತಿಥಿ ನುಡಿಯನ್ನು ಭಾರತಿ ಕುಮಾರ್ ಜೆಂಬಿಗಿ ನಡೆಸಿ ಕೊಡುವರು. ಪ್ರಾಸ್ತಾವಿಕ ನುಡಿಯನ್ನು ಜೆಂಬಿಗಿ ಮೃತ್ಯುಂಜಯ ನಡೆಸಿ ಕೊಡುವರು.

**- ಕೆ.ಎನ್. ಸ್ವಾಮಿ**

# ಯಕ್ಕನಹಳ್ಳಿ ಬಸವೇಶ್ವರ ರಥೋತ್ಸವ

ಹೊನ್ನಾಳಿ, ಮಾ.20- ತಾಲ್ಲೂಕಿನ ಯಕ್ಕನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿ ರಥೋತ್ಸವ ಮಾ.25ರಂದು ನಡೆಯಲಿದೆ. ಮಧ್ಯಾಹ್ನ ಓಕುಳಿ, ಸಂಜೆ 4ಕ್ಕೆ ಎತ್ತುಗಳ ಮೆರವಣಿಗೆ, ರಾತ್ರಿ 7.30ಕ್ಕೆ ಶ್ರೀ ಬಸವೇಶ್ವರ ಸ್ವಾಮಿ ಅಡ್ಡಪಲ್ಲಕ್ಕಿ ಮಹೋತ್ಸವ ನಡೆಯಲಿವೆ.

24ರ ಬುಧವಾರ ಬೆಳಿಗ್ಗೆ ಉಚ್ಚಾಯ ಮಹೋತ್ಸವ ನಡೆಯಲಿದೆ. ಮಧ್ಯಾಹ್ನ ಕೂಲಂಬಿ ದುರ್ಗಮ್ಮ, ಕುಂದೂರು ಗ್ರಾಮದ ಶ್ರೀ ಆಂಜನೇಯ ಸ್ವಾಮಿ, ಯರೇಚಿಕ್ಕನಹಳ್ಳಿ ಶ್ರೀ ಬಸವೇಶ್ವರ ದೇವರುಗಳನ್ನು ವಿವಿಧ ವಾದ್ಯಗಳೊಂದಿಗೆ ಗ್ರಾಮಕ್ಕೆ ಬರಮಾಡಿಕೊಂಡು ಗದ್ದುಗೆಯಲ್ಲಿ ಪ್ರತಿಷ್ಠಾಪಿಸಲಾಗುವುದು.

ಶ್ರೀ ಬಸವೇಶ್ವರ-ನೀಲಮ್ಮ ಅವರ ವಿವಾಹ ಶಾಸ್ತ್ರ ನೆರವೇರಿಸಲಾಗುವುದು. ಸಂಜೆ ಮಹಿಳೆಯರು ಬಾಯಿ ಬೀಗ, ಉರುಳು ಸೇವೆ ಸಮರ್ಪಿಸುವರು. ಜವುಳ ಕಾರ್ಯಕ್ರಮಗಳೂ ನಡೆಯಲಿವೆ.

# ಕಡೂರುವರೆಗೆ ಪ್ಯಾಸೆಂಜರ್ ರೈಲು ಮುಂದುವರೆಸಲು ಮನವಿ

ದಾವಣಗೆರೆ, ಮಾ.20- ಗ್ರಾಮೀಣ ಪ್ರಯಾಣಿಕರ ಹಿತದೃಷ್ಟಿಯಿಂದ ಹುಬ್ಬಳ್ಳಿ-ದಾವಣಗೆರೆ ಪ್ಯಾಸೆಂಜರ್ ರೈಲನ್ನು ಕಡೂರು ರೈಲು ನಿಲ್ದಾಣದವರೆಗೆ ವಿಸ್ತರಿಸುವಂತೆ ನೈರುತ್ಯ ರೈಲ್ವೇ ಪ್ರಧಾನ ವ್ಯವಸ್ಥಾಪಕರಿಗೆ ಆದೇಶಿಸುವಂತೆ ಕೇಂದ್ರ ರೈಲ್ವೇ ಸಚಿವ ಪಿಯೂಷ್ ಗೋಯಲ್ ಹಾಗೂ ಪ್ರಧಾನಿಗೆ ವಲಯದ ಪ್ರಯಾಣಿಕರ ಕುಂದು-ಕೊರತೆ ನಿವಾರಣಾ ಕ್ಷೇಮಾಭಿವೃದ್ಧಿ ಸಂಘ ಕೋರಿದೆ.

ಇದೇ ರೈಲನ್ನು ಮುಂದುವರೆಸಿ ಕೊಟ್ಟರೆ ಧರ್ಮಸ್ಥಳ ಶ್ರೀಕ್ಷೇತ್ರ ಹಾಗೂ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನಕ್ಕೆ ಹೋಗುವ ಭಕ್ತಾದಿಗಳಿಗೆ ಅನುಕೂಲವಾಗಲಿದೆ ಎಂದು ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ತಿಳಿಸಿದ್ದಾರೆ.


**ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್) ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

Civil

**ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್** VCS

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಮೊ. 99168 73399, 93432 77422, 99161 73399

**ಶ್ರೀ ವಾಲ್ಮೀಕಿ ಸಾಂಸ್ಕೃತಿಕ ಸಭಾ ಭವನ**

ನಾಯಕ ವಿದ್ಯಾರ್ಥಿ ನಿಲಯದ ಆವರಣದ 1ನೇ ಮಹಡಿ, ಕೆಇಬಿ ಸರ್ಕಲ್ ಹತ್ತಿರ, ಪಿ.ಜೆ. ಬಡಾವಣೆ, ದಾವಣಗೆರೆ.

**ಮದುವೆ - ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ಇದೆ**

500 ಕುರ್ಚಿಗಳನ್ನೊಂದಿರುವ ಸಭಾ ಭವನ, 250 ಕುರ್ಚಿಗಳಿರುವ ಊಟದ ಹಾಲ್, ಉಳಿದುಕೊಳ್ಳಲು 9 ರೂಂಗಳು, ಅಡುಗೆ ಪಾತ್ರೆ ಸಾಮಾನುಗಳು ಎಲ್ಲಾ ಸೇರಿ ಕೇವಲ ರೂ. 15,000 ಗಳಿಗೆ ಮದುವೆ ಮತ್ತು ಶುಭ ಕಾರ್ಯಗಳಿಗೆ ಹಾಲ್ ಬಾಡಿಗೆಗೆ ದೊರೆಯುತ್ತದೆ. ಸಂಪರ್ಕಿಸಿ :

**ಬಿ. ವೀರಣ್ಣ,** ಅಧ್ಯಕ್ಷರು, **ನಾಯಕ ವಿದ್ಯಾರ್ಥಿ ನಿಲಯ,** ಪಿ.ಜೆ. ಬಡಾವಣೆ, ದಾವಣಗೆರೆ. 80951 71787


# ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ನಿಷೇಧಾಜ್ಞೆ

ದಾವಣಗೆರೆ, ಮಾ.20- ಗಣಕಯಂತ್ರ ಶಿಕ್ಷಣ ಪರೀಕ್ಷೆಗಳು ಜಿಲ್ಲಾ ಶಿಕ್ಷಣ- ತರಬೇತಿ ಸಂಸ್ಥೆ, ಸರ್ಕಾರಿ ಪ್ರೌಢಶಾಲೆ ಮೈದಾನ ದಾವಣಗೆರೆ ಕೇಂದ್ರದಲ್ಲಿ ಇದೇ ದಿನಾಂಕ 28 ರಿಂದ ಏ.3 ರವರೆಗೆ ನಡೆಯಲಿದ್ದು, ಈ ಪರೀಕ್ಷೆಗಳು ಸುವ್ಯವಸ್ಥಿತವಾಗಿ ನಡೆಯಲು ಹಾಗೂ ಕೇಂದ್ರಗಳಲ್ಲಿ ಅವ್ಯವಹಾರಗಳನ್ನು ತಡೆಗಟ್ಟಲು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶಿಸಿದ್ದಾರೆ.

# ನಗರಕ್ಕೆ ಇಂದು ರೈತ ಹೋರಾಟಗಾರರು

ರಾಷ್ಟ್ರೀಯ ರೈತ ಹೋರಾಟದ ರೂವಾರಿಗಳಾದ ರಾಕೇಶ್ ಟಿಕಾಯತ್, ಯುದ್ಧ ವೀರಸಿಂಗ್, ಚುಕ್ಕಿ ನಂಜಂಡ ಸ್ವಾಮಿ ಅವರು ಹಾವೇರಿ ಕಾರ್ಯಕ್ರಮ ಮುಗಿಸಿ ಇಂದು ಸಂಜೆ 7 ಗಂಟೆಗೆ ನಗರಕ್ಕೆ ಆಗಮಿಸಲಿದ್ದಾರೆ.ದಾವಣಗೆರೆ ಪೀಪಲ್ಸ್ ಗಿಲ್ಡ್ ನಿಂದ ಸ್ವಾಗತಿಸಲಾಗುವುದು. ಇದೇ ವೇಳೆ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಲಿದ್ದಾರೆ.


**ನವಜೋಡಿಗೆ ನಲುಮೆಯ ಹಾರೈಕೆಗಳು...**




ಶುಭಾಶಯ ಕೋರುವ ಗೆಳೆಯರು :

- ✦ ಶ್ರೀ ಶಶಾಂಕ್ ಪಟೇಲ್, ಸಾಫ್ಟ್‌ವೇರ್ ಎಂಜಿನಿಯರ್, ಸಾಫ್ಟ್‌ವೇರ್ ಎಜಿ, ಸೇಂಟ್ ಫಾಲ್, ಯುಎಸ್‌ಎ
- ✦ ಶ್ರೀ ಗಣೇಶ್ ಕೆ., ಸಹಾಯಕ ಪ್ರಾಧ್ಯಾಪಕರು, ಬಿಐಇಟಿ, ದಾವಣಗೆರೆ
- ✦ ಶ್ರೀ ಸಚಿನ್ ಟಿಕಾರೆ, ಸೀನಿಯರ್ ಸಾಫ್ಟ್ ವೇರ್ ಎಂಜಿನಿಯರ್, ಹೆಚ್.ಪಿ. ಬೆಂಗಳೂರು
- ✦ ಶ್ರೀ ಪ್ರಮೋದ್ ಹರ್ವಿ, ಮ್ಯಾನೇಜರ್, ಆರ್.ಕೆ.ಎಫ್.ಎಲ್, ಹರಿಹರ
- ✦ ಶ್ರೀ ನವೀನ ಪಾಗಾದ, ಸಹಾಯಕ ಪ್ರಾಧ್ಯಾಪಕರು, ಉಜಿರೆ ಎಂಜಿನಿಯರಿಂಗ್ ಕಾಲೇಜು
- ✦ ಶ್ರೀ ಗಂಗಾಧರ್, ಮ್ಯಾನೇಜರ್, ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್, ಡೆಂಟಲ್ ಕಾಲೇಜು ರಸ್ತೆ, ದಾವಣಗೆರೆ
- ✦ ಶ್ರೀ ರಾಜಕುಮಾರ್ ಎನ್. ಆರ್., ಮ್ಯಾನೇಜರ್, ಬಜಾಜ್ ಫೈನಾನ್ಸ್, ದಾವಣಗೆರೆ
- ✦ ಶ್ರೀ ನವೀನ್ ಭಟ್, ಮ್ಯಾನೇಜರ್, ಹಿಂದುಸ್ತಾನ್ ಹೆಲ್ತ್ ಕೇರ್, ಬೆಂಗಳೂರು
- ✦ ಶ್ರೀ ನಿತಿನ್ ಭಟ್, ಗಣಿತ ಉಪನ್ಯಾಸಕರು, ಎಸ್.ಪಿ.ಎಸ್.ಎಂ, ದಾವಣಗೆರೆ
- ✦ ಶ್ರೀ ಶ್ರೀಹರ್ಷ ಬಿ. ಎಸ್, ಪ್ರಿನ್ಸಿಪಾಲ್ ಆರ್ಕಿಟೆಕ್ಟ್, ಫಿಡೆಲಿಟಿ ಇನ್ವೆಸ್ಟ್ ಮೆಂಟ್ಸ್, ಬೆಂಗಳೂರು
- ✦ ಡಾ. ಮಧು ಡಿ.ಜೆ., ದಾವಣಗೆರೆ
- ✦ ಶ್ರೀ ಮಹಾಂತೇಶ್ ಎಸ್., ದೃಷ್ಟಿ ಐ ಕ್ಲಿನಿಕ್, ದಾವಣಗೆರೆ

ಮತ್ತು 25 ಜನ ಗೆಳೆಯರ ಬಳಗ

# ವಿದ್ಯಾರ್ಥಿಗಳನ್ನು ಕೇವಲ ಅಂಕ ಗಳಿಕೆಗೆ ಸೀಮಿತಗೊಳಿಸುವುದು ಬೇಡ

## ಗಣಿತ ಶಿಕ್ಷಕರ ಕಾರ್ಯಾಗಾರದ ಸಮಾರೋಪದಲ್ಲಿ ಡಯಟ್‌ನ ಉಪನಿರ್ದೇಶಕ ಲಿಂಗರಾಜು ಅಭಿಮತ



ದಾವಣಗೆರೆ, ಮಾ.20- ಉತ್ತಮ ದರ್ಜೆಯ ಶಿಷ್ಯರನ್ನು ತಯಾರಿಸಿದಾಗ ಉತ್ತಮ ಗುರುಗಳಾಗಲು ಸಾಧ್ಯ ಎಂದು ಡಯಟ್ ನ ಉಪನಿರ್ದೇಶಕ ಹೆಚ್.ಕೆ. ಲಿಂಗರಾಜು ತಿಳಿಸಿದರು.

ಅವರು, ಇಂದು ನಗರದ ಬಿಐಇಟಿ ಕಾಲೇಜಿನಲ್ಲಿ ಗಣಿತ ಶಿಕ್ಷಕರ ಕಾರ್ಯಾಗಾರದ ಸಮಾರೋಪದಲ್ಲಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಗಣಿತ ಶಿಕ್ಷಕರಿಗೆ ಅಭಿನಂದನಾ ಪತ್ರ ವಿತರಿಸಿ ಮಾತನಾಡಿದರು.

ಕೇವಲ ಪರ್ಸೆಂಟೇಜ್ ವಿದ್ಯಾರ್ಥಿಗಳನ್ನಾಗಿ ರೂಪಿಸದೇ, ಗುಣಮಟ್ಟದ ಶಿಕ್ಷಣಕ್ಕೆ ಒತ್ತು ಕೊಟ್ಟು ಗುಣಮಟ್ಟದ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕು. ಕೇವಲ ಅಂಕ ಗಳಿಕೆಗಷ್ಟೇ ವಿದ್ಯಾರ್ಥಿಗಳನ್ನು ಸೀಮಿತವಾಗಿಸದೇ ಪರಿಪೂರ್ಣ ವಿದ್ಯಾರ್ಥಿಯಾಗಿಸಬೇಕು.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಹೆಚ್ಚು ಪ್ರಾಮುಖ್ಯತೆ ನೀಡುವಂತೆ ಸಲಹೆ ನೀಡಿದರು.

ಇಂತಹ ಕಾರ್ಯಾಗಾರ ನಿಮ್ಮ ಕಲಿಕೆಗೆ ಪೂರಕವಾಗಿದ್ದು, ಕಲಿಕೆಯಲ್ಲಿ ಮತ್ತಷ್ಟು ಪರಿಪಕ್ವತೆ ಸಾಧಿಸಬಹುದಾಗಿದೆ. ಆ ಮೂಲಕ ಭವಿಷ್ಯದಲ್ಲಿ ಉನ್ನತ ಮಟ್ಟದ ಶಿಕ್ಷಕರಾಗಿ ಹೊರಹೊಮ್ಮಬಹುದಾಗಿದೆ ಎಂದರು.

ನಮ್ಮ ದೇಶದ ಶಿಕ್ಷಕರು ಸಹ ಸಾಮಾನ್ಯರಲ್ಲ. ಅಸಾಧಾರಣಾ ಸಾಧನೆ ಮಾಡಿದ್ದಾರೆ. ಭಾರತದಲ್ಲಿ ತಂತ್ರಜ್ಞಾನ, ವಿಜ್ಞಾನದ ಬೆಳವಣಿಗೆಗೆ ಶಿಕ್ಷಕರ ಪಾತ್ರವೂ ಮಹತ್ವದ್ದಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ಶಾಮನೂರು ಪಾರ್ವತಮ್ಮ ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಪ್ರೊ. ಎಂ.ಪಿ. ರುದ್ರಪ್ಪ ಮಾತನಾಡಿ, ಪ್ರಯೋಗಾಲಯದ ಮೂಲಕ ಕಲಿಕೆ ನೀಡುತ್ತಿರುವುದು ಕೇವಲ ಪಿಯು ಹಂತದಲ್ಲಿ ಅಷ್ಟೇ ಆಗದೇ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲಾ ಹಂತಗಳಲ್ಲೂ ಪ್ರಯೋಗಾಲಯದ ಮುಖೇನ ಗಣಿತದ ಕಲಿಕೆಯಾಗಬೇಕು ಎಂದು ಆಶಿಸಿದ ಅವರು, ಹೊಸತನದ ಗಣಿತ ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡು ತರಗತಿಯಲ್ಲಿ ಪಾಲನೆ ಮಾಡುವಂತೆ ಶಿಕ್ಷಕರಿಗೆ ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ ಮಾತನಾಡಿ, ಶಿಕ್ಷಣ ಕ್ಷೇತ್ರದ ಬಗ್ಗೆ ನಿರಾಶರಾಗದೇ ಸದಾಶಯವಿರಲಿ. ತರಬೇತಿ ಪಡೆದಷ್ಟು ಅನುಭವ ಹೆಚ್ಚಾಗಲಿದೆ. ಆದ್ದರಿಂದ ಇಂತಹ ಕಾರ್ಯಾಗಾರಗಳಲ್ಲಿ ಹೆಚ್ಚಾಗಿ ಪಾಲ್ಗೊಂಡು ಹೆಚ್ಚು ವಿಷಯ ಪಡೆದು ಅನುಭವಿ ಶಿಕ್ಷಕರಾಗುವಂತೆ ಗಣಿತ ಶಿಕ್ಷಕರಿಗೆ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಗಣಿತ ಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಕೆ.ಎಸ್. ಬಸವರಾಜಪ್ಪ, ಬಿಇಎ ಪ್ರೈಮರಿ ಸಿಬಿಎಸ್ ಸಿ ಶಾಲೆ ಪ್ರಾಂಶುಪಾಲ ಜೆ. ಪದ್ಮನಾಭ, ಚನ್ನಗಿರಿ ಅಜ್ಜಿಹಳ್ಳಿಯ ತರಳಬಾಳು ಸೆಂಟ್ರಲ್ ಸ್ಕೂಲ್ ನ ಪ್ರಾಂಶುಪಾಲ ಹೆಚ್.ಎಸ್. ಸತೀಶ್, ಜಗಳೂರು ತಾಲ್ಲೂಕು ಹೊಸಕೆರೆಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಶಿಕ್ಷಕ ಎಂ.ಎಸ್. ವೆಂಕಟೇಶ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ದಾವಣಗೆರೆಯ ನಿಕಟ ಪೂರ್ವ ಕಾರ್ಯದರ್ಶಿ ಎಂ. ಗುರುಸಿದ್ದಸ್ವಾಮಿ ಸೇರಿದಂತೆ, ಇತರರು ಇದ್ದರು.


**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಮನೆಗಳು ಮಾರಾಟಕ್ಕಿವೆ**
ದೇವರಾಜ್ ಅರಸು ಬಡಾವಣೆ 2 ಮಳಿಗೆ, 2 ಮನೆ ಮೇಲೆ, ಕೆಳಗೆ 2 ಮನೆ ಎಸ್.ಎಸ್. 'ಎ' ಬ್ಲಾಕ್ ಅಥಣಿ ಕಾಲೇಜು ಹತ್ತಿರ 30x44 ಪೂರ್ವ ದಿಕ್ಕು ಮೇಲೆ ಡುಪ್ಲೆಕ್ಸ್ ಮನೆ, ಎಸ್.ಎಸ್. ಹೈಟೆಕ್ ಬಡಾವಣೆ 30x50 ಪಶ್ಚಿಮ, ಶಿವ ಪಾರ್ವತಿ ಬಡಾವಣೆ 30x40 ಪಶ್ಚಿಮ ಮೇಲೆ ಕೆಳಗೆ ಮನೆ, ಎಲ್ ಐಸಿ ಕಾಲೋನಿಯಲ್ಲಿ 30x40 ಕೆಳಗೆ ಮನೆ ಮೇಲೆ 2 ರೂಂಗಳು ದಕ್ಷಿಣ ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ: 99457 02495, ಐಗೂರು ವಿಜಯ್ ಕುಮಾರ್ 95911 60520 -ಸುರೇಶ್

**'ಮನೆ ಅಡುಗೆ ಹಳ್ಳಿ ಊಟ'**
ಪೌಷ್ಟಿಕಯುಕ್ತ ರುಚಿಕರವಾದ ಆಹಾರ ಮನೆಗೇ ಸರಬರಾಜು ಮಾಡಲಾಗುತ್ತದೆ. ಮೊ. 63635 43487

**ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x60 East, 40x60 west, 30x57 West 40 ಅಡಿ ರೋಡಿಗಿದೆ. 30x40 West ಐನಳ್ಳಿ ಚನ್ನಬಸಪ್ಪ ಏಜೆಂಟ್ 99166 12110

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಅಕ್ಕ-ಪಕ್ಕ ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಉತ್ತರ ಅಕ್ಕ-ಪಕ್ಕ ಸ್ವಾಮಿ ಏಜೆಂಟ್ ವಿದ್ಯಾನಗರ 97421 44715

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**ಸೈಟ್‌ಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಬಡಾವಣೆ ಪೂರ್ವ 30x40, 30x50, 30x56, 40x60, 50x80, 50x120, ಎಸ್.ಎಸ್ ಹೈಟೆಕ್ ಬಡಾವಣೆ ಪೂರ್ವ, 30x40, 30x50 ಪಶ್ಚಿಮ 30x50 ರಾಘವೇಂದ್ರ ಲೇಔಟ್ (ಎಸ್.ಎಸ್ ಹೈಟೆಕ್ ಬಡಾವಣೆ ಎದುರು) 30x40 ಪೂರ್ವ ಮನೆ ಕೊಡುವುದಕ್ಕೆ, ತೆಗೆದು ಕೊಳ್ಳುವುದಕ್ಕೆ ಸಂಪರ್ಕಿಸಿ: 99457 02495, ಐಗೂರು ವಿಜಯ್ ಕುಮಾರ್ 95911 60520 -ಸುರೇಶ್

**2017 ರ JCB ಮಾರಾಟಕ್ಕಿದೆ.**
98443 27779
73377 77071

**ಬೇಕಾಗಿದ್ದಾರೆ**
ರೂಂ ಬಾಯ್ಸ್ & ಬಾತ್‌ರೂಂ ಕ್ಲೀನರ್ ಬೇಕಾಗಿದ್ದಾರೆ. ಅನುಭವಕ್ಕೆ ಮೊದಲ ಆದ್ಯತೆ. ವೇತನ 6000/- + ವಸತಿ +ಊಟ. ಕ್ಯಾಂಟೀನ್ ಮಾಡಲು ಅವಕಾಶವಿದೆ, ಬೇಕಾದ ಸಾಮಾನುಗಳು ಇವೆ. ಸಂಪರ್ಕಿಸಿ 98440 65235 08192 223235

**ಸೈಟ್‌ಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ಸುತ್ತ-ಮುತ್ತ 30x70 west, 43x37 East, 30x37 East, 30x50 West ಐನಳ್ಳಿ ಚನ್ನಬಸಪ್ಪ ರಿಯಲ್ ಎಸ್ಟೇಟ್ ಏಜೆಂಟ್ 99166 12110

**ಸೈಟ್/ಮನೆ ಮಾರಾಟಕ್ಕಿದೆ**
20x30, 30x40, 30x50 ಮನೆ, 20x30, 30x40 30x50 ಸೈಟ್, 20x30 ಕಾರ್ನರ್ ಸೈಟ್, 30x50 ಕಾರ್ನರ್ ಸೈಟ್ ಇವೆ. 80882 92977

**ಮರದ ಗಾಣದ ಶೇಂಗಾ ಎಣ್ಣೆ, ಕೊಬ್ಬರಿ ಎಣ್ಣೆ ತಯಾರಿಕಾ ಘಟಕ**
ನಮ್ಮಲ್ಲಿ ಶೇಂಗಾ ಎಣ್ಣೆ ಮತ್ತು ಕೊಬ್ಬರಿ ಎಣ್ಣೆ ಹಾಗೂ ಸಿರಿಧಾನ್ಯಗಳು ದೊರೆಯುತ್ತವೆ. ಸಂಪರ್ಕಿಸಿ : ಮೈಸೂರು ನ್ಯಾಚುರಲ್ಸ್ ಶಾಮನೂರು. ಮೊ. 99717-95156

**ಸೈಟುಗಳು ಮಾರಾಟಕ್ಕಿವೆ**
ವಿವೇಕಾನಂದ ಬಡಾವಣೆಯಲ್ಲಿ 30×40, ಸಿದ್ಧವೀರಪ್ಪ ಬಡಾವಣೆಯಲ್ಲಿ 30×40 ಅಳತೆಯ ಸೈಟುಗಳು ಮಾರಾಟಕ್ಕಿವೆ ಮೊ. 78996 81386, 99866 17483

**ಸೋಫ಼ಾ ಮೆಸ್ ಮಾಡಲಾಗುವುದು**
ನಮ್ಮಲ್ಲಿ ಸೋಫ಼ಾ ಮೆಸ್, ಎಲ್ಲಾ ತರಹದ ಕುಷನ್, ಸೋಫಾ, ಬೆಡ್ ಮಾಡುತ್ತೇವೆ. ರಿಪೇರಿ ಮಾಡುತ್ತೇವೆ. ಸಂಪರ್ಕಿಸಿ 9380833743, 7483088761

**ಮನೆ ಮಾರಾಟಕ್ಕಿದೆ**
ಬಂಟ್ಸ್ ಸಮುದಾಯ ಭವನದ ಹತ್ತಿರ, ಕುಂದುವಾಡ ರಸ್ತೆಯಲ್ಲಿ 30x40 ಅಳತೆಯ ಹೊಸ ಮನೆ ಮಾರಾಟಕ್ಕಿದೆ. ಮೊ. 99866 17483 78996 81386

**ಅಪಾರ್ಟ್‌ಮೆಂಟ್‌ನಲ್ಲಿ ಮನೆ ಮಾರಾಟಕ್ಕಿದೆ**
ಎಸ್.ಎಸ್. ಲೇ ಔಟ್ 'ಬಿ' ಬ್ಲಾಕ್‌ನಲ್ಲಿ ಅಪಾರ್ಟ್‌ಮೆಂಟ್‌ನಲ್ಲಿ 2 ಬೆಡ್‌ರೂಂ ಮನೆ ಮಾರಾಟಕ್ಕಿದೆ. ಮೊ. 99866 17483 78996 81386

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ. ಸಂಪರ್ಕಿಸಿ : 82173 52453

**ಮಹಿಳೆ ಬೇಕಾಗಿದ್ದಾರೆ**
ವಯಸ್ಸಾದವರನ್ನು ನೋಡಿಕೊಳ್ಳುವುದರ ಜೊತೆಗೆ ಮನೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಮಯ : ಬೆಳಿಗ್ಗೆ 8.30 ರಿಂದ ಸಂಜೆ 5.30ರವರೆಗೆ. ಸಂಪರ್ಕಿಸಿ : 63639 54459

**ಜಮೀನು ಮಾರಾಟಕ್ಕಿದೆ**
ಹದಡಿ ಹತ್ತಿರ 3.5 ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಎಕರೆಗೆ : 30 ಲಕ್ಷ 85538 79708

**ತಕ್ಷಣ ಬೇಕಾಗಿದ್ದರೆ**
ಹರಿಹರ ತಾಲ್ಲೂಕಿನ ಆಯಾ ಗ್ರಾಮೀಣ ಪ್ರದೇಶಗಳಲ್ಲಿ ವಾಸ ಇರುವ ಆಸಕ್ತ ಯುವಕರು ಫೀಲ್ಡ್ ವರ್ಕ್ ಮಾಡಲು ಬೇಕಾಗಿದ್ದಾರೆ. ಕರೆ ಮಾಡಿ 77954 67177 ಸಂಬಳ 8000 to 10000 ESI, PF, Insurence and Incentive.

**ಮನೆಗಳು ಬಾಡಿಗೆಗೆ /ಲೀಸ್‌ಗೆ**
ದಾವಣಗೆರೆಯ ವಿದ್ಯಾನಗರದಲ್ಲಿ ದೇವಸ್ಥಾನ, ಪಾರ್ಕ್ ಹಾಗೂ ಬಸ್ ಸ್ಟಾಪ್ ಗೆ ಹತ್ತಿರ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇದೆ. 96322 74557

**ಮನೆ ಮಾರಾಟಕ್ಕಿದೆ**
ಉತ್ತರ ದಿಕ್ಕಿನ 30x40 ಅಳತೆಯ 2 ಅಂತಸ್ತಿನ ಸುಸಜ್ಜಿತ 2BHK ಮನೆ ಭಗತ್ ಸಿಂಗ್ ನಗರ 1ನೇ ಮೇನ್, 3ನೇ ಕ್ರಾಸ್, ದಾವಣಗೆರೆ-02 ಇಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ ಮೊ: 96638 87111

**ಜಮೀನು ಮಾರಾಟಕ್ಕಿದೆ**
ದಾವಣಗೆರೆ ತಾಲ್ಲೂಕು ಆನಗೋಡು ಹೋಬಳಿ, ಆಲೂರು ಗ್ರಾಮದಲ್ಲಿ ಸರ್ವೆ ನಂಬರ್ 184/1p ನಲ್ಲಿ 3 ಎಕರೆ 38 ಗುಂಟೆ ಜಮೀನು, ನೀರಾವರಿಗಾಗಿ ಬೋರ್ ವ್ಯವಸ್ಥೆ ಇದ್ದು, ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ದಾವಣಗೆರೆಯಿಂದ 14 ಕಿ.ಮೀ. ಹತ್ತಿರದಲ್ಲಿದೆ. ಮಾಲೀಕರು : ಹೆಚ್.ಎಂ. ಪಾಟೀಲ್ 98807 39388

**ಸೈಟ್ ಮಾರಾಟಕ್ಕಿದೆ**
ನವೀಕರಿಸುತ್ತಿರುವ KSRTC ಬಸ್ ಸ್ಟ್ಯಾಂಡ್‌ನ ಹಿಂದಿನ ಗೇಟ್ ಹತ್ತಿರ 13x48 ಅಳತೆಯ ಖಾಲಿ ನಿವೇಶನ ಮಾರಾಟಕ್ಕಿದೆ. ಸಂಪರ್ಕಿಸಿ 96200 13284

**ಬೇಕಾಗಿದ್ದಾರೆ**
ಸುಪ್ರಸಿದ್ದ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್, ಸೇಲ್ಸ್ ಬಾಯ್ಸ್ & ಕ್ಯಾಷಿಯರ್ ಬೇಕಾಗಿದ್ದಾರೆ. ಸಂಪರ್ಕಿಸಿ 87622 21696

**ಮನೆ ಮಾರಾಟಕ್ಕಿದೆ**
ಸರಸ್ವತಿ ನಗರದಲ್ಲಿ 20x30 ಮನೆ ಮಾರಾಟಕ್ಕಿದೆ. 97388 79753

**ಬೇಕಾಗಿದ್ದಾರೆ**
ತಿಂಡಿ ಮತ್ತು ಊಟದ ಹೋಟೆಲ್‌ನಲ್ಲಿ ಸಪ್ಲೈಯರ್ ಮತ್ತು ದೋಸೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ 99861 70007

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. 74067 40635 74063 96332

**ಮನೆ ಬಾಡಿಗೆಗೆ ಇದೆ**
ಡಬಲ್ ಬೆಡ್‌ರೂಂ 30x40 ಎಸ್.ಎಸ್. ಲೇಔಟ್ 'ಎ' ಬಾಟ್ಲಿ ಬಿಲ್ಡಿಂಗ್ ಹಿಂಭಾಗ ಮತ್ತು JHPಯಲ್ಲಿ 4 ಚದುರ ಮನೆ ಬಾಡಿಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ 99451 30312 89703 41442

**ಸೈಟ್‌ಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವ ಪಾರ್ವತಿ ಲೇಔಟ್, ಜಯನಗರ, ಹೈಟೆಕ್ ಬಡಾವಣೆ, ಸರಸ್ವತಿ ನಗರ, ವಿನಾಯಕ ಬಡಾವಣೆಗಳಲ್ಲಿ 30x40, 30x50, 40x60, 50x75 ಹಾಗೂ ಲೇಔಟ್ ಜಮೀನು ಕಮರ್ಷಿಯಲ್ ಸೈಟ್‌ಗಳು ಮತ್ತು ದಾವಣಗೆರೆ ಸುತ್ತ-ಮುತ್ತ ಹೊಲ, ಗದ್ದೆ, ತೋಟಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 97315 12365

**ಟೈಪಿಸ್ಟ್ ಬೇಕಾಗಿದ್ದಾರೆ**
ಹೊಸ ಕೋರ್ಟ್ ಎದುರು 50% ಕಮೀಷನ್ ಆಧಾರದ ಮೇಲೆ ಕೆಲಸ ಮಾಡಲು ಕಂಪ್ಯೂಟರ್ ಟೈಪಿಸ್ಟ್ ಬೇಕಾಗಿದ್ದಾರೆ. ಕೆಲಸದ ವೇಳೆ : ಬೆಳಿಗ್ಗೆ 10.00 ರಿಂದ ಸಂಜೆ 6.30 ರವರೆಗೆ. ಸಂಪರ್ಕಿಸಿ : 98449 97093, 98445 28109

**ತೋಟಗಾರಿಕೆ/ಕೃಷಿ ಯೋಗ್ಯ ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 20 ಕಿ.ಮೀ ದೂರದಲ್ಲಿ NH4 ಗೆ ಹತ್ತಿರವಿರುವ ಉತ್ತಮ ಟಾರ್ ರಸ್ತೆ ಸಂಪರ್ಕ & ಬೋರ್‌ವೆಲ್ ಹೊಂದಿರುವ 2 ಎಕರೆ ಜಮೀನು ಮಾರಾಟಕ್ಕಿದೆ. 95385 58466

**ಮನೆ ಬಾಡಿಗೆಗಿದೆ**
2 BHK with Solar, LPG Line, Corporation & Borewell Water ಫಸ್ಟ್ ಫ್ಲೋರ್, ಹೊಸ ಮನೆ, ಎಸ್. ಎಸ್. ಬಡಾವಣೆ ಬಿ ಬ್ಲಾಕ್, ಬಂಟರ ಭವನದ ಹಿಂಭಾಗ ಬಾಡಿಗೆಗಿದೆ 87225 41967, 98442 41311

**ಸೈಟ್ ಮಾರಾಟಕ್ಕಿದೆ**
ಜಗಳೂರಿನಲ್ಲಿ ಶ್ರೀ ಶರಣ ಬಸವ ಸ್ವಾಮಿ ಬಡಾವಣೆ 30x40 ಪೂರ್ವ. ಸಂಪರ್ಕಿಸಿ ಮೊ : 96207 46246 ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಮನೆ ಬಾಡಿಗೆಗೆ ಇದೆ**
ಆರ್‌ಎಂಸಿ ಲಿಂಕ್ ರಸ್ತೆಯಲ್ಲಿ ಅಥಣಿ ಇಂಡಸ್ಟ್ರೀಸ್ ಎದುರುಗಡೆ 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. 94496 09805 74067 40635

**ಜೋಸೆಫ್ ಟೈಮ್ಸ್**
ಚರ್ಚ್ ರಸ್ತೆ, ರಾಂ & ಕೋ. ಸರ್ಕಲ್, ಪಿ.ಜೆ. ಬಡಾವಣೆ, ದಾವಣಗೆರೆ ನಮ್ಮಲ್ಲಿ ಎಲ್ಲಾ ರೀತಿಯ ಕಾರ್ ರಿಮೋಟ್ ಶೆಲ್ ವೇಯಿಂಗ್ ಮೆಷಿನ್ ಶೆಲ್, ಹಿಯರಿಂಗ್ ಮೆಷಿನ್ ಶೆಲ್ ಎಲ್ಲಾ ರೀತಿಯ ವಾಚುಗಳ ಶೆಲ್‌ಗಳು ಸಿಗುತ್ತವೆ. ರಿಪೇರಿ ಮತ್ತು ಮಾರಾಟಕ್ಕೆ ಸಂಪರ್ಕಿಸಿರಿ. ಫೋ. : 96320 02486

**ಮನೆ ಬಾಡಿಗೆಗೆ ಇದೆ**
# 853/6 ಮೊದಲನೇ ಹಂತ, ಎರಡನೇ ಮೇನ್, 6ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿರುವ ವಿಶಾಲವಾದ ಪಾರ್ಕಿಂಗ್ ಇರುವ ಸಿಂಗಲ್ ಬೆಡ್‌ರೂಮ್ CMC ಹಾಗೂ ಬೋರ್ ಎರಡೂ ನೀರಿನ ವ್ಯವಸ್ಥೆ ಇರುವ ಮನೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ 63618 93176

**ಮನೆ& ರೂಂಗಳು ಬಾಡಿಗೆ/ಲೀಸ್‌ಗಿವೆ**
ವಿನೋಬನಗರ, 4ನೇ ಮೇನ್, 3ನೇ ಕ್ರಾಸ್‌ನಲ್ಲಿ ಮನೆ ಮತ್ತು ರೂಂಗಳು ಬಾಡಿಗೆ/ಲೀಸ್‌ಗಿವೆ. 98442 41311, 87225 41967

**ತಕ್ಷಣ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ. ಸಂಬಳ 8000/- ಊಟ, ಮಲಗಲು ಜಾಗ ಉಚಿತ. ಕೆಲಸ ನೆಲ, ಬಾತ್‌ರೂಂ ಇತರೆ ಕ್ಲಿನಿಂಗ್. ಸಂಪರ್ಕಿಸಿ 97400 98047, 97400 98064

**ತಕ್ಷಣ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 16000/- ಊಟ, ರೂಂ ಉಚಿತ. 97400 98064, 97400 98047

**ಮನೆ ಲೀಸ್ ಇದೆ**
1st Floor 2BHK, ಎಲ್ಲಾ ಸೌಲಭ್ಯಗಳಿರುವ ಹಾಗೂ 2nd Floor 1BHK ಎಲ್ಲಾ ಸೌಲಭ್ಯಗಳಿರುವ ಮನೆಗಳು ಲೀಸ್‌ಗೆ ಇವೆ. ಆಸಕ್ತರು ಸಂಪರ್ಕಿಸಿ: # 389/G-54 ಎಸ್. ಎಸ್ ಹೈಟೆಕ್ ಆಸ್ಪತ್ರೆ ರಸ್ತೆ, ಶ್ರೀ ಸಾಯಿಬಾಬಾ ಮಂದಿರ ಹಿಂಭಾಗ, ಜಯನಗರ 'ಎ' ಬ್ಲಾಕ್, ದಾವಣಗೆರೆ. 98447 10844, 88843 62134

**Required**
PUC or any degree with Basic Computer Knowledge is must and telecaller for male & female
Contact :
Samsung Service Centres
Excellent Electronics
# 2137/1, 4th main, 3rd cross, MCC A block, Davangere.
98865 15100

**ಮನೆ ಲೀಸ್‌ಗೆ / ಬಾಡಿಗೆಗೆ**
ಕುವೆಂಪು ನಗರದ ಲಕ್ಷ್ಮೀ ಫ್ಲೋರ್ ಮಿಲ್‌ನ ಹತ್ತಿರ, 2ನೇ ಮಹಡಿಯಲ್ಲಿ ಸಿಂಗಲ್ ಬೆಡ್ ರೂಂ ಮನೆ ಲೀಸ್‌ಗೆ/ ಬಾಡಿಗೆಗೆ ದೊರೆಯುವುದಿದೆ. ಆಸಕ್ತರು ಸಂಪರ್ಕಿಸಿ : 99863 31471 ಮಧ್ಯವರ್ತಿಗಳಿಗೆ ಅವಕಾಶವಿಲ್ಲ

**ಮನೆ ಬಾಡಿಗೆಗೆ**
ಶ್ರೀ ಎಸ್. ನಿಜಲಿಂಗಪ್ಪ ಬಡಾವಣೆ, ಅಮೃತಾನಂದಮಯಿ ಶಾಲೆ ಹತ್ತಿರ, ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ : 72046 33418 74115 87570

**COMMERCIAL SPACE FOR RENT**
1st, 2nd and 3rd floor, New Building, LIFT Installed, Good 45ft exposure to main road. Beside Royal Enfield showroom, Hadadi Main Road, Davangere.
8660214677

**ತಕ್ಷಣ ಬೇಕಾಗಿದ್ದಾರೆ**
ಶ್ರೀ ದುರ್ಗಾಶ್ರೀ ಟಿಂಬರ್ಸ್ ಹೆಲ್ಪರ್ಸ್/ಪುರುಷರು. ಸಮಯ : ಬೆಳಗ್ಗೆ 9 ರಿಂದ ಸಂಜೆ 7 ರವರೆಗೆ ವಾರದ ಸಂಬಳ ರೂ. 2000/- ಸಂಪರ್ಕಿಸಿ : 98863 17201

**ಮನೆ ಬಾಡಿಗೆಗಿದೆ**
ಎರಡು ಬೆಡ್‌ರೂಂ, ಮೊದಲನೇ ಮಹಡಿಯಲ್ಲಿ ಶ್ರೀ ಗೀತಾಂಜಲಿ ನಿವಾಸ, ಎಂಸಿಸಿ ಬಿ ಬ್ಲಾಕ್, ಆಂಜನೇಯ ದೇವಸ್ಥಾನದ ಹಿಂಭಾಗದ ಎರಡನೇ ತಿರುವು ಅಥವಾ BIET ರಸ್ತೆ, 8ನೇ ಕ್ರಾಸ್, ವಿನಾಯಕ ಕ್ಲಿನಿಕ್ ಹತ್ತಿರ. 89714 53163 98806 47830

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576 90080 55813

**ಜಮೀನು ಮಾರಾಟಕ್ಕಿದೆ**
ದಾವಣಗೆರೆಯಿಂದ 7 ಕಿ.ಮೀ. ಹತ್ತಿರದ ಪುಟಗನಾಳು ಗ್ರಾಮದಲ್ಲಿ ಒಂದೂವರೆ ಎಕರೆ ನೀರಾವರಿ ಜಮೀನು ಮಾರಾಟಕ್ಕಿದೆ. ಎಕರೆಗೆ 50 ಲಕ್ಷ ರೂ. ದರವಿದೆ. ಆಸಕ್ತರು ಸಂಪರ್ಕಿಸಿ : 98457 05871, 63632 42625 (ಬಂಗಾರದ ಅಂಗಡಿ ಸೋಮು)

**ಬೇಕಾಗಿದ್ದಾರೆ**
ಸೇಲ್ಸ್ ಮನ್ ಮತ್ತು ಡೆಲಿವರಿ ಬಾಯ್ಸ್ ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ 94823 73289

**ಮನೆಗಳು ಬಾಡಿಗೆಗೆ ಇವೆ**
ಕುವೆಂಪು ನಗರ ಎಂ.ಸಿ.ಸಿ 'ಬಿ' ಬ್ಲಾಕ್ ಮೊದಲನೆ ಮತ್ತು ಎರಡನೇ ಮಹಡಿ (ಪೂರ್ವ ಮತ್ತು ಉತ್ತರ ದಿಕ್ಕು) 90666 37770 78997 41753

**ಬೇಕಾಗಿದ್ದಾರೆ**
cafe ಯಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ಹೋಟೆಲ್‌ನಲ್ಲಿ ಕೆಲಸ ಮಾಡಿದ ಅನುಭವವಿರಬೇಕು. ಸಂಬಳ ರೂ.8000 ದಿಂದ 15,000ವರೆಗೆ + ಪ್ರೋತ್ಸಾಹ ಧನವಿರುತ್ತದೆ. ಸಂಪರ್ಕಿಸಿರಿ 70197-64596

**ಸೈಟ್/ಮನೆ ಮಾರಾಟಕ್ಕೆ ಬಾಡಿಗೆಗೆ / ಲೀಸ್‌ಗೆ**
ಜಯನಗರದಲ್ಲಿ 20x30 Duplex, ಪೂರ್ವ ಬಾಗಿಲಿನ ದೂಡಾ ಅಪ್ರೂವ್ಡ್ ಮನೆ ಮತ್ತು KHBನಲ್ಲಿ 30x40 ಪಶ್ಚಿಮ ಸೈಟ್ ಮಾರಾಟಕ್ಕೆ, ಜಯನಗರದಲ್ಲಿ 1BHK, 2BHK ಮತ್ತು 3 BHK ಮನೆ ಬಾಡಿಗೆಗೆ/ಲೀಸ್‌ಗೆ ಇವೆ. 80505 33389, 90354 85198

**ವಾಸ್ತು ಮನೆ & ಶಾಪ್ ಬಾಡಿಗೆಗೆ**
ಶಾಪ್ ಮತ್ತು ಗ್ರೌಂಡ್ ಫ್ಲೋರ್ ಪೂರ್ವ ಮುಂಬಾಗಿಲಿನ 2 & 3 ಬೆಡ್‌ರೂಂ ಡೈನಿಂಗ್ ಹಾಲ್, Indian & Western Toilet, ನೀರಿನ ಸೌಕರ್ಯ, ಪಾರ್ಕಿಂಗ್ ಮನೆ. # 408 ಪಿ.ಜೆ. ಎಕ್ಸ್ ಟೆನ್ಷನ್, 8ನೇ ಮೇನ್, 8ನೇ ಕ್ರಾಸ್, ಮೋದಿ ಕಾಂಪೌಂಡ್ ಹತ್ತಿರ. 99168 62900 95386 41980

**ರೂಂ ಬಾಡಿಗೆಗೆ**
ಸುಸಜ್ಜಿತ ರೂಂ (ಅಟ್ಯಾಚ್ಡ್) ವಿದ್ಯಾರ್ಥಿಗಳಿಗೆ, ರೆಪ್ರೆಸೆಂಟೇಟಿವ್ಸ್ ಗಳಿಗೆ ಅನುಕೂಲವಿದ್ದು, 'ಸುಮಂತ್ ನಿಲಯ', 2ನೇ ಮೇನ್, 3ನೇ ಕ್ರಾಸ್, ಜೈನ್ ಲೇಔಟ್, ಕುಂದುವಾಡ ರೋಡ್, ದಾವಣಗೆರೆ ಇಲ್ಲಿ ಬಾಡಿಗೆಗಿದೆ. ಸಂಪರ್ಕಿಸಿ 87623 92005

**ಮನೆ ಬಾಡಿಗೆಗೆ ಇದೆ**
3 BHK ನೆಲ ಮಹಡಿ ಮನೆ ಬಾಡಿಗೆಗಿದೆ. ಸಿದ್ದವೀರಪ್ಪ ಬಡಾವಣೆ 12ನೇ ಕ್ರಾಸ್ 8ನೇ ಮೇನ್ ಎದುರುಗಡೆ. ಸಸ್ಯಹಾರಿಗಳಿಗೆ ಮಾತ್ರ. 99645 82202 98440 92031

**ಸೈಟ್‌ಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟ್‌ಗಳು ಮಾರಾಟಕ್ಕಿವೆ Rs. 899 Sqft ಹೋಳಿ ಹುಣ್ಣಿಮೆ ಹಬ್ಬದ ಪ್ರಯುಕ್ತ ವಿಶೇಷ ರಿಯಾಯಿತಿಯಲ್ಲಿ 93431 10009, 98441 24217, 86603 11021

**ಮನೆ ಬಾಡಿಗೆಗೆ/ಲೀಸ್ ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್ ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ. 99726-75759

**ಮನೆ ಬಾಡಿಗೆಗೆ**
ಸಿಂಗಲ್ ಬೆಡ್‌ರೂಂ, 2ನೇ ಮಹಡಿ ಶಿವಕುಮಾರಸ್ವಾಮಿ ಲೇಔಟ್, 2ನೇ ಹಂತ. ಸಂಪರ್ಕಿಸಿ 97434 39996 94487 05511

**ಹುಡುಗರು ಬೇಕಾಗಿದ್ದಾರೆ**
ಪೈಪ್ ಹಾಗೂ ಸ್ಯಾನಿಟರಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಅನುಭವವಿದ್ದವರಿಗೆ ಆದ್ಯತೆ ಶ್ರೀ ರಾಮದೂತ ಎಂಟರ್‌ಪ್ರೈಸಸ್, ಭಗೀರಥ ಸರ್ಕಲ್ ಹತ್ತಿರ, ಜಯನಗರ, ದಾವಣಗೆರೆ. 97388 27452 74110 25934

**ಕೆಲಸಕ್ಕೆ ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ANM, GNM ಹಾಗೂ ಆಯಾ ಬೇಕಾಗಿದ್ದಾರೆ. ತಮ್ಮ ಬಯೋಡಾಟಾದೊಂದಿಗೆ ಈ ಕೆಳಗಿನ ಮೊಬೈಲ್‌ಗೆ ಸಂಪರ್ಕಿಸಿರಿ 98450 35710 ಡಾ. ಎಂ.ಎಸ್. ಹಿರೇಮಠ್

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ: ಮೊ. 9538777582 ಕೆಲಸ 100% ಗ್ಯಾರಂಟಿ.

**ಹಾಲ್ ಬಾಡಿಗೆಗೆ ಇದೆ**
ಬ್ಯೂಟಿ ಪಾರ್ಲರ್/ಟ್ಯೂಷನ್ಸ್/ಆಫೀಸ್‌ಗಾಗಿ Ist Floorನಲ್ಲಿ ಬಾಡಿಗೆಗೆ ಇದೆ. ಮಾಮಾಸ್ ಜಾಯಿಂಟ್ ರೋಡ್, ಕಾರ್ನರ್ ಬಿಲ್ಡಿಂಗ್, ಎಂಸಿಸಿ ಬಿ ಬ್ಲಾಕ್, ದಾವಣಗೆರೆ. 82177 72482

**ಬೇಕಾಗಿದ್ದಾರೆ**
ಹೆಲ್ಪರ್ಸ್/ಸೇಲ್ಸ್‌ಗೆ ಹುಡುಗ/ ಹುಡುಗಿಯರು ಬೇಕಾಗಿದ್ದಾರೆ. ನಾಗಣೇಚಿ ಕಟ್ ಫೀಸ್ ಸೆಂಟರ್ #19/1, ಕಾಳಿಕಾದೇವಿ ರೋಡ್, ದಾವಣಗೆರೆ-1. 81055 53341

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ 8296265995, 8971684391 ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ) ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ) 73385 80345

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ. ಅಸ್ತಮಾ, ಕೀಲು ನೋವು ಡಾ।। ಎಸ್.ಎಂ. ಸೇಠಿ. ಫೋನ್ : 96322 95561 ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ. ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2. 94481-59303, 94834 63783

**ವಾಹ್ ಕಾಫಿ !! ರಿಚ್ ಕಾಫಿ !!**
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ ಮಂಡಿಪೇಟೆ, ದಾವಣಗೆರೆ. ಮೊಬೈಲ್ : 94487 27084

**SHOPS FOR RENT**
(with Wash Room Facility)
N.R. Road, Davanagere.
94483 69523

**2 BHK HOUSE FOR RENT**
East Face Ground Floor, 2581/5, 4th Main, North, Sridhar Aquarium Cross, MCC A Block, DVG-4.
95356 59259 94489 24513

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC, Technical & Non Technical Courses, Pharmacy & BHMS (Government & Private College) ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್ ಸೋಮ ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಮ್ & ಕೋ ಸರ್ಕಲ್, ದಾವಣಗೆರೆ. 87490 24789, 87620 58369 94837 64859, 82173 02649


## ರಾಜ್ಯ - ರಾಷ್ಟ್ರೀಯ ವಾರ್ತೆ

### ಬೆಂಗಳೂರು ನಗರದ ಪ್ರತಿಷ್ಠೆಗೆ ದಕ್ಕೆಯಾಗದಂಥ ಅಭಿವೃದ್ಧಿ ಅಗತ್ಯ

**ಉಪಮುಖ್ಯಮಂತ್ರಿ ಅಶ್ವತ್ಥ್‌ನಾರಾಯಣ್**

ಬೆಂಗಳೂರು, ಮಾ. 20- ಕೇಂದ್ರದ ನಗರಾಭಿವೃದ್ಧಿ ಇಲಾಖೆ ಪ್ರಕಟಿಸಿರುವ ಸುಲಲಿತ ಜೀವನ ನಿರ್ವಹಣೆ ಸೂಚ್ಯಂಕದಲ್ಲಿ ಅಗ್ರಸ್ಥಾನ ಪಡೆದಿರುವ ಬೆಂಗಳೂರು ನಗರದ ಪ್ರತಿಷ್ಠೆಗೆ ಧಕ್ಕೆ ಆಗದಂತೆ ಹಾಗೂ ವ್ಯವಸ್ಥಿತವಾಗಿ ಬೆಳೆಯುವಂತೆ ನೋಡಿಕೊಳ್ಳಬೇಕಾದ ಅಗತ್ಯ ಇವತ್ತು ಇನ್ನಷ್ಟು ಹೆಚ್ಚಾಗಿದೆ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಪಾದಿಸಿದರು.

ಬೆಂಗಳೂರಿನಲ್ಲಿ ಶನಿವಾರ ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಡಿಸೈನರ್ಸ್ ಸಂಸ್ಥೆ ಆಯೋಜಿಸಿದ್ದ ಸಿಟಿ ಫ್ಯೂಚರ್ಸ್ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು; "ಬೆಂಗಳೂರು ಜಾಗತಿಕ ಮಟ್ಟದಲ್ಲಿ ವೇಗವಾಗಿ ಮತ್ತು ವ್ಯವಸ್ಥಿತವಾಗಿ ಬೆಳೆಯುತ್ತಿರುವ ನಗರ. ಹೀಗಾಗಿ ಬೆಂಗಳೂರಿನ ಬಗ್ಗೆ ಪ್ರತಿಯೊಬ್ಬರೂ ಆಸಕ್ತಿಯಿಂದ ವೈಜ್ಞಾನಿಕವಾಗಿ ಕೆಲಸ ಮಾಡಬೇಕು" ಎಂದರು.

ವಿನ್ಯಾಸಕ್ಕೆ ಮಹತ್ವ ನೀಡಲು ಸಲಹೆ ನಗರವೆಂದಾಕ್ಷಣ ಅಥವಾ ಕಟ್ಟಡ ಎಂದಾಕ್ಷಣ ಯಾವುದೇ ಪೂರ್ವಸಿದ್ಧತೆ ಇಲ್ಲ ಎಂದರೆ ನಿರುಪಯುಕ್ತ. ಈ ಆಧುನಿಕ ಕಾಲದಲ್ಲಿ ಸರ್ಕಾರ ಇರಲಿ ಅಥವಾ ಖಾಸಗಿ ಕ್ಷೇತ್ರ ಇರಲಿ, ಎಲ್ಲೇ ಆದರೂ ವಿನ್ಯಾಸಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಸರಕಾರಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಯೋಜಿತವಾದ ವಿನ್ಯಾಸ, ಪರಿಕಲ್ಪನೆ ಅತ್ಯಂತ ಅಗತ್ಯ ಎಂದರು.

ಮಲ್ಲೇಶ್ವರ ಕ್ಷೇತ್ರದಲ್ಲಿ ಕೈಗೊಂಡಿರುವ ಯಾವುದೇ ನಿರ್ಮಾಣ ಕಾಮಗಾರಿ ಇದ್ದರೂ ಅದಕ್ಕೆ ನಿರ್ದಿಷ್ಟ ವಿನ್ಯಾಸವನ್ನು ರೂಪಿಸುವ ಪರಿಪಾಠವಿದೆ. ಗುಣಮಟ್ಟದ ಜತೆಗೆ, ನೋಡುಗರಿಗೆ ಚೆನ್ನಾಗಿಯೂ ಕಾಣಬೇಕು. ಈ ನಿಟ್ಟಿನಲ್ಲಿ ವಿನ್ಯಾಸಕ್ಕೆ ಉತ್ತೇಜನ ನೀಡಬೇಕಾಗಿದೆ ಹೇಳಿದರು

ದೊಮ್ಮಲೂರಿನ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ದಲ್ಲಿ ಈ ಪ್ರದರ್ಶನವು ಭಾನುವಾರವೂ ಇರಲಿದೆ. ಇನ್‌ಸ್ಟಿಟ್ಯೂಟ್ ಆಫ್ ಅರ್ಬನ್ ಡಿಸೈನರ್ಸ್ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

### ಲವ್ ಜಿಹಾದ್ ವಿರುದ್ಧದ ಕಾಯ್ದೆಗೆ ಬೆಂಬಲ : ಹೊಸಬಾಳೆ

ಬೆಂಗಳೂರು, ಮಾ. 20 – ಲವ್ ಜಿಹಾದ್ ವಿರುದ್ಧ ರಾಜ್ಯಗಳು ಕಾನೂನು ರೂಪಿಸುವುದನ್ನು ಆರ್.ಎಸ್.ಎಸ್. ಬೆಂಬಲಿಸಲಿದೆ ಎಂದು ಶನಿವಾರ ಸರಕಾರ್ಯವಾಹ (ಪ್ರಧಾನ ಕಾರ್ಯದರ್ಶಿ) ಆಗಿ ನೇಮಕಗೊಂಡಿರುವ ದತ್ತಾತ್ರೇಯ ಹೊಸಬಾಳೆ ತಿಳಿಸಿದ್ದಾರೆ.

ನ್ಯಾಯಾಲಯಗಳು ಲವ್ ಜಿಹಾದ್ ಎಂಬ ಪದ ಬಳಸಿವೆಯೇ ಹೊರತು ನಾವಲ್ಲ. ವಂಚನಾತ್ಮಕ ಮಾರ್ಗಗಳ ಮೂಲಕ ಮದುವೆಯ ಹೆಸರಿನಲ್ಲಿ ಮತಾಂತರಕ್ಕೆ ಅಥವಾ ಇನ್ನಾವುದೋ ದುರುದ್ದೇಶದಿಂದ ಲವ್ ಜಿಹಾದ್ ನಡೆಯುತ್ತಿದೆ ಎಂದವರು ಆರೋಪಿಸಿದ್ದಾರೆ.

### ಕೃಷಿ ಕಾಯ್ದೆಗೆ ಸಂಸದೀಯ ಸಮಿತಿ ಬೆಂಬಲ

ನವದೆಹಲಿ, ಮಾ. 20 - ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದ ಮೂರು ಕೃಷಿ ಕಾಯ್ದೆಗಳಲ್ಲಿ ಒಂದಾದ ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ ಜಾರಿಗೆ ಶಿಫಾರಸ್ಸು ಮಾಡಿದ ಸಂಸತ್ತಿನ ಸ್ಥಾಯಿ ಸಮಿತಿಯ ವರದಿಯಿಂದ ದೂರ ಇರುವುದಾಗಿ ಕಾಂಗ್ರೆಸ್‌ನ ಮೂವರು ಸಂಸದರು ಹೇಳಿದ್ದಾರೆ.

ತೃಣಮೂಲ ಕಾಂಗ್ರೆಸ್ ಸಂಸದ ಸುದೀಪ್ ಬಂಡೋಪಾಧ್ಯಾಯ್ ಅವರು ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದಾರೆ. ಅವರು ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ತೊಡಗಿರುವಾಗ ಬಿಜೆಪಿ ಸಂಸದರು ನಿಯಮ ಉಲ್ಲಂಘಿಸಿ ವರದಿ ಮಂಡಿಸಿದ್ದಾರೆ ಎಂದು ಕಾಂಗ್ರೆಸ್ ಹಾಗೂ ತೃಣಮೂಲ ಕಾಂಗ್ರೆಸ್ ಸಂಸದರು ಆರೋಪಿಸಿದ್ದಾರೆ.

ಸಮಿತಿಯ ಮೂವರು ಕಾಂಗ್ರೆಸ್ ಸದಸ್ಯರಾದ ಸಪ್ತಗಿರಿ ಶಂಕರ್ ಉಳಕ, ರಾಜಮೋಹನ್ ಉನ್ನಿತನ್ ಹಾಗೂ ವೈತಿಲಿಂಗಮ್ ಅವರು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದು, ತಮ್ಮ ಭಿನ್ನ ನಿಲುವನ್ನು ದಾಖಲಿಸಿಕೊಳ್ಳುವಂತೆ ಕೋರಿದ್ದಾರೆ.

ಆಹಾರ ಹಾಗೂ ಪಡಿತರ ಕುರಿತ ಸ್ಥಾಯಿ ಸಮಿತಿಯ ಹಂಗಾಮಿ ಅಧ್ಯಕ್ಷ ಅಜಯ್ ಮಿಶ್ರತೇನಿ ಅವರು ಸಮಿತಿಯ 11ನೇ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದ್ದಾರೆ.

### ಉಪ ಚುನಾವಣೆ : 3 ಕ್ಷೇತ್ರಗಳನ್ನು ಗೆಲ್ಲಲು ಕಾಂಗ್ರೆಸ್ ಕಾರ್ಯತಂತ್ರ

ಬೆಂಗಳೂರು, ಮಾ. 20- ಭ್ರಷ್ಟ ಬಿಜೆಪಿ ಸರ್ಕಾರವನ್ನು ಬುಡ ಸಮೇತ ಕಿತ್ತೊಗೆಯಲು ರಾಜ್ಯದಲ್ಲಿ ನಡೆಯುತ್ತಿರುವ ವಿಧಾನಸಭಾ ಉಪ ಚುನಾವಣೆಯಲ್ಲಿ ಮೂರು ಕ್ಷೇತ್ರಗಳನ್ನು ಕಾಂಗ್ರೆಸ್ ಗೆಲ್ಲಲು ಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ್ ಖಂಡ್ರೆ ಹೇಳಿದ್ದಾರೆ. ಪಕ್ಷದ ಕಚೇರಿಯಲ್ಲಿ ನಡೆದ ಹಿರಿಯ ನಾಯಕರ ಸಭೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೂರು ಕ್ಷೇತ್ರಗಳ ಉಪಚುನಾವಣೆ ಸಂಬಂಧ ಸುದೀರ್ಘ ಚರ್ಚೆ ಮಾಡಲಾಗಿದ್ದು, ಯಾವ ರೀತಿ ಚುನಾವಣೆ ನಡೆಸಬೇಕು. ಯಾವ ತಂತ್ರಗಾರಿಕೆ ಮಾಡಬೇಕೆಂದು ಚರ್ಚಿಸಲಾಗಿದೆ ಎಂದರು.

ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ರಾಜ್ಯ ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ. ಭ್ರಷ್ಟ ಸರ್ಕಾರವನ್ನು ಬುಡಸಮೇತ ಕೀಳಬೇಕು. ಹೀಗಾಗಿ ಚುನಾವಣೆಯಲ್ಲಿ ಗೆಲ್ಲಬೇಕಿದೆ. ಚುನಾವಣೆಗೆ ಕಾಂಗ್ರೆಸ್ ಉಸ್ತುವಾರಿಗಳನ್ನು ನೇಮಕ ಮಾಡಲಾಗಿದೆ. ಮಸ್ಕಿಗೆ ಬಸನಗೌಡ ತುರುವಿಹಾಳ. ಬಸವ ಕಲ್ಯಾಣದಲ್ಲಿ ಮಲ್ಲಮ್ಮಗೆ ಟಿಕೆಟ್ ನೀಡಲಾಗಿದೆ. ಅವರನ್ನು ಗೆಲ್ಲಿಸುವ ಬಗ್ಗೆ ತಂತ್ರಗಾರಿಕೆ ನಡೆಸಿದ್ದೇವೆ. ಬೆಳಗಾವಿ ಅಭ್ಯರ್ಥಿಯ ಆಯ್ಕೆಯಾಗಿದೆ. ಅವರ ಹೆಸರನ್ನು ಕಾಯ್ದಿಡಲಾಗಿದೆ ಎಂದರು.

### ಬಸವ ಕಲ್ಯಾಣ ಕ್ಷೇತ್ರದಿಂದ ವಿಜಯೇಂದ್ರರನ್ನು ಕಣಕ್ಕಿಳಿಸಲು ಪ್ರಸ್ತಾಪ

ಬೆಂಗಳೂರು, ಮಾ. 20- ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಪುತ್ರ ವಿಜಯೇಂದ್ರ ಅವರನ್ನು ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರದಿಂದ ಉಪಚುನಾವಣೆಗೂ, ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರನ್ನು ಬೆಳಗಾವಿ ಲೋಕಸಭಾ ಉಪಚುನಾವಣೆಯಲ್ಲಿ ಕಣಕ್ಕಿಳಿಸಲು ಇಂದಿನ ಕೋರ್ ಕಮಿಟಿ ಸಭೆಯಲ್ಲಿ ಪ್ರಸ್ತಾಪವಾಗಿದೆ.

ರಾಜ್ಯದಲ್ಲಿ ನಡೆಯುತ್ತಿರುವ ಉಪಚುನಾವಣೆ ಗಳಲ್ಲಿ ಪಕ್ಷ ಜಯಭೇರಿ ಭಾರಿಸಿ, ಬಲಿಷ್ಠತೆಯನ್ನು ತೋರಿಸಬೇಕಾಗಿದೆ. ಇದಕ್ಕಾಗಿ ಗೆಲ್ಲುವ ಸಾಮರ್ಥ್ಯದ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ಸಭೆಯಲ್ಲಿ ಚರ್ಚೆಯಾಗಿದೆ.

ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ., ಬೆಳಗಾವಿ ಲೋಕಸಭಾ ಕ್ಷೇತ್ರ, ಮಸ್ಕಿ ಮತ್ತು ಬಸವ ಕಲ್ಯಾಣ ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣಾ ಅಭ್ಯರ್ಥಿಗಳ ಕುರಿತು ಚರ್ಚಿಸಿದ್ದು, ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಪಕ್ಷದ ರಾಜ್ಯಾಧ್ಯಕ್ಷರು ಕೇಂದ್ರ ಚುನಾವಣಾ ಸಮಿತಿಗೆ ಕಳುಹಿಸಿಕೊಡಲಿದ್ದಾರೆ.

### 200 ಕೋ. ರೂ. ಅಕ್ರಮ ಆದಾಯ ಪತ್ತೆ

ನವದೆಹಲಿ, ಮಾ. 20 – ಮುಂಬೈನ ಮೊಬೈಲ್ ಅಕ್ಸೆಸರೀಸ್ ಡೀಲರ್‌ಗಳ ಮೇಲೆ ದಾಳಿ ನಡೆಸಿರುವ ಆದಾಯ ತೆರಿಗೆ ಇಲಾಖೆ, 200 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತದ ಅಘೋಷಿತ ಆದಾಯ ಪತ್ತೆ ಮಾಡಿದೆ. ಚೀನಾದಿಂದ ಕಡಿಮೆ ಬೆಲೆ ತೋರಿಸಿ ಮೊಬೈಲ್ ಅಕ್ಸೆಸರೀಸ್‌ಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು.

# ಹರಿಹರ : ಬಿಜೆಪಿ ಸಿದ್ಧಾಂತಕ್ಕೆ ಬದ್ಧ




## ನಗರಸಭೆ ಸದಸ್ಯ ಎನ್.ರಜನಿಕಾಂತ್

ಹರಿಹರ, ಮಾ.20- ಬಿಜೆಪಿ ಪಕ್ಷದ ಸಿದ್ಧಾಂತಕ್ಕೆ ಸದಾ ಬದ್ಧರಾಗಿದ್ದು, ಪಕ್ಷ ಸೂಚಿಸಿದವರ ಪರವಾಗಿ ಕೆಲಸ ಮಾಡುತ್ತೇವೆ ಎಂದು ನಗರಸಭೆ ಸದಸ್ಯ ಎನ್. ರಜನಿಕಾಂತ್ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಸ್ಥಳೀಯ ಬಿಜೆಪಿ ಪಕ್ಷದಲ್ಲಿ ಕೆಲವು ಗೊಂದಲ ಗಳಿವೆಯೇ? ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ ಮಾತನಾಡಿದ ಅವರು, ನಾವು ಪಕ್ಷದ ಸಿಪಾಯಿಗಳು. ಪಕ್ಷ ಮುಂದಿನ ಚುನಾವಣೆಯಲ್ಲಿ ಪ್ರಾಮಾಣಿಕವಾಗಿ ಸೇವೆಯನ್ನು ಸಲ್ಲಿಸುವಂತಹ ಯಾವುದೇ ವ್ಯಕ್ತಿಗೆ ಟಿಕೆಟ್ ನೀಡಿದರೂ ಅವರ ಪರವಾಗಿ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ಪಕ್ಷದಲ್ಲಿ ಅನೇಕರು ಟಿಕೆಟ್ ಆಕಾಂಕ್ಷಿಗಳು ಇರಬಹುದು. ಆದರೆ ಎಲ್ಲರಿಗೂ ಪಕ್ಷಕ್ಕಾಗಿ ದುಡಿಯಬೇಕಾದ ಜವಾಬ್ದಾರಿ ಇದ್ದು, ಎಲ್ಲರೂ ಪಕ್ಷಕ್ಕಾಗಿ ದುಡಿಯುತ್ತೇವೆ ಮತ್ತು ಪಕ್ಷ ಗೆಲ್ಲಿಸುವಲ್ಲಿ ಸರ್ವ ಪ್ರಯತ್ನಗಳನ್ನು ಮಾಡುತ್ತೇವೆ ಎಂದು ಹೇಳಿದರು.

ಇದೇ 23 ರಂದು ಬೆಳಗ್ಗೆ 11 ಗಂಟೆಗೆ ನಗರದ ಕಾಟ್ವೆ ಭವನದಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ನಗರ, ಗ್ರಾಮಾಂತರ ಘಟಕದ ಎಸ್ಸಿ ಮೋರ್ಚಾ ಕಾರ್ಯಕಾರಿಣಿ ಸಭೆಯನ್ನು ಕರೆಯಲಾಗಿದೆ. ಸಭೆಯಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಮಾಜಿ ಶಾಸಕ ಬಿ.ಪಿ. ಹರೀಶ್, ಜಿ.ಪಂ. ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ರಾಜ್ಯ ಸಮಿತಿ ಸದಸ್ಯರುಗಳಾದ ಬಸವರಾಜ ನಾಯಕ್, ಈಶಪ್ಪ ಕಟ್ಟಿಮನಿ, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಹನುಮಂತ ನಾಯಕ್, ಉಪಾಧ್ಯಕ್ಷ ರಾಘವೇಂದ್ರ ಕೊಂಡಜ್ಜಿ ಸೇರಿದಂತೆ ತಾಲ್ಲೂಕಿನ ನಗರಸಭೆ, ಗ್ರಾ.ಪಂ, ತಾ.ಪಂ. ಸದಸ್ಯರು ಹಾಗೂ ಎಲ್ಲಾ ವಿಭಾಗಗಳ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಎಸ್ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ರಾಘವೇಂದ್ರ ಕೊಂಡಜ್ಜಿ, ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಗ್ರಾಮಾಂತರ ಮೋರ್ಚಾ ಅಧ್ಯಕ್ಷ ಎಂ. ನಾಗರಾಜ್, ನಗರ ಎಸ್ಸಿ ಮೋರ್ಚಾ ಅಧ್ಯಕ್ಷ ಸಂತೋಷ್ ಗುಡಿಮನಿ ಇನ್ನಿತರರಿದ್ದರು.

# ವಿಡಂಬನಾ ಸಾಹಿತ್ಯದ ಬಗ್ಗೆ ಚರ್ಚೆಗಳು ನಡೆಯಲಿ

## 'ತೆಪರೇಸಿ ರಿಟರ್ನ್ಸ್' ಕೃತಿ ಬಿಡುಗಡೆ ಸಮಾರಂಭದಲ್ಲಿ ಪ್ರೊ. ಎಂ.ಕೃಷ್ಣೇಗೌಡ ಅಭಿಮತ

ದಾವಣಗೆರೆ, ಮಾ.20- ವಿಡಂಬನಾ ಸಾಹಿತ್ಯದ ಬಗ್ಗೆಯೂ ಚರ್ಚೆಯಾಗುವ ವಾತಾವರಣ ನಿರ್ಮಾಣವಾಗಬೇಕು ಎಂದು ಖ್ಯಾತ ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ ಅಭಿಪ್ರಾಯಿಸಿದರು.

ನಗರದ ಚಿಂದೋಡಿ ಲೀಲಾ ಕಲಾಕ್ಷೇತ್ರದಲ್ಲಿ ಶನಿವಾರ ಬೆಂಗಳೂರಿನ ಬಹುರೂಪಿ ಸಂಸ್ಥೆ ಹಾಗೂ ದಾವಣಗೆರೆ ನಗರವಾಣಿ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಪತ್ರಕರ್ತ ಬಿ.ಎನ್. ಮಲ್ಲೇಶ್ ಅವರ 'ತೆಪರೇಸಿ ರಿಟರ್ನ್ಸ್' ಕೃತಿ ಬಿಡುಗಡೆ ಸಮಾರಂಭದಲ್ಲಿ ಕೃತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಬೇರೆಲ್ಲ ಸಾಹಿತ್ಯಗಳು ಚರ್ಚೆಗೊಳಗಾಗುತ್ತವೆ. ಆದರೆ, ವಿಡಂಬನಾ ಸಾಹಿತ್ಯದ ಬಗ್ಗೆ ಎಲ್ಲಿಯೂ ಹೆಚ್ಚು ಚರ್ಚೆ ನಡೆಯುತ್ತಿಲ್ಲ. ವಿಡಂಬನೆ ಅನಾಮಧೇಯವಾಗಿರುವುದರಿಂದ ಅವು ಒಮ್ಮೆಲೆ ಪರಿಣಾಮ ಬೀರುವುದಿಲ್ಲ. ಆದರೆ, ವಿಡಂಬನೆಗೊಳಗಾದವರ ವಿರುದ್ಧದ ಅಸಮಾಧಾನ, ಅತೃಪ್ತಿಯನ್ನು ದಾಖಲಿಸುತ್ತಾ ಹೋಗುತ್ತದೆ ಎಂದರು.

ಇತ್ತೀಚಿನ ದಿನಗಳಲ್ಲಿ ವಿಡಂಬನೆಗೊಳಗಾಗುವ ವ್ಯಕ್ತಿಗಳು ಯಾರೂ




ವಿಡಂಬನೆಯ ಬರಹ ಓದುತ್ತಿಲ್ಲ. ಹೀಗಾಗಿ ವಿಡಂಬನೆ ಬರಹಗಾರರು ಸುರಕ್ಷಿತವಾಗಿದ್ದಾರೆ. ಒಂದು ವೇಳೆ ವಿಡಂಬನೆಗೊಳಗಾದವರು ಓದುವಂತಾಗಿದ್ದರೆ ಬರೆದವರು ಬೆದರಿಕೆಗೆ ಒಳಪಡುವ ಹಾಗೂ ವಿಡಂಬನೆಗೊಳಗಾಗುವವರ ಅಭಿಮಾನಿಗಳಿಂದ ಹೊಡೆಸಿಕೊಳ್ಳುವ ಭೀತಿ ಇತ್ತು ಎಂದರು.

ಕನ್ನಡ ಭಾಷೆಯಲ್ಲಿ ವಿಡಂಬನೆ ಸಾಹಿತ್ಯ ವಿಪುಲವಾಗಿದೆ. ಆದರೆ, ಈಗಿನ ವಿಡಂಬನೆಗೂ ಹಿಂದಿನ ವಿಡಂಬನೆಗೂ ಸಾಕಷ್ಟು ವ್ಯತ್ಯಾಸವಿದೆ. ಈಗಿನ ವಿಡಂಬನೆ ಅಸಹಾಯಕನ ಮೈತುರಿಕೆಯಂತಾಗಿದೆ. ಕ್ರಮೇಣ ವಿಡಂಬನಾ ಸಾಹಿತ್ಯದ ಮೊನಚು ಕಡಿಮೆಯಾಗುತ್ತಿದೆ. ಸಾಹಿತ್ಯ ಮೊನಚು ಮಾಡುವ ಹೆಸರಲ್ಲಿ ಭಾಷಾ ಸಂಯಮ ಕಳೆದುಕೊಳ್ಳಬಾರದು. ಬರಹಗಾರ ಭಾಷಾ ಸಂಯಮ ಪಾಲಿಸಲೇಬೇಕು ಎಂದು ಹೇಳಿದರು.

ಪತ್ರಕರ್ತ ಜೋಗಿ ಮಾತನಾಡಿ, ಸುಳ್ಳನ್ನು ಸತ್ಯ ಎಂದು ಹೇಳುವ ಇಂದಿನ ರಾಜಕೀಯ ವ್ಯವಸ್ಥೆಗೆ ವಿಡಂಬನೆ ಒಂದು ಚಚ್ಚುಮದ್ದು ಇದ್ದಂತೆ ಎಂದರು.

ವಿಡಂಬನೆ ಸಾಹಿತ್ಯದಿಂದ ಓದುಗರಿಗೆ ಸಣ್ಣ ಸಮಾಧಾನ ಸಿಗುತ್ತದೆ. ಹೊಗಳಿಕೆ ನಡುವೆ ಬೀಗುವ ರಾಜಕಾರಣಿಗಳಿಗೆ ಹಾಸ್ಯದ ಮೂಲಕ 'ನಿನ್ನ ಯೋಗ್ಯತೆ ಇಷ್ಟೇ' ಎಂದು ಹೇಳುವ ಕೆಲಸ ವಿಡಂಬನೆಯಿಂದ ಆಗುತ್ತದೆ ಎಂದರು.

ವಿಡಂಬನೆ ಎಂಬುದು ರಾಜಕಾರಣಿಗಳ ವಿರುದ್ಧ ಯುದ್ಧ ಮಾಡುವ ಒಂದು ಅಸ್ತ್ರ. ಈಗೀಗ ಒಂದು ರಾಜಕೀಯ ಪಕ್ಷ ಇನ್ನೊಂದು ರಾಜಕೀಯ ಪಕ್ಷವನ್ನು ಅಪಹಾಸ್ಯ ಮಾಡುತ್ತವೆ. ಇಂಥ ಎಲ್ಲಾ ಪಕ್ಷಗಳ ವಿರುದ್ಧ 'ತೆಪರೇಸಿ' ಯುದ್ಧದ ವೆಪನ್ ಆಗಿ ಕಾರ್ಯ ನಿರ್ವಹಿಸುತ್ತಾನೆ ಎಂದರು.

ಬೆಂಗಳೂರಿನ ಬಹುರೂಪಿ ಸಂಸ್ಥೆಯ ಜಿ.ಎನ್. ಮೋಹನ್, ಪತ್ರಕರ್ತ ವಿಶಾಖ ಎನ್., ಅನಸೂಯ ಮಲ್ಲೇಶ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಪತ್ರಕರ್ತ ಬಿ.ಎನ್. ಮಲ್ಲೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತಿ ಬಾ.ಮ. ಬಸವರಾಜಯ್ಯ ಸ್ವಾಗತಿಸಿದರು. ಕೃತಿ ನಿರೂಪಿಸಿದರು. ಜಗನ್ನಾಥ ನಾಡಿಗೇರ್ ವಂದಿಸಿದರು.

## ಲಸಿಕೆ ಪಡೆದ ರಂಭಾಪುರಿ ಶ್ರೀ



ಬಾಳೆಹೊನ್ನೂರು, ಮಾ.20- ಕೋವಿಡ್-19 ಎರಡನೇ ಅಲೆ ಬಗ್ಗೆ ಜಾಗರೂಕರಾಗುವುದು ಅವಶ್ಯಕ ಎಂದು ಬಾಳೆಹೊನ್ನೂರು ರಂಭಾಪುರಿ ಜಗದ್ಗುರುಗಳು ಹೇಳಿದರು.

ಬಾಳೆಹೊನ್ನೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಹಂತದ ಲಸಿಕೆ ಪಡೆದು ಸುದ್ದಿಗಾರರೊಂದಿಗೆ ಜಗದ್ಗುರುಗಳು ಮಾತನಾಡಿದರು.

ಕೋವಿಡ್ ಹೆಚ್ಚಲು ಜನರ ನಿರ್ಲಕ್ಷ್ಯವೇ ಕಾರಣ ಎಂದರೆ ತಪ್ಪಾಗದು. ಜನತೆ ಮೈಮರೆಯದೇ ಸಾಮಾಜಿಕ ಅಂತರ ಕಾಪಾಡುವುದೂ ಸೇರಿದಂತೆ ನಿಯಮ ಪಾಲನೆ ಮಾಡುವುದು ಮುಖ್ಯ ಎಂದು ಹೇಳಿದರು.

# ಕಾನೂನು ಪ್ರಕಾರ ಭೂ ಪರಿವರ್ತನೆಯಾಗಲಿ : ಕುಮಾರಸ್ವಾಮಿ

## ಅಕ್ರಮ ಮಾಡಿರುವುದನ್ನು ರೈತರ ಹೆಸರಿನಲ್ಲಿ ಹೇಳಿಕೆ ನೀಡಿರುವವರು ಒಪ್ಪಿಕೊಂಡಿರುವುದರಿಂದ ಅವರ ವಿರುದ್ಧ ದೂರು

ದಾವಣಗೆರೆ, ಮಾ. 20 - ಕೃಷಿ ಭೂಮಿ ಮಾರಾಟಕ್ಕೆ ಸಂಬಂಧಿಸಿದಂತೆ ರೈತರಿಗೆ ಯಾವುದೇ ಕಿರುಕುಳ ನೀಡಿಲ್ಲ. ರೈತರು ಕಾನೂನು ಪ್ರಕಾರ ಭೂ ಪರಿವರ್ತನೆ ಮಾಡಿ ನಿವೇಶನ ಮಾರಬೇಕು ಎಂದಷ್ಟೇ ನೋಟಿಸ್ ಕಳಿಸಲಾಗಿದೆ ಎಂದು ದೂಡಾ ಆಯುಕ್ತ ಬಿ.ಟಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ತುಂಡು ಭೂಮಿ ಮಾರಾಟ ಮಾಡಲು ಸರ್ಕಾರದ ಅನುಮತಿ ಇದ್ದರೂ ಸಹ ರೈತರು ಈಗಾಗಲೇ ಮಾರಾಟ ಮಾಡಿರುವ ತುಂಡು ಭೂಮಿಯ ನೋಂದಣಿ ರದ್ದುಗೊಳಿಸುವುದಾಗಿ ನೋಟಿಸ್ ನೀಡಿ ಕಿರುಕುಳ ನೀಡಲಾಗುತ್ತಿದೆ ಎಂದು ಕೆಲ ರೈತರು ಪತ್ರಿಕಾ ಹೇಳಿಕೆ ನೀಡಿರುವ ಹಿನ್ನೆಲೆಯಲ್ಲಿ ಆಯುಕ್ತರು ಈ ಸ್ಪಷ್ಟನೆ ನೀಡಿದ್ದಾರೆ.

ರೈತರ ಹೆಸರಿನಲ್ಲಿ ಪತ್ರಿಕೆಯಲ್ಲಿ ಹೇಳಿಕೆ ನೀಡಿರುವವರು, ತಾವೇ ಅಕ್ರಮ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ಹೀಗಾಗಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಬಡಾವಣೆ ಠಾಣೆ ಪೊಲೀಸರಿಗೆ ದೂರು ನೀಡಿರುವುದಾಗಿ ಕುಮಾರಸ್ವಾಮಿ ಹೇಳಿದ್ದಾರೆ.

ಕಾನೂನು ಬಾಹಿರ ಬಡಾವಣೆ ನಿರ್ಮಾಣವಾಗದಂತೆ ನೋಡಿಕೊಳ್ಳುವ ಹೊಣೆ ನಮ್ಮ ಮೇಲಿದೆ ಎಂದಿರುವ ದೂಡಾ ಆಯುಕ್ತ ಕುಮಾರಸ್ವಾಮಿ, ರೈತರಿಗೂ ತೊಂದರೆ ಆಗಬಾರದು ಹಾಗೂ ನಿವೇಶನ ಖರೀದಿಸುವವರಿಗೂ ತೊಂದರೆ ಆಗಬಾರದು ಎಂದು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದಿದ್ದಾರೆ.

ನಾವು ರೈತರ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗಿರಲಿಲ್ಲ. ನಾವು ಭೂ ಪರಿವರ್ತನೆಗೆ ಸಂಬಂಧಿಸಿದ ದಾಖಲೆಗಳಷ್ಟನ್ನೇ ಕೇಳಿದ್ದೆವು. ಒಂದು ವೇಳೆ ಕಾನೂನು ಬಾಹಿರ ನಿವೇಶನ ಮಾರಿದ್ದರೆ, ಜಮೀನು ವಶಪಡಿಸಿಕೊಳ್ಳುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಮಾತ್ರ ಇದೆ ಎಂದವರು ವಿವರಿಸಿದ್ದಾರೆ.

ಒಂದು ವೇಳೆ ರೈತರು ಕಾನೂನು ರೀತ್ಯ ಭೂ ಪರಿವರ್ತನೆ ಮಾಡಿಕೊಳ್ಳಲು ಬಯಸಿದರೆ ಅದಕ್ಕೆ ನಮ್ಮ ಸಹಕಾರ ಇದೆ. ಆದರೆ, ಮೂಲಭೂತ ಸೌಲಭ್ಯ ಕಲ್ಪಿಸದೇ ರೆವಿನ್ಯೂ ಸೈಟ್ ಎಂದು ಮಾರಿದರೆ ಖರೀದಿಸಿದವರಿಗೆ ಖಾತೆ ಆಗುವುದಿಲ್ಲ, ನಿವೇಶನದ ಮೇಲೆ ಸಾಲ ಸಿಗುವುದಿಲ್ಲ. ಮನೆ ಕಟ್ಟಲು ಅನುಮತಿ ಸಹ ಸಿಗುವುದಿಲ್ಲ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಈ ರೀತಿ ನಿವೇಶನ ಖರೀದಿಸಿದ ಹಲವರು ಪರಿತಪಿಸುತ್ತಿದ್ದಾರೆ ಎಂದಿರುವ ಅವರು, ಭೂ ಮಾಫಿಯಾ ಮಾಡುವುದನ್ನು ಒಪ್ಪುವುದಿಲ್ಲ. ಯಾವುದೇ ಬೆದರಿಕೆಗೆ ಜಗ್ಗುವುದಿಲ್ಲ. ಕಾನೂನು ಚೌಕಟ್ಟಿನಲ್ಲೇ ನಾವು ಉತ್ತರ ನೀಡುತ್ತೇವೆ, ಪರಿಹಾರ ಕಂಡುಕೊಳ್ಳುತ್ತೇವೆ ಎಂದು ಹೇಳಿದ್ದಾರೆ.

### ಮಧ್ಯವರ್ತಿಗಳ ಹಾವಳಿಯಿಂದ ರೈತರಿಗೆ, ಸರ್ಕಾರಕ್ಕೆ ವಂಚನೆ : ಶಿವಕುಮಾರ್

ದಾವಣಗೆರೆ,ಮಾ.20- ಸಾರ್ವಜನಿಕರ ಹಿತವನ್ನು ಕಾಪಾಡುವ ನಿಟ್ಟಿನಲ್ಲಿ ಕಾನೂನು ಬಾಹಿರ ಬಡಾವಣೆ ನಿರ್ಮಾಣವಾಗದಿರುವಂತೆ ನೋಡಿಕೊಳ್ಳುವ ಹೊಣೆ ದೂಡಾ ಮೇಲಿದ್ದು, ಈ ಹಿನ್ನೆಲೆಯಲ್ಲಿ ಯಾವುದೇ ಬೆದರಿಕೆಗಳಿಗೆ ಜಗ್ಗುವುದಿಲ್ಲ ಎಂದು ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ತುಂಡು ಭೂಮಿಯ ನೋಂದಣಿ ರದ್ದುಗೊಳಿಸುವುದಾಗಿ ದೂಡಾ ನೋಟಿಸ್ ನೀಡಿ ಕಿರುಕುಳ ನೀಡುತ್ತಿದೆ ಎಂದು ಕೆಲ ರೈತರು ನೀಡಿರುವ ಪತ್ರಿಕಾ ಹೇಳಿಕೆಗೆ ಸಂಬಂಧಿಸಿದಂತೆ ಶಿವಕುಮಾರ್ ಈ ಸ್ಪಷ್ಟನೆ ನೀಡಿದ್ದಾರೆ.

ಮೂಲಭೂತಸೌಲಭ್ಯಗಳನ್ನುಕಲ್ಪಿಸದೇ ರೆವಿನ್ಯೂ ಸೈಟ್ ಎಂದು ಮಾರಾಟ ಮಾಡುತ್ತಿರುವ ಬಗ್ಗೆ ತಮಗೆ ದೂರುಗಳು ಬರುತ್ತಿವೆ ಎಂದು ಹೇಳಿರುವ ಅವರು, ಈ ಹಿನ್ನೆಲೆಯಲ್ಲಿ ರೈತರು ಕಾನೂನು ಪ್ರಕಾರ ಭೂ ಪರಿವರ್ತನೆ ಮಾಡಿಕೊಂಡ ನಂತರವೇ ನಿವೇಶನ ಮಾರಾಟ ಮಾಡಬೇಕು ಎಂದು ತಿಳಿಸಿದ್ದಾರೆ.

ಮಧ್ಯವರ್ತಿಗಳು ರೈತರಿಗೆ ತಪ್ಪು ಮಾಹಿತಿ ಗಳನ್ನು ನೀಡಿ ಕಾನೂನು ಬಾಹಿರವಾಗಿ ಬಡಾವಣೆ ನಿರ್ಮಿಸುತ್ತಿದ್ದಾರೆ. ಇದರಿಂದ ರೈತರಿಗೆ, ಸರ್ಕಾರ ಮತ್ತು ದೂಡಾಕ್ಕೆ ನಂಬಿಕೆ ದ್ರೋಹ, ವಂಚನೆ ಮಾಡುತ್ತಿರುವುದಲ್ಲದೇ, ರೆವಿನ್ಯೂ ಸೈಟ್ ಎಂದು ತಿಳಿದು ಖರೀದಿ ಮಾಡಿಕೊಳ್ಳುವ ಜನರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಆದರೆ, ಮಧ್ಯವರ್ತಿ ಗಳು ಮಾತ್ರ ಕೋಟ್ಯಾಂತರ ರೂ.ನಷ್ಟು ಲಾಭ ಮಾಡಿಕೊಳ್ಳುತ್ತಿದ್ದಾರೆ ಎಂದು ಉದಾಹರಣೆಗಳೊಂದಿಗೆ ಶಿವಕುಮಾರ್ ವಿವರಿಸಿದ್ದಾರೆ.

## ನಗರದಲ್ಲಿಂದು ವಿದ್ಯುತ್ ವ್ಯತ್ಯಯ

ನಗರದ ಎಂಸಿಸಿ 'ಬಿ' ಬ್ಲಾಕ್‌ನ ಸಿದ್ದವೀರಪ್ಪ ಬಡಾವಣೆ 1ನೇ ಕ್ರಾಸ್‌ನಿಂದ 10ನೇ ಕ್ರಾಸ್‌ವರೆಗೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿದ ಮಧ್ಯಾಹ್ನ 2 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಹೃದಯಪೂರ್ವಕ ಅಭಿನಂದನೆಗಳು

ದಾವಣಗೆರೆ ಮಹಾನಗರ ಪಾಲಿಕೆ
ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ
ಅವಿರೋಧವಾಗಿ ಆಯ್ಕೆಯಾಗಿರುವ
ಶ್ರೀ ಎಲ್.ಡಿ. ಗೋಣೆಪ್ಪ
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.



✦ ಶಾಮನೂರು ನಾಗರಾಜ್
✦ ಎಲ್.ಜಿ. ಪ್ರಸನ್ನ
✦ ಎಲ್.ಜಿ. ಬಸವರಾಜ್
✦ ಎಲ್.ಜಿ. ಪರಶುರಾಮ್
✦ ಪ್ರಕಾಶ್ ✦ ಈಶ್ವರ್ ✦ ಸಂದೀಪ್

50ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಬಾತಿ ಪಾಲ್ದಾರ್ ಗೌಡ್ರು ಶ್ರೀ ಕೆ.ಜಿ. ರೇವಣಸಿದ್ದಪ್ಪ
ಮತ್ತು ಶ್ರೀಮತಿ ಸರೋಜಮ್ಮ ರೇವಣಸಿದ್ದಪ್ಪ
ಇವರು ಇಂದಿಗೆ ಸುಮಧುರ ದಾಂಪತ್ಯ ಜೀವನದ
50 ವರ್ಷಗಳನ್ನು ಪೂರೈಸಿದ್ದು, ನಲ್ಮೆಯ ಜೋಡಿಗೆ
ದೇವರು ಇನ್ನೂ ಹೆಚ್ಚಿನ ಆರೋಗ್ಯ ಭಾಗ್ಯ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ನಲ್ಲೂರು ಎಸ್. ರಾಜಕುಮಾರ್ ಮಾಲೀಕರು
ನಲ್ಲೂರು ಎಸ್. ರಾಘವೇಂದ್ರ ಮಾಲೀಕರು

ನಲ್ಲೂರು ವಿಜಯಾ ಜ್ಯೂಯಲರಿ ಮಾರ್ಟ್
ಮಂಡಿಪೇಟೆ, ದಾವಣಗೆರೆ.

## ಇಂದು ಸರ್ಕಾರದ ಕಾಮಗಾರಿಗಳ ಉದ್ಘಾಟನೆ, ಗುದ್ದಲಿ ಪೂಜೆ

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಸರ್ಕಾರದ ವಿವಿಧ ಕಾಮಗಾರಿಗಳ ಉದ್ಘಾಟನೆ ಹಾಗೂ ಗುದ್ದಲಿ ಪೂಜೆ ಸಮಾರಂಭ ದಾವಣಗೆರೆ ತಾಲ್ಲೂಕು ದೊಡ್ಡಬಾತಿಯಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಹಮ್ಮಿಕೊಳ್ಳಲಾಗಿದೆ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನಿರ್ಮಿಸಿರುವ ಹೆಚ್ಚುವರಿ ಕೊಠಡಿಗಳ ಮತ್ತು ಬಾತಿ ಗ್ರಾಮದ ಸರ್ಕಾರಿ ಕಿರಿಯ ಉರ್ದು ಪ್ರಾಥಮಿಕ ಶಾಲೆಗೆ ನಿರ್ಮಿಸಿರುವ ಹೆಚ್ಚುವರಿ ಕೊಠಡಿಯನ್ನು ಸಚಿವ ಬಿ.ಎ. ಬಸವರಾಜ್ ಭೈರತಿ ಉದ್ಘಾಟನೆ ನೆರವೇರಿಸುವರು.

ದೊಡ್ಡಬಾತಿ ಗ್ರಾಮದ ಸರ್ಕಾರಿ ಪ್ರೌಢಶಾಲೆಗೆ ನಿರ್ಮಿಸಿರುವ ಹೆಚ್ಚುವರಿ ಕೊಠಡಿಗಳ ಮತ್ತು ಕಾಡಜ್ಜಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ನಿರ್ಮಿಸಿರುವ ಹೆಚ್ಚುವರಿ ಕೊಠಡಿಗಳ ಉದ್ಘಾಟನೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ನೆರವೇರಿಸುವರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿನ 5054ರ ಯೋಜನೆಯ ಕಾಮಗಾರಿಗಳ ಗುದ್ದಲಿ ಪೂಜೆಯನ್ನು ಸಂಸದ ಜಿ.ಎಂ. ಸಿದ್ದೇಶ್ವರ ನೆರವೇರಿಸುವರು. ಕಾರ್ಯಕ್ರಮದಲ್ಲಿ ಜಿ.ಪಂ. ಅಧ್ಯಕ್ಷರಾದ ಶ್ರೀಮತಿ ಶಾಂತಕುಮಾರಿ ಶಶಿಧರ್ ಉಪಸ್ಥಿತರಿರುವರು. ಶಾಸಕ ಎಸ್.ಎ. ರವೀಂದ್ರನಾಥ್ ಅಧ್ಯಕ್ಷತೆ ವಹಿಸುವರು.

ಕಾರ್ಯಕ್ರಮವನ್ನು ಜಿ.ಪಂ (ದಾವಣಗೆರೆ) ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದೆ.

## ಸಾಸಲು : ಇಂದು ಓಶೋ ಧ್ಯಾನ ಶಿಬಿರ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಷನ್ (ದಾವಣಗೆರೆ) ವತಿಯಿಂದ ಒಂದು ದಿನದ ಓಶೋ ಧ್ಯಾನ ಶಿಬಿರವನ್ನು ಸಾಸಲು ಗ್ರಾಮದ ಬುದ್ಧ - ಓಶೋ ಧ್ಯಾನ ಕೇಂದ್ರದಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ ನಡೆಯುವುದು.

ಈ ಶಿಬಿರದಲ್ಲಿ ಓಶೋರವರ ವಿಶಿಷ್ಟ ಧ್ಯಾನ ವಿಧಾನಗಳಾದ ಡೈನಾಮಿಕ್ ಧ್ಯಾನ, ಗೆಬ್ರಿಷ್ ಧ್ಯಾನ ಹಾಗು ಹಲವು ಧ್ಯಾನ ಪದ್ಧತಿಗಳ ಬಗ್ಗೆ ಹಾಗೂ ಸಂಗೀತ ಮತ್ತು ನಗುವಿನ ಮೂಲಕ ಮಾನಸಿಕ ಒತ್ತಡ, ಖಿನ್ನತೆ ಮತ್ತು ಮನೋದೆಶೆಗಳನ್ನು ಹೊರಹಾಕಿ ಮಾನಸಿಕ ಹಾಗೂ ದೈಹಿಕ ಆರೋಗ್ಯ ಗಳಿಸುವುದನ್ನು ತಿಳಿಸಲಾಗುವುದು. ಹೆಚ್ಚಿನ ವಿವರಗಳಿಗೆ ಪುಷ್ಪ (ಮೊ: 90367 19573) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

## ಹಂಪನೂರು : ಇಂದು ಬಸವನ ಉತ್ಸವ

ಚಿತ್ರದುರ್ಗ ತಾಲ್ಲೂಕು ಹಂಪನೂರು ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ ರಥೋತ್ಸವ ಹಾಗೂ ಶ್ರೀ ರಾಮೇಶ್ವರ ಸ್ವಾಮಿ ಬಸವನ ಉತ್ಸವ ಕಾರ್ಯಕ್ರಮದಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಶ್ರೀ ರಾಮೇಶ್ವರ ಸ್ವಾಮಿಯ ಬಸವನ ಉತ್ಸವ ನಡೆಯಲಿದೆ.

# ಮುಗ್ಧ ಮಕ್ಕಳನ್ನು ಪೀಡಿಸುವ ಜ್ವರದ 'ಫಿಟ್ಸ್'



**ಫಿಟ್ಸ್‌ನಿಂದ ಯಾವುದೇ ಮಗು ಜೀವ ಕಳೆದುಕೊಳ್ಳುವುದಿಲ್ಲ. ಮಗುವಿಗೆ ವಿನಾಕಾರಣ ಬರೆ ಹಾಕುವುದು, ಸಗಣಿ ಅಥವಾ ಚಪ್ಪಲಿ ಮೂಸಿಸುವುದು, ಕಬ್ಬಿಣದ ವಸ್ತುಗಳನ್ನು ಕೈಗೆ ಕೊಡುವುದು ಇಂತಹ ಮೂಢ ನಂಬಿಕೆಗಳನ್ನು ಪಾಲಿಸದೆ ವೈದ್ಯರ ಸಲಹೆಯಂತೆ ಪ್ರಥಮ ಚಿಕಿತ್ಸೆ ನೀಡುವುದು ಸೂಕ್ತ.**

'ಅಪಸ್ಮಾರ ಅಥವಾ ಫಿಟ್ಸ್' ಕಾಯಿಲೆ ಶತಮಾನಗಳಿಂದಲೂ ಮನುಕುಲವನ್ನು ಕಾಡುತ್ತಿದೆ. ಆದರೆ ವೈಜ್ಞಾನಿಕ ಜಗತ್ತಿನಲ್ಲಾಗುತ್ತಿರುವ ಬದಲಾವಣೆಗಳು, ಅದರಲ್ಲೂ ವೈದ್ಯ ಲೋಕದಲ್ಲಿ ಇಂತಹ ಕಾಯಿಲೆಗಳನ್ನು ಗುರುತಿಸುವುದು ಹಾಗೂ ಚಿಕಿತ್ಸೆ ನೀಡುವುದು ಬಹಳ ಸುಲಭವಾಗಿದೆ. ಚಿಕ್ಕ ಮಕ್ಕಳಲ್ಲಿ ಬರುವ ಜ್ವರದ ಫಿಟ್ಸ್ (febrile convulsion) ತೀರಾ ಸಾಮಾನ್ಯವಾದ ಕಾಯಿಲೆ. ಇದರ ಬಗ್ಗೆ ಕೆಲವು ವಿಷಯಗಳನ್ನು ತಿಳಿದುಕೊಳ್ಳುವುದು ಸೂಕ್ತ.

**ಈ ಕಾಯಿಲೆ ಯಾವ ವಯಸ್ಸಿನ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ?**

ಸಾಮಾನ್ಯವಾಗಿ ಈ ಕಾಯಿಲೆಯು 6 ತಿಂಗಳಿಂದ 6 ವರ್ಷದೊಳಗಿನ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ವಿರಳವಾಗಿ 6 ತಿಂಗಳಿಗಿಂತ ಮುಂಚೆ ಮತ್ತು 6 ವರ್ಷದ ನಂತರ ಮೊದಲ ಬಾರಿಗೆ ಕಾಣಿಸಿಕೊಳ್ಳಬಹುದು.

**ಜ್ವರದ ಫಿಟ್ಸ್‌ಗೆ ಕಾರಣಗಳೇನು?** ಚಿಕ್ಕಮಕ್ಕಳಲ್ಲಿ ಜ್ವರ ಕಾಣಿಸಿಕೊಳ್ಳುವುದು ಸಹಜ. ಅದು ಸಾಧಾರಣ ವೈರಲ್ ಜ್ವರವಾಗಿರಬಹುದು. ವಾಂತಿ ಭೇದಿಯಿಂದ ಜ್ವರ ಬಂದಿರಬಹುದು. ಗಂಟಲು ಬೇನೆ ಅಥವಾ ಕಿವಿ ನೋವಿನಿಂದ ಜ್ವರ ಬಂದಿರಬಹುದು. ಈ ರೀತಿ ಜ್ವರ ಆರಂಭವಾಗಿ ಜಾಸ್ತಿಯಾಗುವ ಸಂದರ್ಭದಲ್ಲಿ ಮಿದುಳಿನ ವಿದ್ಯುತ್ ಸಂಚಾರದಲ್ಲಿ ಏರುಪೇರಾಗುತ್ತದೆ. ಹೀಗೆ ವ್ಯತ್ಯಾಸಗೊಂಡ ವಿದ್ಯುತ್ ಚಲನೆಯಿಂದಾಗಿ ಮಗುವಿಗೆ ಫಿಟ್ಸ್ ಕಾಣಿಸಿಕೊಳ್ಳುತ್ತದೆ. ಸುಮಾರು 100 ರಲ್ಲಿ 5 ಮಕ್ಕಳಿಗೆ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ.

**ಜ್ವರದ ಫಿಟ್ಸ್ ಕಾಯಿಲೆಯ ಸ್ವರೂಪವೇನು?** ಮಗುವಿನಲ್ಲಿ ಜ್ವರ ಜಾಸ್ತಿಯಾದಂತೆ ಕೆಲ ಗಂಟೆಗಳಲ್ಲಿ ಮಗು ಕಿರಿಕಿರಿ ಶುರು ಮಾಡಿ, ಬಾಯಿಯಿಂದ ನೊರೆ ಬರುತ್ತದೆ. ಎರಡರಿಂದ 5 ನಿಮಿಷಗಳಲ್ಲಿ ಫಿಟ್ಸ್ ತಾನಾಗಿಯೇ ನಿಲ್ಲುತ್ತದೆ. ನಂತರದ ಕೆಲ ನಿಮಿಷ ಅಥವಾ ಒಂದೆರಡು ಗಂಟೆ ಮಗು ಮಂಕಾಗಿರುತ್ತದೆ (febrile convulsion).

**ಈ ಕಾಯಿಲೆ ಮಗುವಿನಲ್ಲಿ ಎಷ್ಟು ಬಾರಿ ಕಾಣಿಸಿಕೊಳ್ಳುತ್ತದೆ?** ಪ್ರತಿ ಬಾರಿಯೂ ಜ್ವರ ಬಂದಾಗ ಈ ಕಾಯಿಲೆ ಕಾಣಿಸಿಕೊಳ್ಳುವುದು ಸಾಮಾನ್ಯ. ಒಮ್ಮೆ ಜ್ವರ ಬಂದಾಗ ಮಗುವಿಗೆ ಒಂದು ಅಥವಾ ಎರಡು ಬಾರಿ ಫಿಟ್ಸ್ ಬರುತ್ತದೆ. ಜ್ವರ ಕಾಣಿಸಿಕೊಂಡ ಮೊದಲ 24 ಗಂಟೆಗಳಲ್ಲಿ ಫಿಟ್ಸ್ ಕಾಣಿಸಿಕೊಳ್ಳುವುದು ಸಾಮಾನ್ಯ. ಯಾವುದೇ ಜ್ವರವಾದರೂ 2-4 ದಿನ ಇರುತ್ತದೆ. ಆದರೆ ಎರಡನೇ ದಿನದ ನಂತರ ಫಿಟ್ಸ್ ಬರುವುದು ಅಸಹಜ.

**ಜ್ವರದ ಫಿಟ್ಸ್ ಅನುವಂಶಿಕವೇ?** ಮೇಲೆ ತಿಳಿಸಿದ ಹಾಗೆ ಜ್ವರದ ಫಿಟ್ಸ್ 'ಅತಿ ಸಾಮಾನ್ಯ ಕಾಯಿಲೆ. ಯಾರೂ ಗಾಬರಿ ಪಡಬೇಕಾಗಿಲ್ಲ. ಕೆಲ ಬಾರಿ ಈ ಕಾಯಿಲೆಯು ಮನೆಯಲ್ಲಿ ಎರಡು ಮೂರು ತಲೆಮಾರಿನವರಿಗೂ ಕಾಣಿಸಿಕೊಳ್ಳಬಹುದು. ಪೋಷಕರು ಚಿಕ್ಕವರಿದ್ದಾಗ ಈ ಕಾಯಿಲೆಯಿಂದ ನರಳಿದ್ದರೆ, ಅಂತಹ ಸಂದರ್ಭದಲ್ಲಿ ಮಕ್ಕಳಲ್ಲಿ ಜ್ವರದ ಫಿಟ್ಸ್ ಬರುವ ಅವಕಾಶಗಳು ಜಾಸ್ತಿ. ಅದರಂತೆ ಮನೆಯಲ್ಲಿ ಈಗಾಗಲೇ ಒಂದು ಮಗುವಿಗೆ ಜ್ವರದ ಫಿಟ್ಸ್ ಕಾಯಿಲೆಯಿದ್ದರೆ, ಇನ್ನೊಂದು ಮಗುವಿಗೆ ಕಾಯಿಲೆ ಬರುವ ಅವಕಾಶಗಳು ಜಾಸ್ತಿ. ಮುಖ್ಯವಾಗಿ ಲಿಂಗಭೇದವಿಲ್ಲದೆ, ಗಂಡು ಹಾಗೂ ಹೆಣ್ಣು ಮಕ್ಕಳಲ್ಲಿ ಸಮಾನವಾಗಿ ಈ ರೋಗ ಕಾಡುತ್ತದೆ.

**ಜ್ವರದ ಫಿಟ್ಸ್ ಬಂದಾಗ ಪೋಷಕರು ಏನು ಮಾಡಬೇಕು?** ಆಟವಾಡುತ್ತಿದ್ದ ಮಗುವಿಗೆ ಫಿಟ್ಸ್ ಬಂತೆಂದರೆ ಮನೆಯಲ್ಲಿ ಎಲ್ಲರಿಗೂ ಕೈಕಾಲು ನಡುಗಲಾರಂಭಿಸುತ್ತದೆ, ಮಾತೇ ಹೊರಡುವುದಿಲ್ಲ. ನಿಜ, ಆದರೆ ಯಾರೂ ಗಾಬರಿಪಡಬೇಕಾಗಿಲ್ಲ. ಫಿಟ್ಸ್‌ನಿಂದ ಯಾವುದೇ ಮಗು ಜೀವ ಕಳೆದುಕೊಳ್ಳುವುದಿಲ್ಲ. ಮಗುವಿಗೆ ವಿನಾಕಾರಣ ಬರೆ ಹಾಕುವುದು, ಸಗಣಿ ಅಥವಾ ಚಪ್ಪಲಿ ಮೂಸಿಸುವುದು, ಕಬ್ಬಿಣದ ವಸ್ತುಗಳನ್ನು ಕೈಗೆ ಕೊಡುವುದು ಹೀಗೆಲ್ಲ ಮಾಡಕೂಡದು. ಆ ಸಂದರ್ಭದಲ್ಲಿ ನೀಡಬೇಕಾದ ಪ್ರಥಮ ಚಿಕಿತ್ಸೆಯೆಂದರೆ.

* ಮಗುವನ್ನು ಆರಾಮವಾಗಿ ಹಾಸಿಗೆಯ ಮೇಲೆ ಮಲಗಿಸಬೇಕು. ನಂತರ ಬಲ /ಎಡ ಭಾಗಕ್ಕೆ ತಿರುಗಿಸಿ ಮಲಗಿಸುವುದು ಒಳ್ಳೆಯದು.

* ಬಟ್ಟೆಗಳನ್ನು ಸಡಿಲಿಸಬೇಕು.

* ಆರಾಮವಾಗಿ ಗಾಳಿ, ಬೆಳಕು ಬರುವಂತೆ ನೋಡಿಕೊಳ್ಳಬೇಕು.

* ಬಾಯಲ್ಲಿ ಸಣ್ಣ ಬಟ್ಟೆಯಿಟ್ಟು ನಾಲಿಗೆ ಕಡಿದುಕೊಳ್ಳದಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ ನಮ್ಮ ಬೆರಳನ್ನೇ ಕಚ್ಚಬಹುದು.

* ಜ್ವರ ಕಡಿಮೆ ಮಾಡಲು ಉಗುರು ಬೆಚ್ಚಗಿನ ನೀರಿನಲ್ಲಿ ಮೈ ಒರೆಸಬೇಕು. ಫ್ಯಾನ್ ಕೆಳಗೆ ಮಗುವನ್ನು ಮಲಗಿಸುವುದು ಸೂಕ್ತ.

* ಮರಳಿ ಎಚ್ಚರ ಬಂದಾಗ ವೈದ್ಯರು ಹೇಳಿದ ಔಷಧಗಳನ್ನು ಹಾಕತಕ್ಕದ್ದು.ಜ್ವರದ ಫಿಟ್ಸ್ ಮತ್ತೊಮ್ಮೆ ಬರದಂತೆ ಏನು ಜಾಗ್ರತೆ ವಹಿಸಬೇಕು ?

* ಜ್ವರದ ಫಿಟ್ಸ್ ಜ್ವರ ಬಂದಾಗ ಮಾತ್ರ ಬರುವುದರಿಂದ ಜ್ವರ ಬಂದಾಗ ಮುಂಜಾಗ್ರತೆ ವಹಿಸಿದರೆ ಫಿಟ್ಸ್ ಬರದ ಹಾಗೆ ನೋಡಿಕೊಳ್ಳಬಹುದು.

* ಜ್ವರ ಕಡಿಮೆ ಮಾಡಲು ಮಗುವನ್ನು ಫ್ಯಾನ್ ಕೆಳಗೆ ಮಲಗಿಸಿ, ನೀರಿನಲ್ಲಿ ಮೈಯನ್ನು ಒರೆಸತಕ್ಕದ್ದು, ಅತೀ ಕಡಿಮೆ ಬಟ್ಟೆಯಲ್ಲಿ ಬಿಡಿ, ಅಂದರೆ ಮಗುವಿನ ದೇಹವನ್ನು ಗಾಳಿಗೆ ಬಿಚ್ಚಿಡಬೇಕು. (ಜ್ವರ ಬಂದಾಗ ಸ್ವೆಟರ್, ಟೋಪಿ, ಕಾಲು ಚೀಲ ಹಾಕುವುದು ತಪ್ಪು. ಇದರಿಂದ ಜ್ವರ ಇನ್ನೂ ಜಾಸ್ತಿಯಾಗುವ ಸಂಭವವಿರುತ್ತದೆ.)

* ಜ್ವರ ಆರಂಭವಾಗುತ್ತಿದ್ದಂತೆ ಸಾಮಾನ್ಯವಾಗಿ ಬಳಸುವ ಪ್ಯಾರಸಿಟಮಾಲ್ ಜ್ವರದ ಔಷಧಿ (febrex, Calpol, Dolo ಇತ್ಯಾದಿ) ಕೊಟ್ಟು, ಫಿಟ್ಸ್ ಬರದ ಹಾಗೆ ಮಿಡಾಜೋಲಮ್ (Midozolum) ಮಾತ್ರೆಯನ್ನು ವೈದ್ಯರ ಸಲಹೆಯಂತೆ ಕೊಡತಕ್ಕದ್ದು.

ಕೆಲವೊಮ್ಮೆ ಜ್ವರ ಹಾಗೂ ಫಿಟ್ಸನ್ನು ತಕ್ಷಣ ಹತೋಟಿಗೆ ತರಲು ರೆಕ್ಟಲ್ ಸೆಪ್ಪೋಸಿಟರೀಸ (febrex, Calpol, Dolo) ಔಷಧಿಗಳನ್ನು ನೀಡಲಾಗುತ್ತದೆ.

**ಈ ಕಾಯಿಲೆ ಮರುಕಳಿಸದಂತೆ ಗಾರ್ಡಿನಲ್ ಹಾಗೂ ಇತರೆ ಔಷಧಿಗಳನ್ನು ನೀಡಬಹುದೇ?** ಸಾಮಾನ್ಯವಾಗಿ ಫಿಟ್ಸ್ ಕಾಯಿಲೆಗೆ ನೀಡತಕ್ಕ ಔಷಧಿಗಳಾದ ಗಾರ್ಡಿನಲ್ (Gardinal), ಫೆನಟಾಯಿನ್ (Phynytoin) ಟೆಗ್ರೆಟಾಲ್ (Tagretals) ನಂತರದ ಯಾವುದೇ ಮಾತ್ರೆಗಳನ್ನು ಬಳಸಲಾಗುವುದಿಲ್ಲ. ಜ್ವರ ಬಂದಾಗ ಮಾತ್ರ ಮೇಲೆ ತಿಳಿಸಿದಂತೆ ಜಾಗರೂಕತೆ ವಹಿಸಿದರೆ ಸಾಕು.

**ಮಗು ದೊಡ್ಡದಾದ ಮೇಲೆ ಇದು ಫಿಟ್ಸ್ ಕಾಯಿಲೆಯಾಗಿ ಉಳಿಯುತ್ತದೆಯೇ?** ಮುಂಚೆ ತಿಳಿಸಿದಂತೆ ಜ್ವರದ ಫಿಟ್ಸ್ ಜ್ವರದ ಜೊತೆಗೆ 6 ತಿಂಗಳಿಂದ 6 ವರ್ಷದ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ಅದೃಷ್ಟವಶಾತ್ ನಂತರದ ಜೀವನದಲ್ಲಿ ಇದು ಸಾಮಾನ್ಯವಾಗಿ ಮರುಕಳಿಸುವುದಿಲ್ಲ. ಆದ್ದರಿಂದ ಯಾರೂ ಹೆದರಬೇಕಿಲ್ಲ. ಆದರೆ ಮನೆಯಲ್ಲಿ ಇತರರಿಗೆ ಫಿಟ್ಸ್ ಕಾಯಿಲೆಯಿದ್ದರೆ, ಬುದ್ಧಿಮಾಂಧ್ಯ ಮಕ್ಕಳಿದ್ದರೆ ಹುಷಾರಾಗಿರುವುದು ಒಳ್ಳೆಯದು.

ಒಟ್ಟಾರೆ ಜ್ವರದ ಫಿಟ್ಸ್ (Febrile convulsion) ಮುಗ್ಧ ಮಕ್ಕಳನ್ನು ಕಾಡತಕ್ಕ ಸಾಮಾನ್ಯ ಕಾಯಿಲೆ. ಪೋಷಕರು ಧೃತಿಗೆಡದೆ ಮಕ್ಕಳ ವೈದ್ಯರ ಸಲಹೆ ಪಡೆದು ಈ ಕಾಯಿಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು.

ಸಾಮಾನ್ಯವಾಗಿ ಮಕ್ಕಳನ್ನು ಕಾಡುವ ಎಲ್ಲಾ ಕಾಯಿಲೆಗಳಗೂ ವೈದ್ಯ ಲೋಕದಲ್ಲಿ ಚಿಕಿತ್ಸೆ ಮತ್ತು ಪರಿಹಾರಗಳುಂಟು. ನಾವು ಮುಖ್ಯವಾಗಿ ಚಿಕಿತ್ಸೆಯ ಲಭ್ಯತೆಯ ಬಗ್ಗೆ ತಿಳಿದುಕೊಂಡು ನಮ್ಮ ಮಕ್ಕಳನ್ನು ಮುಂಬರುವ ಅನಾಹುತಗಳಿಂದ ರಕ್ಷಿಸಿಕೊಳ್ಳುವುದು ಒಳಿತು.

**- ಡಾ|| ಜಿ. ಗುರುಪ್ರಸಾದ್,**
ಮಕ್ಕಳ ತಜ್ಞರು ಮತ್ತು ನವಜಾತ ಶಿಶು ತಜ್ಞರು, ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ, ಸಂಶೋಧನಾ ಕೇಂದ್ರ ದಾವಣಗೆರೆ.

## ಪ್ರಕಟಣೆ

ಈ ಕೆಳಗೆ ಸಹಿ ಮಾಡಿದ ಶ್ರೀ ರವಿರಾಜ್ ಎಂ.ಇ. ಬಿನ್ ಇ.ಎಂ. ಪಾಂಡಿಯನ್, ಡೋರ್ ನಂ. 3683/1ಎ-42, 10ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ ವಾಸಿಯಾದ ನನ್ನ ಸ್ವಾಧೀನಾನುಭವ ಮತ್ತು ಮಾಲೀಕತ್ವದಲ್ಲಿರುವ ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಒಳಪಟ್ಟ ಆವರಗೆರೆ ವಿಭಾಗದಲ್ಲಿ ಬರುವ **- ಖಾತೆ ನಂ. 1844, ಡೋರ್ ನಂ. 362 ರಲ್ಲಿನ ಒಟ್ಟು 3,21,255** ಚದರುಡಿಗಳ ಪೈಕಿ ಪಶ್ಚಿಮ ಭಾಗದ 1,03,455 ಚದುರಡಿಗಳುಳ್ಳ ವಾಸೋಪಯೋಗಕ್ಕೆ ಪರಿವರ್ತಿತ ಗೊಂಡಿರುವ ಆದರೆ ಇನ್ನೂ ಅಭಿವೃದ್ದಿಗೊಳ್ಳದ ಹಾಗೂ ರಾಷ್ಟ್ರೀಯ ಹೆದ್ದಾರಿ-4 ಕ್ಕೆ ಲಗತ್ತಾದ ಸ್ಥಿರ ಸೊತ್ತನ್ನು ತಾ.17/19-12-2012 ರಂದು ನನ್ನ ಹೆಸರಿಗೆ ರಿಜಿಸ್ಟರ್ ಆದ ಮೂಲ ಕ್ರಯ ಪತ್ರ **ಎಸ್.ಆರ್. ನಂ.12524/2012-13 ಸಿ.ಡಿ. ನಂಬರ್ ಡಿ.ವಿ.ಜಿ. 286** ನ್ನು ತಾ. 17-3-2021 ರಂದು ಸಂಜೆ ಸುಮಾರು 7.30 ರ ಸಮಯದಲ್ಲಿ ವಿದ್ಯಾನಗರ ಬಸ್ ಸ್ಟಾಪ್ ಕಡೆಯಿಂದ ಬೈಪಾಸ್ ಕಡೆಗೆ ಹೋಗುತ್ತಿರುವಾಗ ರಸ್ತೆಯಲ್ಲಿ ಎಲ್ಲಿಯೋ ಬಿದ್ದು ಕಳೆದು ಹೋಗಿರುತ್ತದೆ. ಸದರಿ ಮೂಲ ಕ್ರಯ ಪತ್ರ ಯಾರಿಗಾದರೂ ಸಿಕ್ಕಲ್ಲಿ, ಅಂತಹವರು ಈ ಕೆಳಗಿನ ವಿಳಾಸಕ್ಕೆ ತಂದುಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.

ಇಂದ
**ಶ್ರೀ ರವಿರಾಜ್ ಎಂ.ಇ. ಬಿನ್ ಇ.ಎಂ ಪಾಂಡಿಯನ್**
ಡೋರ್ ನಂ. 3683/1ಎ-42, 10ನೇ ಕ್ರಾಸ್, ಆಂಜನೇಯ ಬಡಾವಣೆ, ದಾವಣಗೆರೆ.
20.3.2021

## ಮಾನ್ಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಭದ್ರಾವತಿ

**ಅಮಲ್ಜಾರಿ ನಂ : 113/2019**

ಡಿಕ್ರಿದಾರರು : ಶ್ರೀಮತಿ ಹಾಲಮ್ಮ - ವಿರುದ್ಧ -
ತೀರ್ಪುಋಣಿಗಾರರು : ಸೈಯದ್ ಅಮೀರ್ ಸಾಬ್ ಬಿನ್ ಲೇಟ್ ಸೈಯದ್ ಜಮಾಲ್ ಸಾಬ್, ಸುಮಾರು 59 ವರ್ಷ, ವಾಸ : 6ನೇ ಕ್ರಾಸ್, ಆಜಾದ್ ನಗರ, ದಾವಣಗೆರೆ ನಗರ.

**ಸಾರ್ವಜನಿಕ ಪ್ರಕಟಣೆ**

ಈ ಮೇಲ್ಕಂಡ ಅರ್ಜಿಯನ್ನು ಡಿಕ್ರಿದಾರರು, ತೀರ್ಪುಋಣಿಗಾರರ ವಿರುದ್ಧ ನಿರ್ದಿಷ್ಟ ಪರಿಹಾರ ಕೋರಿ ಸಂಬಂಧ ಮಾನ್ಯ ಮೇಲಿನ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಹೂಡಿದ್ದು, ಮೇಲ್ಕಂಡ ಪ್ರಕರಣದಲ್ಲಿ ನಿಮಗೆ ಸಾಕಷ್ಟು ಬಾರಿ ಮಾನ್ಯ ನ್ಯಾಯಾಲಯದಿಂದ ಸಮನ್ಸ್, ನೋಟಿಸ್‌ಗಳನ್ನು ಕಳುಹಿಸಿದ್ದರೂ ಸಹ ಇದುವರೆವಿಗೂ ತೀರ್ಪುಋಣಿಗಾರರಾದ ನೀವು ಮಾನ್ಯ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ್ದರಿಂದ ತಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ದಿನಾಂಕ : 15.04.2021ರಂದು ಮೇಲೆ ತಿಳಿಸಿದ ನ್ಯಾಯಾಲಯದಲ್ಲಿ ಬೆಳಿಗ್ಗೆ 11.00 ಗಂಟೆಗೆ ಸದರಿ ಪ್ರಕರಣವನ್ನು ಕರೆಸಲಾಗುವುದು. ಸದರಿ ಪ್ರಕರಣದಲ್ಲಿ ತಾವಾಗಲೀ ಅಥವಾ ತಮ್ಮ ಪರ ವಕೀಲರಾಗಲೀ ಖುದ್ದಾಗಿ ಹಾಜರಾಗತಕ್ಕದ್ದು ಮತ್ತು ತಮ್ಮ ತಕರಾರು ಸಲ್ಲಿಸತಕ್ಕದ್ದು. ಒಂದೊಮ್ಮೆ ತಪ್ಪಿದ್ದಲ್ಲಿ ತಮ್ಮ ವಿರುದ್ಧ ನ್ಯಾಯಾಲಯವು ಏಕಪಕ್ಷೀಯ ಆದೇಶ ಮಾಡಲಾಗುತ್ತದೆ ಎಂದು ಈ ಮೂಲಕ ತಿಳಿಯಿರಿ.

ಡಿಕ್ರಿದಾರರ ಪರ ವಕೀಲರು
(ಆಂತೋಣಿ),
ವಕೀಲರು, ಭದ್ರಾವತಿ


ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು,
ಮಾನ್ಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಭದ್ರಾವತಿ.



## ನಗರದ ಗಡಿಯಾರ ಕಂಬದ ಬಳಿಯ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ ವಾರ್ಷಿಕೋತ್ಸವ ಇಂದು

ನಗರದ ಚನ್ನಗಿರಿ ರಂಗಪ್ಪ ಗಡಿಯಾರ ಕಂಬದ ಆವರಣದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ 21ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ ಗುರು ಗಣಪತಿ ಪ್ರಾರ್ಥನೆ, ಪಂಚಾಮೃತ ಅಭಿಷೇಕ ಹಾಗೂ 21 ಕಲಶಾಭಿಷೇಕ, ನವಗ್ರಹ ಹೋಮ ಮತ್ತು ಸಹಸ್ರ ಮೋದಕ ಗಣಪತಿ ಹೋಮದ ನಂತರ ಮಹಾ ಮಂಗಳಾರತಿ, ಮಧ್ಯಾಹ್ನ 2 ಗಂಟೆಗೆ ಪ್ರಸಾದ ವಿತರಣೆ ಏರ್ಪಡಿಸಲಾಗಿದೆ.

## ಇಂದು ರಾಘವೇಂದ್ರ ಶ್ರೀಗಳ ಪಟ್ಟಾಭಿಷೇಕ



ದಾವಣಗೆರೆ : ವಿಶ್ವ ಮಧ್ವ ಮಹಾ ಪರಿಷತ್, ದಾವಣಗೆರೆ ಕೇಂದ್ರದ ಆಶ್ರಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವ ಹಾಗೂ ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 48 ನೇ ವರ್ಧಂತಿ ಉತ್ಸವ ಕಾರ್ಯಕ್ರಮ ಪಿ.ಜೆ. ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಇಂದು ನಡೆಯಲಿದೆ.

ಪ್ರಾತಃಕಾಲ 7 ಕ್ಕೆ ಶ್ರೀ ರಾಘವೇಂದ್ರ ಸ್ತೋತ್ರ, ಅಷ್ಟೋತ್ತರ, ಶತ ಪಾರಾಯಣದ ಮಂಗಳ. ಬೆಳಿಗ್ಗೆ 8.30 ಗಂಟೆಗೆ ಪಂಚಾಮೃತ ಅಭಿಷೇಕ ನಡೆಯಲಿದೆ. ಬೆಳಿಗ್ಗೆ 11 ಕ್ಕೆ ಭಾರತೀ ಭಜನಾ ಮಂಡಳಿ ಸದಸ್ಯರಿಂದ ಭಜನೆ, ಗೋಪಾಲ ಆಚಾರ್ ಅವರಿಂದ ಉಪನ್ಯಾಸ ನಡೆಯುವುದು.


ಭಾರತದ ಅತ್ಯಂತ ವಿಶ್ವಾಸಾರ್ಹ ಸೋಲಾರ್ ಬ್ರಾಂಡ್
Sudarshan Saur
ತಿಂಗಳ ಸುಲಭ ಕಂತುಗಳಲ್ಲಿ ಲಭ್ಯ
ಬುದ್ಧಿವಂತಿಕೆಯ ಆಲೋಚನೆ
10% ಕ್ಯಾಷ್ ಡಿಸ್ಕೌಂಟ್




ದಾವಣಗೆರೆ ಹಾಗೂ ಚಿತ್ರದುರ್ಗ ತಾಲ್ಲೂಕುಗಳಿಗೆ ಡೀಲರ್ಸ್ ಬೇಕಾಗಿದ್ದಾರೆ
PEACE ENTERPRISES
SUPER STOCKIST : DAVANGERE, CHITRADURGA
Ganesh Temple Building, Opp. : Bakkeshwara High School,
Nijalingappa Layout, Davangere. E-mailID : peacedvgmarketing@gmail.com
9880156667, 8310042490, 9901318277




## 50ನೇ ವಿವಾಹ ವಾರ್ಷಿಕೋತ್ಸವದ ಶುಭ ಹಾರೈಕೆಗಳು

### ಶ್ರೀ ಎಂ. ಶಿವಮೂರ್ತಯ್ಯ ಮತ್ತು ಶ್ರೀಮತಿ ಶಾರದಮ್ಮ

ದಂಪತಿಯ ವಿವಾಹ ಮಹೋತ್ಸವದ 50ನೇ ವಾರ್ಷಿಕೋತ್ಸವಕ್ಕೆ ಹೃದಯಪೂರ್ವಕ ಶುಭಾಶಯಗಳು. ಇವರಿಗೆ ಆರೋಗ್ಯ ಭಾಗ್ಯ ಕರುಣಿಸಲೆಂದು ಶುಭ ಹಾರೈಸುವ...

**50ನೇ ವಿವಾಹ ವಾರ್ಷಿಕೋತ್ಸವ ಸಮಾರಂಭ**

ದಿನಾಂಕ : 21.03.2021ರ ಭಾನುವಾರ, ಸಮಯ : ಬೆಳಿಗ್ಗೆ 11 ಕ್ಕೆ
ಸ್ಥಳ : ಶ್ರೀಶೈಲ ಮಠ, ಪಿ.ಬಿ. ರಸ್ತೆ, ದಾವಣಗೆರೆ.

ತಮ್ಮ ಆಗಮನಾಭಿಲಾಷಿಗಳು :

✦ ಶ್ರೀಮತಿ ಎಂ.ಸಿ. ಪುಷ್ಪಾ, ಶ್ರೀ ಚನ್ನಯ್ಯ ಮತ್ತು ತೇಜಸ್ವಿನಿ
✦ ಶ್ರೀಮತಿ ಎಂ.ಕೆ. ಚಂದ್ರಕಲಾ, ಶ್ರೀ ಎಂ.ಎಸ್. ಕುಮಾರಸ್ವಾಮಿ
✦ ದೀಪು, ✦ ಶ್ರೇಯಾ, ತೆರಿಗೆ ಸಲಹೆಗಾರರು, ದಾವಣಗೆರೆ.
ಮೊ. : 94485 93560, 78998 76232, 80882 63560



## ಹೃದಯಪೂರ್ವಕ ಅಭಿನಂದನೆಗಳು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಮೆಂಬರ್ ಆಗಿ ನೇಮಕವಾಗಿರುವ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ದಾವಣಗೆರೆ ಜಿಲ್ಲಾ ಘಟಕದ ಕಾರ್ಯದರ್ಶಿಗಳೂ ಆದ

### ಶ್ರೀ ರಮೇಶ್ ಬಿ.ಜೆ.

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

✦ ಪವಾಡರಂಗವ್ವನಹಳ್ಳಿ ಉಮೇಶ್ ✦ ಎಂ.ಡಿ. ಜಯಕುಮಾರ್ ಶ್ಯಾಗಲೆ
✦ ಅಣಬೇರು ಗಂಗಾಧರ್ ✦ ಎಂ. ನಾಗರಾಜ್ ಟಿ. ನುಲೇನೂರು
✦ ಬಿ.ಎಸ್. ಪ್ರಕಾಶ್ ಬಸ್ತಿಹಳ್ಳಿ ✦ ಜಿ.ಎಸ್ ಮಲ್ಲಿಕಾರ್ಜುನ ಗೋಣಿವಾಡ
✦ ಚೇತನ್ ಪಲ್ಲಾಗಟ್ಟೆ ✦ ಎಂ.ಡಿ. ಶಿವಕುಮಾರ್ ಶ್ಯಾಗಲೆ
✦ ಡಿ. ಪರಮೇಶ್ವರಪ್ಪ ಚಿಕ್ಕವ್ವನಾಗ್ತಿಹಳ್ಳಿ.


## ಭಾಗ್ಯರಂಗ ಚಿಟ್ಸ್ ಪ್ರೈ.ಲಿ., ದಾವಣಗೆರೆ
Bhagya Ranga Chits Pvt. Ltd.
(ಸರ್ಕಾರದಿಂದ ಮಾನ್ಯತೆ ಪಡೆದಿರುತ್ತದೆ)
ಸತ್ಯಸದನ, ಡೋರ್ ನಂ. 990, ಲಾಯರ್ ರಸ್ತೆ, 2ನೇ ಅಂತಸ್ತು, ಕೆ.ಬಿ. ಬಡಾವಣೆ, ದಾವಣಗೆರೆ -2.
ಫೋನ್ : 08192-234858, ಮೊ : 7760815577, 9916959799
ಭಾಗ್ಯರಂಗ ಚಿಟ್ಸ್ ನಿಮಗಾಗಿ ತನ್ನ ವಿವಿಧ ಚಿಟ್ ಸಮೂಹಗಳ ವಿಸ್ತೃತ ವ್ಯಾಪ್ತಿಯ ಮೂಲಕ ಹಣದ ಅತ್ಯಮೂಲ್ಯ ಉಳಿತಾಯ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ನೀಡುತ್ತದೆ.
ರೂ. 50 ಸಾವಿರದಿಂದ 50 ಲಕ್ಷದ ವರೆಗಿನ ಚೀಟಿಗಳು ಲಭ್ಯ,
ರೂ. 2000 ರಿಂದ 1 ಲಕ್ಷದ ವರೆಗೆ ಮಾಸಿಕ ಕಂತಿನಲ್ಲಿ
ನಿಮ್ಮ ಉಳಿತಾಯದಿಂದ ನಿಮಗೆ ಭಾಗ್ಯ, ನಿಮ್ಮ ಭಾಗ್ಯಕ್ಕೆ ಭಾಗ್ಯರಂಗ ಚಿಟ್ಸ್‌ರಿಂದ ಭದ್ರತೆ, ಸುರಕ್ಷತೆ ಖಾತರಿ
ಭಾಗ್ಯರಂಗ ಚಿಟ್ಸ್‌ನೊಂದಿಗೆ ಯೋಚಿಸಿದಾಗ ಜೀವನ ಸರಳ
ಹೊಸ ಗ್ರೂಪ್‌ಗಳು ಪ್ರಾರಂಭವಾಗುತ್ತಿವೆ ಸಂಪರ್ಕಿಸಿ.
ಬಿಸಿನೆಸ್ ಡೆವಲಪ್‌ಮೆಂಟ್ ಆಫೀಸರ್ ಮತ್ತು ಕಲೆಕ್ಷನ್ ಅಸಿಸ್ಟೆಂಟ್ ಬೇಕಾಗಿದ್ದಾರೆ.
ವಿದ್ಯಾರ್ಹತೆ : ಕನಿಷ್ಠ ಎಸ್.ಎಸ್.ಎಲ್.ಸಿ., ತಮ್ಮ ಸ್ವವಿವರದೊಂದಿಗೆ ಸಂಪರ್ಕಿಸಿ


## ಚಿರಸ್ಮರಣೆ



### ದಿ|| ಶ್ರೀ ಮಲ್ಲಿಕಾರ್ಜುನಯ್ಯ ಟಿ.ಎಂ.

K.E.B. ನಿಟ್ಟುವಳ್ಳಿ, ದಾವಣಗೆರೆ.
ಜನನ : 15.7.1953, ಮರಣ : 21.3.2001

ನೀವು ನಮ್ಮನ್ನಗಲಿ ಇಂದಿಗೆ 21 ವರ್ಷಗಳಾದವು... ನಿಮ್ಮ ನೆನಪುಗಳೇ ನಮಗೆ ದಾರಿದೀಪವಾಗಿವೆ. ಸದಾ ನಿಮ್ಮ ಸ್ಮರಣೆಯಲ್ಲಿ ಮುನ್ನಡೆಯುತ್ತಿರುವ...

ಪತ್ನಿ: ದ್ರಾಕ್ಷಾಯಣಮ್ಮ, ಹಿರಿಯ ಮಗ:ಜೀವರಾಜಯ್ಯ ಟಿ.ಎಂ., ಬೆಸ್ಕಾಂ ಸೊಸೆ:ದೀಪಾ ಟಿ.ಎಂ., ಮಗಳು : ರಾಜೇಶ್ವರಿ ಟಿ.ಎಂ., ಅಳಿಯ : ಉಮೇಶ್, ಕೆಎಸ್‌ಆರ್‌ಟಿಸಿ, ಕಿರಿಯ ಮಗ : ಶಾಂತಯ್ಯ ಟಿ.ಎಂ., ಸೊಸೆ : ಮೇಘಾ ಟಿ.ಎಂ., ಕಿರಿಯ ಮಗ : ಶಿವಯ್ಯ ಟಿ.ಎಂ., ಸೊಸೆ : ರಂಜಿತಾ ಟಿ.ಎಂ., ಮೊಮ್ಮಕ್ಕಳಾದ : ಕಾರ್ತಿಕ್, ಕಾಂಚನ, ದುರ್ಗಾಶ್ರೀ, ಸೋಮಶೇಖರ್, ಸಿದ್ಧಾಂತ್, ತೇಜಸ್, ಅಮೃತಾ ಮತ್ತು ಕುಟುಂಬ ವರ್ಗ, ಲಿಂಗಾಯತರ ಕೋಟೆ, ನಿಟ್ಟುವಳ್ಳಿ, ದಾವಣಗೆರೆ.

|| ಶ್ರೀ ಚಿಗಟೇರಿ ನಾರದಮುನಿ ಪ್ರಸನ್ನ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು, ಎಲೆಬೇತೂರು ಗ್ರಾಮದ ನಿವಾಸಿ
ಲಿಂ|| ಶ್ರೀ ಹನಗವಾಡಿ ನಾರಪ್ಪನವರ ಧರ್ಮಪತ್ನಿ
ಶ್ರೀಮತಿ ಕಮಲಮ್ಮ ಮತ್ತು ಮಕ್ಕಳು.
ಇವರುಗಳು ಮಾಡುವ ವಿಜ್ಞಾಪನೆಗಳು.

ದಿನಾಂಕ : 14.03.2021ನೇ ಭಾನುವಾರ ಬೆಳಿಗ್ಗೆ 7.05ಕ್ಕೆ ನನ್ನ ಪೂಜ್ಯ ಪತಿಯವರಾದ

### ಶರಣ ಹನಗವಾಡಿ ನಾರಪ್ಪನವರು

(ಜನನ : 05.05.1940, ನಿಧನ : 14.03.2021)
ನಿವೃತ್ತ ಡೆಪ್ಯೂಟಿ ಲೀಡರ್, ಕಿರ್ಲೋಸ್ಕರ್, ಹರಿಹರ.
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 22.03.2021ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಈಶ್ವರ-ಪಾರ್ವತಿ ಗಣಪತಿ ದೇವಸ್ಥಾನ, 2ನೇ ಬಸ್‌ಸ್ಟಾಪ್, ವಿದ್ಯಾನಗರ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರಾದ :

ಶ್ರೀಮತಿ ಹನಗವಾಡಿ ಕಮಲಮ್ಮ, ದಿ|| ನಾರಪ್ಪನವರ ಸಹೋದರರು, ಸಹೋದರಿಯರು ಹೆಚ್. ವೀರಪ್ಪ, ದಿ.ಲಲಿತಮ್ಮ, ಹೆಚ್.ಎಂ. ನಾಗರಾಜ್
ಮತ್ತು ಮಕ್ಕಳಾದ : ಮಂಜುಳ ಹೆಚ್.ಎನ್. & ಷಣ್ಮುಖಪ್ಪ, ರೇಖಾ ಹೆಚ್.ಎನ್. & ಮಲ್ಲಿಕಾರ್ಜುನ್, ಸೌಮ್ಯ ಕೆ.ಜೆ. & ಪ್ರಸನ್ನ ಕುಮಾರ್ ಹೆಚ್.ಎನ್., ರೂಪ ಹೆಚ್.ಎನ್., ಉಷಾ ಹೆಚ್.ಎನ್. ಮತ್ತು ಸಂತೋಷ್
ಮೊಮ್ಮಕ್ಕಳಾದ: ರಾಹುಲ್, ಕಾರ್ತಿಕ್, ಕಾವ್ಯ, ಸಾನ್ವಿಕಾ ಹನಗವಾಡಿ, ಮತ್ತು ಹನಗವಾಡಿ ವಂಶಸ್ಥರು, ಎಲೆಬೇತೂರು. ಬಂಧು-ಮಿತ್ರರು ಹಾಗೂ ಗ್ರಾಮಸ್ಥರು, ಫೋ. : 99455 94176

ವಿ.ಸೂ. ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.





## ಶ್ರೀ ಎಸ್.ಎ. ರವೀಂದ್ರನಾಥ್, ಮಾನ್ಯ ಶಾಸಕರು ಅವರ ಶಿಫಾರಸ್ಸಿನ ಮೇರೆಗೆ

### ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳಲಾದ 17 ಕೋಟಿ ರೂ. ಕಾಮಗಾರಿಗಳ ಗುದ್ದಲಿ ಪೂಜೆ ಹಾಗೂ ಉದ್ಘಾಟನೆ

ದಿನಾಂಕ 21.03.2021ರ ಭಾನುವಾರ, ಸಮಯ : ಬೆಳಿಗ್ಗೆ 11.30 ಕ್ಕೆ, ಸ್ಥಳ : ದೊಡ್ಡಬಾತಿ





**ಕಾಮಗಾರಿಗಳ ವಿವರ :**

1) ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದ ಹಳೇ ಪಿ.ಬಿ ರಸ್ತೆಯಿಂದ ಪಬ್ಲಿಕ್ ಮಂದಾರ ಶಾಲೆ ಮುಖಾಂತರ ಭದ್ರಾ ಶುಗರ್ ಫ್ಯಾಕ್ಟರಿ ರಸ್ತೆಗೆ ಕೂಡುವ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
2) ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದಿಂದ ರಾಂಪುರಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
3) ದಾವಣಗೆರೆ ತಾಲ್ಲೂಕು ಬಸವನಾಳು ಗ್ರಾಮದ ಗೊಲ್ಲರಹಟ್ಟಿಯಿಂದ ಚಾನಲ್ ರಸ್ತೆ ಮುಖಾಂತರ ಲಿಂಗದಹಳ್ಳಿಗೆ ಹೋಗುವ ರಸ್ತೆ ಅಭಿವೃದ್ದಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
4) ದಾವಣಗೆರೆ ತಾಲ್ಲೂಕು ಕೋಡಿಹಳ್ಳಿ ಆಶ್ರಯ ಕಾಲೋನಿಯಿಂದ ಗಂಗನರಸಿ ಗಡಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
5) ದಾವಣಗೆರೆ ತಾಲ್ಲೂಕು ಆವರಗೊಳ್ಳ ಗ್ರಾಮದಿಂದ ಬಾತಿ ಕೆರೆ ಚಾನಲ್ ರಸ್ತೆ ಮುಖಾಂತರ ಕಕ್ಕರಗೊಳ್ಳಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
6) ದಾವಣಗೆರೆ ತಾಲ್ಲೂಕು ದೊಡ್ಡ ಓಬಜ್ಜಿಹಳ್ಳಿ ಕೊಂಡಜ್ಜಿ ರಸ್ತೆಯಿಂದ ಬದಿಯಾನಾಯ್ಕನ ತಾಂಡಾಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 40.00 ಲಕ್ಷಗಳು)
7) ದಾವಣಗೆರೆ ತಾಲ್ಲೂಕು ಬಿ.ಕಲ್ಪನಹಳ್ಳಿ ಅಮೃತನಗರ ಪುಟಗನಾಳು ರಸ್ತೆಗೆ ಕೂಡುವ ರಸ್ತೆ ಅಭಿವೃದ್ದಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
8) ದಾವಣಗೆರೆ ತಾಲ್ಲೂಕು ಕಕ್ಕರಗೊಳ್ಳ-ಕೋಡಿಹಳ್ಳಿ ರಸ್ತೆಯಿಂದ ಚಾನಲ್ ರಸ್ತೆ ಮುಖಾಂತರ ಗಂಗನರಸಿಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
9) ದಾವಣಗೆರೆ ಜಿಲ್ಲಾ ಪಂಚಾಯತಿ ಆವರಣದಲ್ಲಿ ದುರಸ್ತಿ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 95.00 ಲಕ್ಷಗಳು)
10) ದಾವಣಗೆರೆ ತಾಲ್ಲೂಕು ಹದಡಿ ರಸ್ತೆಯಿಂದ ಶಿರಮಗೊಂಡನಹಳ್ಳಿ ಚಾನಲ್‌ಗೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 65.00 ಲಕ್ಷಗಳು)
11) ದಾವಣಗೆರೆ ತಾಲ್ಲೂಕು ದೊಡ್ಡಬಾತಿ-ಹಳೇಬಾತಿ ಮುಖ್ಯ ರಸ್ತೆಯಿಂದ ಚಾನಲ್ ರಸ್ತೆ ಮುಖಾಂತರ ಹಳೇ ಕುಂದುವಾಡಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ. (ಅಂದಾಜು ಮೊತ್ತ ರೂ. 50.00 ಲಕ್ಷಗಳು)
12) ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ನಿರ್ಮಿಸಿರುವ ಸರ್ಕಾರಿ ಪ್ರೌಢ ಹಾಗೂ ಪ್ರಾಥಮಿಕ ಮತ್ತು ಉರ್ದು ಪ್ರಾಥಮಿಕ ಶಾಲಾ ಕೊಠಡಿಗಳ ಉದ್ಘಾಟನೆ. (ಅಂದಾಜು ಮೊತ್ತ ರೂ. 59.50 ಲಕ್ಷಗಳು)
13) ದಾವಣಗೆರೆ ತಾಲ್ಲೂಕು ಕಾಡಜ್ಜಿ ಗ್ರಾಮದಲ್ಲಿ ನಿರ್ಮಿಸಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕೊಠಡಿಗಳ ಉದ್ಘಾಟನೆ. (ಅಂದಾಜು ಮೊತ್ತ ರೂ. 21.00 ಲಕ್ಷಗಳು)
14) ದಾವಣಗೆರೆ ತಾಲ್ಲೂಕು ಬಸವನಾಳು-ಗೊಲ್ಲರಹಟ್ಟಿ ಗ್ರಾಮದಲ್ಲಿ ನಿರ್ಮಿಸಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಕೊಠಡಿಗಳ ಉದ್ಘಾಟನೆ. (ಅಂದಾಜು ಮೊತ್ತ ರೂ. 32.00 ಲಕ್ಷಗಳು)

**ದಾವಣಗೆರೆ ತಾಲ್ಲೂಕು ಬೀರೂರು-ಸಮ್ಮಸಗಿ ರಾಜ್ಯ ಹೆದ್ದಾರಿ-76 ರಸ್ತೆಯ ಕಿ.ಮೀ. 114.80 ರಿಂದ 120.50 ರವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ**

**(ದಾವಣಗೆರೆ – ಹರಿಹರ ಪಿ.ಬಿ. ರಸ್ತೆ ಅಭಿವೃದ್ಧಿ ಕಾಮಗಾರಿ)**

ಲೆಕ್ಕಶೀರ್ಷಿಕೆ : 5054 ರಾಜ್ಯ ಹೆದ್ದಾರಿ ಅಭಿವೃದ್ಧಿ, ಅಂದಾಜು ಮೊತ್ತ : ರೂ. 988.00 ಲಕ್ಷಗಳು.

ಈ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಈ ಭಾಗದ ಎಲ್ಲಾ ಜನ ಪ್ರತಿನಿಧಿಗಳಿಗೂ, ಅಧಿಕಾರಿ ವರ್ಗದವರಿಗೂ, ಅಭಿಮಾನಿಗಳಿಗೂ ಹಾಗೂ ಗ್ರಾಮಸ್ಥರಿಗೂ ಸರ್ವರಿಗೂ ಹೃತ್ಪೂರ್ವಕ ಸುಸ್ವಾಗತ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte